ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 14 ಶನಿವಾರ 2022

ಸಂಪುಟ: 43 | ಸಂಚಿಕೆ: 28 | ಪುಟಗಳು: 10 | ₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೊದಲನೇ ವರ್ಷದ ಪುಣ್ಯಸ್ಮರಣೆ




ಜನನ 15.05.1964 | ಮರಣ 14.05.2021

ಪುಟ್ಟಸ್ವಾಮಿ. ಸಿ
(ತೋಟಗಾರಿಕೆ ಇಲಾಖೆ)
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ತಾಯಿ–ಸಣ್ಣಮ್ಮ, ಪತ್ನಿ– ಪುಟ್ಟನಂಜಮ್ಮ, ಮಗಳು– ಕವಿತ ರವೀಶ್ ಗೌಡ, ಮಗ–ಲೋಹಿತ್.ಪಿ, ಸೊಸೆ–ಕಾವ್ಯ, ಮೊಮ್ಮಕ್ಕಳು – ಶ್ರೇಯ, ಸಚಿನ್ ನೃಪತುಂಗ, ಜನತಾನಗರ, ಮೈಸೂರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪುನರ್ ನಿರ್ಮಾಣ ಸಂಬಂಧ

ಪ್ರಮೋದಾದೇವಿ ಒಡೆಯರ್ ಬಳಿ ಶಾಸಕ ನಾಗೇಂದ್ರ ಚರ್ಚೆ



ಮೈಸೂರು, ಮೇ 13 (ಆರ್‌ಕೆ)– ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳ ಪುನರ್ ನಿರ್ಮಾಣ ಕುರಿತಂತೆ ಶಾಸಕ ಎಲ್. ನಾಗೇಂದ್ರ ಅವರು ಇಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಅರ ಮನೆಯ ನಿವಾಸದಲ್ಲಿ ಭೇಟಿ ಮಾಡಿ ಚರ್ಚಿಸಿದರು.

ಈ ಎರಡೂ ಕಟ್ಟಡಗಳ ಜೀರ್ಣೋದ್ಧಾರ, ಅಭಿವೃದ್ಧಿ, ದುರಸ್ತಿ ಇಲ್ಲವೇ ಪಾರಂಪರಿಕ ಶೈಲಿಯಲ್ಲಿ ಪುನರ್ ನಿರ್ಮಾಣ ಮಾಡುವ ಸಂಬಂಧ ಈಗಾಗಲೇ ಟಾಸ್ಕ್‌ಫೋರ್ಸ್ ಸಮಿತಿ, ಪಾರಂಪರಿಕ ತಜ್ಞರ ಸಮಿತಿ, ವಿಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದಾಗಲೇ ಎರಡೂ ಕಟ್ಟಡಗಳ ಕೆಲ ಭಾಗ ಕುಸಿದಿದ್ದು, ಉಳಿದ ಭಾಗವೂ ಶಿಥಿಲಗೊಂಡಿರುವುದರಿಂದ ನೆಲಸಮಗೊಳಿಸಿ ಯಥಾವತ್ತಾಗಿ ಹೊಸದಾಗಿ ನಿರ್ಮಿಸುವಂತೆ ಮೈಸೂರು ನಗರಪಾಲಿಕೆ ಕೌನ್ಸಿಲ್ ಸಭೆ ನಿರ್ಣಯಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕರು ವಿವರಿಸಿದರು.

ಈ ಬಗ್ಗೆ ಮಹಾನಗರ ಪಾಲಿಕೆ ಆಯುಕ್ತ ಜೆ.ಲಕ್ಷ್ಮೀಕಾಂತರೆಡ್ಡಿ ಅವರು ಪ್ರಮೋದಾದೇವಿ ಒಡೆಯರ್ ಅವರಿಗೆ ಸಂಪೂರ್ಣ ಮಾಹಿತಿ ನೀಡಿ ದಾಖಲಾತಿಗಳೊಂದಿಗೆ ಕಟ್ಟಡಗಳ ವಸ್ತು ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರು. ನಂತರ ಪ್ರತಿಕ್ರಿಯಿಸಿದ ಪ್ರಮೋದಾದೇವಿ ಒಡೆಯರ್, ನುರಿತ ಪಾರಂಪರಿಕ ತಜ್ಞರೊಂದಿಗೆ ಚರ್ಚಿಸಿ, 15 ದಿನದೊಳಗೆ ತಮ್ಮ ಅಭಿಪ್ರಾಯ ತಿಳಿಸುವುದಾಗಿ ಹೇಳಿದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಪಾಲಿಕೆ ವಲಯ ಕಚೇರಿ –6ರ ವಲಯಾಧಿಕಾರಿ ಮಂಜುನಾಥ್, ಇಂಜಿನಿಯರ್, ಕವಿತಾ ಸೇರಿದಂತೆ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಿನ ರಾಮಕೃಷ್ಣನಗರ ಹೆಚ್. ಬ್ಲಾಕ್ (ಆರೋಗ್ಯ ನಗರ)ನಲ್ಲಿ ನಂದಿನಿ ಹಾಲಿನ ಮಾರಾಟ ಮಳಿಗೆಯನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್, ಮಾರುಕಟ್ಟೆ ವ್ಯವಸ್ಥಾಪಕರಾದ ಶಂಕರ್, ಫಣೀಶ್, ಏರಿಯಾ ಸೂಪರ್‌ವೈಸರ್ ಮನೋಜ್, ಬಿಜೆಪಿ ಮುಖಂಡ ಕೂಡ್ಲೂರು ಶ್ರೀಧರಮೂರ್ತಿ ಇನ್ನಿತರರನ್ನು ಕಾಣಬಹುದು.

ವಿದ್ಯಾರ್ಥಿನಿಗೆ ಆಸಿಡ್ ಹಾಕುವ ಬೆದರಿಕೆ

ಮೈಸೂರು, ಮೇ 13– ಎಂಬಿಎ ವಿದ್ಯಾರ್ಥಿನಿಯನ್ನು ತನ್ನ ಜೊತೆ ಕಳುಹಿಸದಿದ್ದರೆ ಆಕೆಗೆ ಆಸಿಡ್ ಹಾಕುವುದಾಗಿ ವಿವಾಹಿತ ವ್ಯಕ್ತಿಯೋರ್ವ ವಿದ್ಯಾರ್ಥಿನಿಯ ತಂದೆಗೆ ಬೆದರಿಸಿ, ಹಲ್ಲೆ ನಡೆಸಿದ ಘಟನೆ ಮೈಸೂರಿನ ಗಾಯತ್ರಿಪುರಂನಲ್ಲಿ ನಡೆದಿದೆ.

ವಿವರ: ಮೈಸೂರಿನ ಟೀಚರ್ಸ್ ಲೇಔಟ್ ನಿವಾಸಿ ಶ್ರೇಯಸ್ (32) ಎಂಬಾತನೇ ವಿದ್ಯಾರ್ಥಿನಿಗೆ ಆಸಿಡ್ ಹಾಕುವುದಾಗಿ ಬೆದರಿಸಿದವನಾಗಿದ್ದು, ಕಳೆದ 4 ವರ್ಷದ ಹಿಂದೆ ರಾಜಕುಮಾರ್ ರಸ್ತೆಯಲ್ಲಿರುವ ಜಿಮ್‌ಗೆ ವಿದ್ಯಾರ್ಥಿನಿ ಹೋಗುತ್ತಿದ್ದಾಗ ಅಲ್ಲಿ ಪರಿಚಯವಾದ ಶ್ರೇಯಸ್ ಆಕೆಯೊಂದಿಗೆ ಸಲುಗೆಯಿಂದ ನಡೆದುಕೊಂಡಿದ್ದಾನೆ. ಕೆಲ ದಿನಗಳ ನಂತರ ಆತ ಅತಿರೇಕದಿಂದ ವರ್ತಿಸಿದ ಕಾರಣ ವಿದ್ಯಾರ್ಥಿನಿ ಆತನ ಸಂಪರ್ಕವನ್ನು ಕಡಿದುಕೊಂಡಿದ್ದಾಳೆ. ಆದರೂ ಸ್ನೇಹ ಮುಂದುವರೆಸಬೇಕೆಂದು, ಇಲ್ಲದಿದ್ದರೆ ಕಾಲೇಜು ಹಾಗೂ ಮನೆಯ ಹತ್ತಿರ ಬಂದು ಗಲಾಟೆ ಮಾಡುವುದಾಗಿ ಬೆದರಿಸಿದ ಕಾರಣ ಶ್ರೇಯಸ್ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ಆಗ ದೂರು ಸಲ್ಲಿಸಿದ್ದು, ಪೊಲೀಸರು ಆತನನ್ನು ಕರೆದು ಬುದ್ಧಿವಾದ ಹೇಳಿ, ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಮೇ 11ರಂದು ರಾತ್ರಿ 12 ಗಂಟೆ ಸುಮಾರಿನಲ್ಲಿ ಗಾಯತ್ರಿಪುರಂನಲ್ಲಿರುವ ವಿದ್ಯಾರ್ಥಿನಿಯ ಮನೆಗೆ ಬಂದ ಶ್ರೇಯಸ್ ಆಕೆಯ ತಂದೆಯ ಜೊತೆ ಗಲಾಟೆ ಮಾಡಿ ವಿದ್ಯಾರ್ಥಿನಿಯನ್ನು ತನ್ನ ಜೊತೆ ಕಳುಹಿಸಬೇಕೆಂದು ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಒಂದು ವೇಳೆ ವಿದ್ಯಾರ್ಥಿನಿಯನ್ನು ಕಳುಹಿಸದಿದ್ದಲ್ಲಿ ಆಕೆಗೆ ಆಸಿಡ್ ಹಾಕುವುದಾಗಿ ಬೆದರಿಸಿದ್ದಾನೆ ಎಂದು ವಿದ್ಯಾರ್ಥಿನಿ ತಂದೆ ದೂರು ಆಧರಿಸಿ ಭಾರತೀಯ ದಂಡ ಸಂಹಿತೆ 323, 354, 504, 506 ರಂತೆ ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮದುವೆ ದಿನವೇ ವಧುವಿನ ಮನೆಯಲ್ಲಿ 3.75 ಲಕ್ಷದ ಆಭರಣ ಕಳವು

ಬೆಟ್ಟದಪುರ, ಮೇ 13– ಮದುವೆ ದಿನವೇ ಮದುಮಗಳ ಮನೆಯಲ್ಲಿ 3.75 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ದೇವಿನಗರ ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ರೈತ ಶಂಕರಶೆಟ್ಟಿ ಅವರು ಪುತ್ರಿಯ ವಿವಾಹ ಬೆಟ್ಟದಪುರದ ಚಂದ್ರಶೇಖರ ಕಲ್ಯಾಣ ಮಂಟಪದಲ್ಲಿ ಮೇ 10 ಮತ್ತು 11ರಂದು ಏರ್ಪಡಿಸಲಾಗಿತ್ತು ಮೇ 10ರಂದು ರಾತ್ರಿ ಆರತಕ್ಷತೆ ಮುಗಿದ ನಂತರ ಮನೆಗೆ ತೆರಳಿದ ಮದುಮಗಳು ತಾನು ಧರಿಸಿದ್ದ ಚಿನ್ನಾಭರಣಗಳನ್ನು ಮನೆಯ ಬೀರುವಿನಲ್ಲಿ ಇಟ್ಟಿದ್ದರು. ಮರುದಿನ ಧಾರಾ ಮುಹೂರ್ತ ಸಮಯದಲ್ಲಿ ಆಕೆ ಆರ್ಟಿ ಫಿಶಿಯಲ್ ಒಡವೆಗಳನ್ನು ಧರಿಸಿದ್ದು, ಧಾರಾ ಮುಹೂರ್ತ ಮುಗಿದ ನಂತರ ಮಧ್ಯಾಹ್ನ 3 ಗಂಟೆಗೆ ಮನೆಗೆ ಹಿಂದಿರುಗಿದಾಗ ಮನೆಯ ಬಾಗಿಲು ತೆರೆದಿತ್ತು. ಬಾಗಿಲಿಗೆ ಹೊಂದಿಕೊಂಡ ಂತಿರುವ ಕಿಟಕಿಯ ಮೂಲಕ ಖದೀಮರು ಬಾಗಿಲ ಚಿಲಕ ವನ್ನು ತೆಗೆದು ಮನೆಗೆ ನುಗ್ಗಿ ಬೀರುವಿನಲ್ಲಿದ್ದ 9 ಗ್ರಾಂ ತೂಕದ ಚಿನ್ನದ ಓಲೆ, 3 ಗ್ರಾಂನ ಚಿನ್ನದ ಗುಂಡು, 15 ಗ್ರಾಂನ ಓಲೆ, ಜುಮ್ಕಿ, 8 ಗ್ರಾಂನ ಚಿನ್ನದ ಓಲೆ ಮತ್ತು ಹ್ಯಾಂಗಿಂಗ್ಸ್, 25 ಗ್ರಾಂನ ನೆಕ್ಲೆಸ್, 4 ಗ್ರಾಂನ ಚಿನ್ನದ ಗುಂಡು ಡ್ರಾಪ್ಸ್, 10 ಗ್ರಾಂನ ಚಿನ್ನದ ಓಲೆ, 8 ಗ್ರಾಂನ ಮಾಟಿ, 3 ಗ್ರಾಂನ 2 ಚಿನ್ನದ ಕಾಸು ಸೇರಿದಂತೆ ಒಟ್ಟು 3.75 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಕಳವು ಮಾಡಿದ್ದಾರೆ. ಶಂಕರಶೆಟ್ಟಿ ನೀಡಿದ ದೂರನ್ನು ದಾಖಲಿಸಿ ಕೊಂಡಿರುವ ಬೆಟ್ಟದಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ದೆಹಲಿಯಲ್ಲಿ ಭಾರೀ ಅಗ್ನಿ ದುರಂತ

27 ಮಂದಿ ಸಜೀವ ದಹನ

ನವದೆಹಲಿ, ಮೇ 13– ಪಶ್ಚಿಮ ದೆಹಲಿಯ ಮುಂಡ್ಕಾ ಮೆಟ್ರೋ ನಿಲ್ದಾಣದ ಸಮೀಪವಿರುವ ಕಟ್ಟಡದಲ್ಲಿ ಇಂದು ಭಾರೀ ಅಗ್ನಿ ಅವಘಡ ಸಂಭವಿಸಿದೆ. ಸಂಜೆ 4.40ರ ವೇಳೆಗೆ ಬೆಂಕಿ ಹೊತ್ತಿಕೊಂಡ ಬಗ್ಗೆ ಮಾಹಿತಿ ಲಭಿಸಿದ್ದು, 24 ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿವೆ ಬೆಂಕಿ ನಂದಿಸುವ ಕಾರ್ಯ ನಡೆಯುತ್ತಿದೆ. ಇಲ್ಲಿಯವರೆಗೂ 27 ಮಂದಿ ಸಾವನ್ನಪ್ಪಿದ್ದು ಹಲವರಿಗೆ ಗಂಭೀರ ಸುಟ್ಟ ಗಾಯಗಳಾಗಿವೆ.

ಮುಂಡ್ಕಾ ಮೆಟ್ರೋ ನಿಲ್ದಾಣದ ಪಿಲ್ಲರ್ ಸಂಖ್ಯೆ 544ರ ಸಮೀಪವಿರುವ ಮೂರು ಮಹಡಿಯ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಇನ್ನು ಅಗ್ನಿ ಅವಘಡದಲ್ಲಿ ಕನಿಷ್ಠ 27 ಮಂದಿ ಸಜೀವ ದಹನವಾಗಿದ್ದು ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ.

ಸುಮಾರು 60–70 ಮಂದಿಯನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದು ಇನ್ನು ಹಲವು ಕಟ್ಟಡದೊಳಗೆ ಸಿಲುಕಿಕೊಂಡಿದ್ದಾರೆ ಎಂದು ಅಗ್ನಿಶಾಮಕ ಸಿಬ್ಬಂದಿಗಳು ತಿಳಿಸಿದ್ದಾರೆ. ದೆಹಲಿಯ ಮುಂಡ್ಕಾ ಮೆಟ್ರೋ ನಿಲ್ದಾಣದ ಬಳಿಯ ಕಟ್ಟಡದಲ್ಲಿ ಸಂಭವಿಸಿದ ಭೀಕರ ಅಗ್ನಿ ಅವಘಡದಿಂದ ಆತಂಕವಾಗಿದೆ. ಇದೊಂದು ದುರದೃಷ್ಟಕರ ಘಟನೆಯಾಗಿದ್ದು ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತಿದ್ದು, ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ.

ಶಕ್ತಿ, ಅರ್ಥ, ಸ್ವರೂಪ ಕಳೆದುಕೊಳ್ಳುತ್ತಿರುವ ಚಳವಳಿಗಳು

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಕೃಷ್ಣಮೂರ್ತಿ ವಿಷಾದ

ಮೈಸೂರು, ಮೇ 13(ಎಂಟಿವೈ)– ಹಲವು ಕಾರಣಗಳಿಂದ ಚಳವಳಿಗಳು ಶಕ್ತಿ, ಅರ್ಥ ಮತ್ತು ಸ್ವರೂಪ ಕಳೆದುಕೊಂಡಿವೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕರ ಪ.ರಾ. ಕೃಷ್ಣಮೂರ್ತಿ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಆಯೋಜಿಸಿರುವ 2 ದಿನಗಳ ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ವಿದ್ಯಾರ್ಥಿ ಸಂಸ್ಕೃತಿ ಚಳವಳಿ– 3 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಹಿಂದೆ ನಡೆಯುತ್ತಿದ್ದ ಚಳವಳಿಗೂ ಇಂದು ನಡೆಯುತ್ತಿರುವ ಚಳವಳಿಗಳು ಬಹಳಷ್ಟು ವ್ಯತ್ಯಾಸವಿದೆ ಎಂದರು.

ಇಂದಿನ ಚಳವಳಿಗಳು ತನ್ನ ಮೂಲ ಸ್ವರೂಪ ಹಾಗೂ ಅರ್ಥವನ್ನೂ ಕಳೆದುಕೊಂಡಿವೆ. ಕಲ್ಲು ಎಸೆಯುವುದು, ಕತ್ತಿ ಮಸೆಯುವುದು, ಬೆಂಕಿ ಹಚ್ಚುವುದು, ಅನ್ಯಾಯ, ಅತ್ಯಾಚಾರ ಮಾಡುವುದೇ ಚಳವಳಿ ಸ್ವರೂಪವಾಗುತ್ತಿದೆ. ಇದರಿಂದ ಇಂದಿನ ಚಳವಳಿ ಎಂದರೆ ಜನರು ಭಯಭೀತರಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಚಳವಳಿಗೆ ಒಳ್ಳೆಯ ಇತಿಹಾಸ ಹಾಗೂ ದೊಡ್ಡ ಪರಂಪರೆಯಿದೆ. ದೇಶದಲ್ಲಿ ಭಕ್ತಿ ಚಳವಳಿ, ಅಹಿಂಸಾ ಚಳವಳಿ, ದೇಶ, ಸಂಸ್ಕೃತಿ ಕಟ್ಟಲು ಅನೇಕ ಚಳವಳಿಗಳು ನಡೆದಿವೆ. ಅವು ನಮಗೆ ಮಾದರಿಯಬೇಕು ಎಂದು ಅವರು ತಿಳಿಸಿದರು.

ಸಂಸ್ಕೃತಿ ನಿರ್ಮಾಣಕ್ಕೆ ಎಬಿವಿಪಿ ಚಳವಳಿ ಪ್ರಾರಂಭಿಸಿರುವುದು ಸಂತಸದ ವಿಚಾರ. ಸಮಾಜಕ್ಕೆ ಶಕ್ತಿ ಬರುವುದೇ ಸಂಸ್ಕೃತಿಯಿಂದ. ಸಂಸ್ಕೃತಿ ಇಲ್ಲದ ಸಮಾಜ ಶವದಂತಾಗುತ್ತದೆ. ಸಂಸ್ಕೃತಿ ಇಲ್ಲದೆ ಇದ್ದರೆ ಉತ್ತಮ ದೇಶ ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲ. ಈ ಹಿಂದೆ ದೇಶ, ಸಮಾಜ ಕಟ್ಟಲು ಚಳವಳಿ ನಡೆಯುತ್ತಿದ್ದವು. ಚಳವಳಿಯನ್ನು ಒಳ್ಳೆಯ ವಿಷಯಕ್ಕೆ, ಉತ್ತಮ ಸಮಾಜ ನಿರ್ಮಾಣಕ್ಕಾಗಿ ನಡೆಸಬೇಕು. ಇಂತಹ ಸಂಸ್ಕೃತಿಯಿಂದ ಸಮಾಜಕ್ಕೆ ಶಕ್ತಿ ಬರುತ್ತದೆ. ಆದರೆ, ಕೆಲವು ದೇಶಗಳಲ್ಲಿ ಸಮಾಜ, ಸಂಸ್ಕೃತಿ, ಜೀವವೇ ಇಲ್ಲವಾಗಿದೆ. ಯಾವುದೇ ಒಂದು ಸಮಾಜಕ್ಕೆ ಸಂಸ್ಕೃತಿ ಬಹುಮುಖ್ಯವಾಗಿದ್ದು, ಒಂದು ವೇಳೆ ಅದು ಇಲ್ಲವಾದರೆ ಆ ಸಮಾಜವನ್ನು ಊಹಿಸಿಕೊಳ್ಳಲು ಅಸಾಧ್ಯ ಎಂದು ಕೃಷ್ಣಮೂರ್ತಿ ಹೇಳಿದರು.



ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ನಡೆದ ಎಬಿವಿಯ ವಿದ್ಯಾರ್ಥಿ ಸಂಸ್ಕೃತಿ ಚಳವಳಿ– 3 ಕಾರ್ಯಕ್ರಮದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶಿಸಿದ ವಿದ್ಯಾರ್ಥಿನಿಯರು

ಒಂದು ದೇಶದ ಕಲೆಗಳು ಆ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಅವುಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಯುವ ಸಮುದಾಯದ ಮೇಲಿದೆ. ಈ ಜವಾಬ್ದಾರಿಯನ್ನು ಹೊರದವರು ಯುವಕರೆನ್ನಿಸಿಕೊಳ್ಳಲಾರರು. ಯೌವ್ವನದಲ್ಲೇ ಸಾಧನೆ, ಒಳ್ಳೆಯ ವ್ಯಕ್ತಿತ್ವ ಕಟ್ಟಿಕೊಳ್ಳಬೇಕು. ಕಲೆಯು ವ್ಯಕ್ತಿತ್ವ ನಿರ್ಮಾಣದಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತದೆ. ಕಲೆಯಿಂದಲೇ ಜೀವನ ಕಟ್ಟಿಕೊಳ್ಳಬಹುದು. ಪಠ್ಯಕ್ಕೆ ಮಾತ್ರವಲ್ಲದೇ ಕಲೆಗೂ ಬಹಳ ಮಹತ್ವ ನೀಡಿ ಎಂದು ಸಲಹೆ ನೀಡಿದರು.

ಎಬಿವಿಪಿ ರಾಷ್ಟ್ರೀಯ ಕಲಾಮಂಚ್‌ನ ಸಂಚಾಲಕ ನಿರಂಜನ್ ಮಾತನಾಡಿ, ಜಗತ್ತಿನ ಬಹುದೊಡ್ಡ ಶಕ್ತಿ ಎಂದರೆ ಅದು ಸಂಸ್ಕೃತಿ. ಈ ಸಂಸ್ಕೃತಿ ಅಭಿವ್ಯಕ್ತಗೊಳ್ಳುವುದು ಕಲೆಗಳಿಂದ. ನಾವು ಮಾತಿನಿಂದ ಹೇಳಲಾಗದ್ದನ್ನು ಕಲೆಯ ಮೂಲಕ ಸ್ಪಷ್ಟವಾಗಿ ಹೇಳಬಹುದು. ಹಾಗಾಗಿಯೇ ಎಬಿವಿಪಿ ಶಾಲಾ–ಕಾಲೇಜು ಹಂತದಲ್ಲಿಯೇ ವಿದ್ಯಾರ್ಥಿಗಳನ್ನು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ವೇದಿಕೆಯನ್ನು ಒದಗಿಸುವ ಕೆಲಸ ಮಾಡುತ್ತಿದೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಮಾತನಾಡಿ, ಮನುಷ್ಯನ ದೇಹದಿಂದ ಜೀವ ಹೊರಟು ಹೋದರೆ ದೇಹ ಕೊಳೆಯಲು ಆರಂಭಿಸುತ್ತದೆ. ದೇಹಕ್ಕೆ ಜೀವ ಎಷ್ಟು ಮುಖ್ಯವೋ ಅದೇ ರೀತಿ ದೇಶ, ಸಮಾಜ ಜೀವಂತವಾಗಿರಲು ಸಂಸ್ಕೃತಿ ಅತ್ಯಂತ ಮುಖ್ಯ. ಸಂಸ್ಕೃತಿ ಇಲ್ಲದೆ ಹೋದರೆ ದೇಶವೂ ಸಹ ಜೀವ ಇಲ್ಲದ ದೇಹದಂತಾಗುತ್ತದೆ. ಸ್ವಾಮಿ ವಿವೇಕಾನಂದರ ಆದರ್ಶ ಇಟ್ಟುಕೊಂಡು ಎಬಿವಿಪಿಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಇದು ವ್ಯಕ್ತಿತ್ವ ವಿಕಸನ, ರಾಷ್ಟ್ರ ನಿರ್ಮಾಣಕ್ಕೆ ತೊಡಗಿಸಿಕೊಂಡಿದೆ ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಕೊಳಲು ವಾದಕ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ರಂಗಕರ್ಮಿ ಸಾಂಬಶಿವ ದಳವಾಯಿ, ರಾಷ್ಟ್ರೀಯ ಕಲಾಮಂಚ್ ಸಂಚಾಲಕ ನಿರಂಜನ್, ಎಬಿವಿಪಿ ರಾಜ್ಯ ಕಾರ್ಯದರ್ಶಿ ಮಣಿಕಂಠ ಕಳಸ, ಪ್ರಾಂತ ಸಹ ಕಾರ್ಯದರ್ಶಿ ಐಶ್ವರ್ಯ ಇದ್ದರು.

ಹೊತ್ತಿ ಉರಿದ ಬಸ್: 4 ವೈಷ್ಣೋದೇವಿ ಯಾತ್ರಾರ್ಥಿಗಳ ಸಾವು

ಜಮ್ಮು, ಮೇ 13– ಜಮ್ಮುವಿನ ಕತ್ರಾ ಬಳಿ ವೈಷ್ಣೋದೇವಿ ಯಾತ್ರಾರ್ಥಿಗಳು ತೆರಳುತ್ತಿದ್ದ ಬಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ನಾಲ್ವರು ಪ್ರಯಾಣಿಕರು ಸಾವನ್ನಪ್ಪಿರುವ ಘೋರ ದುರಂತ ಶುಕ್ರವಾರ ಸಂಭವಿಸಿದೆ. ದುರ್ಘಟನೆಯಲ್ಲಿ ಕನಿಷ್ಠ 22 ಮಂದಿ ಗಾಯಗೊಂಡಿದ್ದಾರೆ. ವೈಷ್ಣೋದೇವಿ ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಬಸ್ ಕತ್ರಾದಿಂದ ಜಮ್ಮುವಿಗೆ ತೆರಳುತ್ತಿದ್ದಾಗ ಹಠಾತ್ ಬೆಂಕಿ ಹೊತ್ತಿಕೊಂಡು ಈ ದುರಂತ ಸಂಭವಿಸಿದೆ.



ಸಾವುಗಳನ್ನು ಖಚಿತಪಡಿಸಿದ ಜಮ್ಮು ವಲಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿ) ಮುಖೇಶ್ ಸಿಂಗ್, ಆರಂಭಿಕ ತನಿಖೆಯಲ್ಲಿ ಯಾವುದೇ ಸ್ಫೋಟಕ ಬಳಸಿರುವುದು ಕಂಡುಬಂದಿಲ್ಲ. ಆದರೆ ತಕ್ಷಣವೇ ವಿಧಿವಿಜ್ಞಾನ ತಜ್ಞರು ಬೆಂಕಿಗೆ ಕಾರಣ ತಿಳಿಯಲು ಧಾವಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವೈಷ್ಣೋದೇವಿ ದೇಗುಲಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಕತ್ರಾ ಮೂಲ ಶಿಬಿರವಾಗಿದೆ.

10 ದಿನಗಳ ಉಚಿತ ಕೌಶಲ್ಯ ತರಬೇತಿ

ಮೈಸೂರು,ಮೇ13–ಮೈಸೂರಿನ ಹಿನಕಲ್‌ನ ರುಡ್‌ಸೆಟ್‌ನಲ್ಲಿ ಹೈನುಗಾರಿಕೆ ಮತ್ತು ಎರೆ ಹುಳು ಗೊಬ್ಬರ ತಯಾರಿಕೆ ಸಂಬಂಧ 10 ದಿನಗಳ ಕೌಶಲ್ಯ ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿ ಉಚಿತ, ವಸತಿ ಸಹಿತವಾಗಿದ್ದು, ಆಸಕ್ತರು ದೂ.0821–2519 663, ಮೊ: 9449860466, 8884554510, 9844013948 ಸಂಪರ್ಕಿಸಬಹುದು.

ನಾಳೆ ವೀರಶೈವ–ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಮೇ 13– ಮೈಸೂರಿನ ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ಬಸವೇಶ್ವರ ವಧು–ವರರ ವಿವಾಹ ವೇದಿಕೆ ಹಾಗೂ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಮೇ 15ರಂದು ಮಧ್ಯಾಹ್ನ 2 ಗಂಟೆಗೆ ವೀರಶೈವ–ಲಿಂಗಾಯತ ವಧು–ವರರ ಸಮಾವೇಶ ನಡೆಯಲಿದೆ. ಹನೂರು ಬಂಡಳ್ಳಿ ದೊಡ್ಡಮಠದ ಶ್ರೀ ಫಲಾಹಾರ ಪ್ರಭುದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಯುವ ನಾಯಕ ನಟ ಸುಪ್ರೀತ್, ನಟಿ ಪ್ರತೀಕ್ಷಾ ಉದ್ಘಾಟನೆ ನೆರವೇರಿಸುವರು.

ನಾಳೆ ಗೀತಗಾಯನ, ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಮೇ 13(ಆರ್‌ಕೆಬಿ)– ಬೆಂಗಳೂರಿನ ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್, ಅಖಿಲ ಕರ್ನಾಟಕ ಬ್ರಾಹ್ಮಣ ಯುವಕರ ಸಂಘದ ವತಿಯಿಂದ ಕಾರ್ಮಿಕರ ದಿನಾಚರಣೆ ಅಂಗವಾಗಿ ಮೇ 15ರಂದು ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗೀತ ಗಾಯನ, ವಿವಿಧ ಅರ್ಚಕರಿಗೆ ಆಗಮ, ವೈದಿಕ, ವೇದ, ಧಾರ್ಮಿಕ ಹಾಗೂ ಜ್ಯೋತಿಷ್ಯ ರತ್ನ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಪುನೀತ್ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಎಸ್.ಶೋಭಾ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಗೀತ ಗಾಯನ ಕಾರ್ಯಕ್ರಮ ಆರಂಭವಾಗಲಿದ್ದು, ಸಂಜೆ 4 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಅಧ್ಯಕ್ಷ ಡಾ.ನಟರಾಜ್ ಜೋಯಿಸ್ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಯಮುನಾ, ಮಿರ್ಲೆ ಫಣೀಶ್, ಕೆ.ಸತ್ಯನಾರಾಯಣ ಭಟ್ ಉಪಸ್ಥಿತರಿದ್ದರು.

ಜೆಎಸ್‌ಎಸ್ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ

ಮೈಸೂರು, ಮೇ 13– ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕು ರಾಮಾಪುರದಲ್ಲಿ ಜೆಎಸ್‌ಎಸ್ ಖಾಸಗಿ ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಪ್ರವೇಶಾತಿಗೆ 5ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿ ನಿಲಯದಿಂದ ಅರ್ಜಿ ನಮೂನೆಯನ್ನು ಪಡೆದು ಮೇ 22ರೊಳಗಾಗಿ ಭರ್ತಿ ಮಾಡಿ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ– 9449994081 ಸಂಪರ್ಕಿಸುವಂತೆ ತಿಳಿಸಲಾಗಿದೆ.

ಭಾರತೀಯ ಶಾಸ್ತ್ರೀಯ ಸಂಗೀತ ವಿಶ್ವದ ಎಲ್ಲಾ ಸಂಗೀತಗಳ ತಾಯಿಬೇರು

ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ಸಂಸ್ಕೃತಿ ಚಳವಳಿ ಕಾರ್ಯಕ್ರಮ ಉದ್ಘಾಟಿಸಿದ ಕೊಳಲುವಾದಕ ಪ್ರವೀಣ್ ಗೋಡ್ಖಿಂಡಿ

ಮೈಸೂರು, ಮೇ 13(ಎಂಟಿವೈ)– ಭಾರತೀಯ ಶಾಸ್ತ್ರೀಯ ಸಂಗೀತವೇ ವಿಶ್ವದ ಎಲ್ಲಾ ಸಂಗೀತದ ತಾಯಿ ಬೇರಾಗಿದೆ. ನಮ್ಮ ಶಾಸ್ತ್ರೀಯ ಸಂಗೀತದಲ್ಲಿರುವ ಶಕ್ತಿ ವಿಶ್ವದ ಯಾವುದೇ ಸಂಗೀತದಲ್ಲೂ ಇಲ್ಲ ಎಂದು ಕೊಳಲು ವಾದಕ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ ಅಭಿಪ್ರಾಯಪಟ್ಟಿದ್ದಾರೆ.




ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಆಯೋಜಿಸಿದ್ದ 'ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ಸಂಸ್ಕೃತಿ ಚಳವಳಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಗೀತದ ಪರಂಪರೆಯಲ್ಲಿ ಭಾರತೀಯ ಸಂಗೀತ ಹೆಚ್ಚು ಶಕ್ತಿಯುತವಾಗಿದೆ. ಇದರಿಂದಲೇ ವಿಶ್ವದ ಎಲ್ಲಾ ಸಂಗೀತದ ತಾಯಿ ಬೇರು ಎಂದು ನಾವೆಲ್ಲ ಹೆಮ್ಮೆಯಿಂದ ಹೇಳಬೇಕು. ಎಲ್ಲಾ ಸಂಗೀತಕ್ಕೂ ನಮ್ಮ ಸಂಗೀತವೇ ತಾಯಿ ಇದ್ದಂತೆ. ಪಾಶ್ಚಿಮಾತ್ಯ ಸಂಗೀತದಲ್ಲಿ ಅಬ್ಬರವಿದೆ. ಹೀಗಾಗಿ ಯುವ ಸಮುದಾಯ ಪಾಶ್ಚಿಮಾತ್ಯ ಸಂಗೀತದ ಕಡೆ ಆಕರ್ಷಿತರಾಗುತ್ತಿದ್ದಾರೆ. ಅಬ್ಬರದ ಸಂಗೀತ ನಡುವೆಯೂ ಎಲ್ಲರ ಚಿತ್ತವನ್ನು ಸೆಳೆದು ಮೋಡಿ ಮಾಡುವ, ಜನರನ್ನು ಮೋಹಿಸುವ, ಮರಳು ಮಾಡುವ ಶಕ್ತಿ ಮತ್ತು ಸಾಮರ್ಥ್ಯ ಭಾರತೀಯ ಸಂಗೀತಕ್ಕೆ ಇದೆ ಎಂದರು.

ಯುವ ಸಮುದಾಯ ಪಾಶ್ಚಿಮಾತ್ಯ ಸಂಸ್ಕೃತಿಯ ಕಡೆಗೆ ಆಕರ್ಷಿತರಾಗದೆ ನಮ್ಮತನವನ್ನು ಉಳಿಸಿಕೊಳ್ಳಬೇಕು. ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಇದು ಅತ್ಯಂತ ಅವಶ್ಯಕ. ಸುಸಂಸ್ಕೃತ ಸಮಾಜ ನಿರ್ಮಾಣ ಮಾಡುವಲ್ಲಿ ನಮ್ಮ ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳಬೇಕು. ಒಂದೇ ಉಸಿರಿನಲ್ಲಿ ಸಂಗೀತ ನುಡಿಸುವ ಕಲೆ ನಮ್ಮದು ಎಂಬ ರೀತಿಯಲ್ಲಿ ಪಾಶ್ಚಿಮಾತ್ಯರು ಬಿಂಬಿಸಿಕೊಳ್ಳುತ್ತಿದ್ದಾರೆ. ಆದರೆ, ಅದರ ಮೂಲ ಭಾರತವೇ ಆಗಿದೆ. ಹಲವು ಶತಮಾನಗಳಿಂದಲೂ ಒಂದೇ ಉಸಿರಿನಲ್ಲಿ ಸಂಗೀತ ನುಡಿಸುವ ಕಲೆಯನ್ನು ಭಾರತೀಯರು ಸಿದ್ಧಿಸಿಕೊಂಡಿದ್ದಾರೆ. 45 ನಿಮಿಷಗಳ ಕಾಲ ಒಂದೇ ಉಸಿರಿನಲ್ಲಿ ಶಂಖನಾದ ಮೊಳಗಿಸಿದ್ದನ್ನು ನಾನು ಕಂಡಿದ್ದೇನೆ. ಕೊಳಲಿನಲ್ಲಿ ಒಂದೇ ಉಸಿರಿನಲ್ಲಿ ದೀರ್ಘ ಕಾಲ ನುಡಿಸುವ ಪ್ರಯೋಗವನ್ನು ನಾನು ಮಾಡಿದ್ದೇನೆ. ನಾವು ಪಾಶ್ಚಿಮಾತ್ಯರನ್ನು ಅನುಕರಣೆ ಮಾಡುವುದನ್ನು ಬಿಟ್ಟು ನಮ್ಮತನವನ್ನು ಉಳಿಸಿಕೊಳ್ಳುವ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಭಾರತೀಯ ಸಂಗೀತ ಕ್ಷೇತ್ರದಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಮೇಲೆ ಬಹಳಷ್ಟು ಅಧ್ಯಯನ, ಸಂಶೋಧನೆಗಳು ಆಗಿವೆ. ಯಾವುದನ್ನು ಸುಖಾಸುಮ್ಮನೇ ಅನುಸರಿಸಬೇಡಿ. ಯೋಚಿಸಿ ಅನುಸರಿಸಬೇಕು. ನಮ್ಮ ಭಾಷೆ, ಸಂಸ್ಕೃತಿ, ಕಲೆಯ ಮೇಲೆ ಅಭಿಮಾನ ಇರಬೇಕು. ಸುಸಂಸ್ಕೃತ ಸಮಾಜ ಕಟ್ಟುವಲ್ಲಿ ನಿಮ್ಮ ಜವಾಬ್ದಾರಿಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಪೂರ್ವಜರು ಬಿಟ್ಟು ಕಲಿಸಿ ಹೋದ, ಬರೆದು ಹೋದ ಶಾಸ್ತ್ರಗಳಲ್ಲಿ ನಮ್ಮ ಸಂಸ್ಕೃತಿ ಇದ್ದು, ಅದನ್ನು ಅರ್ಥ ಮಾಡಿಕೊಂಡು ಸುಸಂಸ್ಕೃತರಾಗಬೇಕು. ಇಡೀ ಜಗತ್ತು ಭಾರತದ ಕಡೆ ನೋಡುತ್ತಿದೆ. ಅದಕ್ಕೆ ತಕ್ಕಂತೆ ನಾವು ಇರಬೇಕು. ಹೊಸತನವನ್ನು ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಬಳಿಕ ಐದು ನಿಮಿಷಗಳ ಕಾಲ ಕೊಳಲು ನುಡಿಸುವ ಮೂಲಕ ನೆರೆದಿದ್ದ ವಿದ್ಯಾರ್ಥಿಗಳಿಗೆ ಸಂಗೀತದ ಸವಿಯನ್ನು ಉಣಬಡಿಸಿದರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ: 'ರಾಷ್ಟ್ರ ಪುನರ್ ನಿರ್ಮಾಣಕ್ಕಾಗಿ ಸಂಸ್ಕೃತಿ ಚಳವಳಿ' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯಿಂದ 1,500 ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಕಲಾ ಶ್ರೀಮಂತಿಕೆಯನ್ನು ತೋರ್ಪಡಿಸಿದರು. ಏಕಾಂತ ನಾಟಕ, ಬೀದಿ ನಾಟಕ, ಜನಪದ ಸಮೂಹ ನೃತ್ಯ, ಜನಪದ ಸಮೂಹ ಗೀತೆ, ಶಾಸ್ತ್ರೀಯ ಸಮೂಹ ನೃತ್ಯ, ದೇಶ ಭಕ್ತಿ ಸಮೂಹ ಗೀತೆ, ಚಿತ್ರಕಲೆ, ಮೂರ್ತಿ ರಚನೆ, ಸ್ವರಚಿತ ಕವನ ವಾಚನ, ಚರ್ಚಾ ಸ್ಪರ್ಧೆ, ಪ್ರಬಂಧ, ಭಾಷಣ ಹಾಗೂ ಛಾಯಾಗ್ರಹಣ ಸ್ಪರ್ಧೆ ಜರುಗಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.05.2022 ಶನಿವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ


■ **ಕರ್ನಾಟಕ ಬುದ್ಧಧಮ್ಮ ಸಮಿತಿ :** 2566ನೇ ಬುದ್ಧ ಪೂರ್ಣಿಮೆ ಅಂಗವಾಗಿ ಧಮ್ಮಪದ ಉತ್ಸವ–2022, ಉಪಸ್ಥಿತರು : ಮನೋರಕ್ಷಿತ ಭಂತೇಜಿ, ಬೋಧಿರತ್ನ ಭಂತೇಜಿ, ಬೋಧಿ ದತ್ತ ಭಂತೇಜಿ, ನ್ಯಾನಲೋಕ ಭಂತೇಜಿ, ಆನಂದ ಭಂತೇಜಿ, ಬುದ್ಧರತ್ನ ಭಂತೇಜಿ, ಧಮ್ಮಪಾಲಾ ಭಂತೇಜಿ, ಬೋಧಿಪ್ರಿಯಾ ಭಂತೇಜಿ, ಗೌತಮಿ ಶೀಲ ಮಾತ, ಸ್ಥಳ:ಧ್ಯಾನ ಮಂದಿರ, ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 8 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಯೂನಿವರ್ಸಿಟಿ ಇಂಡಸ್ಟ್ರಿ ಇಂಟರಾಕ್ಷನ್ ಸೆಂಟರ್ :** ಡಿಜಿಟಲ್ ಟ್ರೆಂಡ್ಸ್ ಅಂಡ್ ಟೆಕ್ನಾಲಜೀಸ್ ಇನ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ : ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣ, ವಿಜಯನಗರ 2ನೇ ಹಂತ, ಬೆಳಗ್ಗೆ 9.30 ರಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಅವಭೃತಸ್ನಾನ (ಚಕ್ರಸ್ನಾನ), ಅಮೃತ ಕಳಶಾಭಿಷೇಕ, ಸಂಜೆ 6.30ಕ್ಕೆ ವಿದ್ವಾನ್ ಶ್ರೀದೇವಿ ಐಯ್ಯಂಗಾರ್ ಮತ್ತು ವೃಂದದವರಿಂದ ಸಂಗೀತ ಕಾರ್ಯಕ್ರಮ, ರಾತ್ರಿ 8ಕ್ಕೆ ವೈಭವ ಶಯನೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 7.15 ಎದೆ ತುಂಬಿದ ಹಾಡು–ಕವಿ ಮೆಚ್ಚಿ ಆಯ್ದ ಕವನ, ಕವಿ ಮಾತು ಹಾಗೂ ಗೀತೆ ಗಾಯನ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ ರಾಗ–ಹಂಸಾನಂದಿ, ಪ್ರಸ್ತುತಿ– ಜಿ. ಪುಷ್ಪಲತಾ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎಂ.ಎಸ್. ಆನಂದ್ ಮತ್ತು ಸಂಗಡಿಗರು – ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ಮಾಯಮ್ಮ ಮತ್ತು ತಂಡ, 1.20 ಭಾವಗೀತೆ–ಹಂಸಿನಿ ಎಸ್. ಕುಮಾರ್, 3.35 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ ಸಿಂಚನಾ ಎಸ್. ರಾವ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ನೆನಪಿನಂಗಳ–ಹಿರಿಯ ಸಂಗೀತ ವಿದ್ವಾಂಸರಾಡ ತಿಟ್ಟೇ ಕೃಷ್ಣ ಅಯ್ಯಂಗಾರ್ ಅವರೊಂದಿಗೆ ಡಾ.ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್–ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, "ಆತ್ಮೀಯ ತಂದ ಆತಂಕ", ಮೂಲಕಥೆ– ತ್ರಿಪುರಾಂತಕ ಜಿ.ಎಲ್.ನಿರ್ಮಾಣ– ಪ್ರಭುಸ್ವಾಮಿ ಮಳೀಮಠ, 9.15 ಸೈಟ್ ಖರೀಸುವುದೆಂದರೆ, ಮೈಸೂರಿನ ಡಿ. ಶ್ರೀಹರಿ ಅವರೊಡನೆ ಸಂದರ್ಶನ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂ.ಸುದೀಪ್ ಕುಮಾರ್ ಚಟ್ಟೋಪಾಧ್ಯಾಯ–ಬಾನ್ಸುರಿ ವಾದನ, 11.00 ಸವಿನೆನಪು

■ **ಹಸ್ತಶಿಲ್ಪಿ :** ಸಿಲ್ಕ್ ಇಂಡಿಯಾ–2022, ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10.30 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–67, ವರ್ಣಮಯ ರಂಗೋಲಿ ಕಲಾವಿದ ಬ್ರಹ್ಮಸೂರಯ್ಯ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಲತಾ ಮೋಹನ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಪ್ರೊ.ತಿಮ್ಮೇಗೌಡ, ಲೀಲಾನಾರಾಯಣ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ವನಿತಾ ಸದನ :** ಸಾಂಸ್ಕೃತಿಕ ಕಾರ್ಯಕ್ರಮ, ಕುವೆಂಪುರವರ ರಾಮಾಯಣ ದರ್ಶನದಿಂದ ಆಯ್ದ ಭಾಗ–2, ವಿದ್ವಾನ್ ಕೃ. ರಾಮಚಂದ್ರ ಅವರಿಂದ ವಾಚನ, ಡಾ. ಜ್ಯೋತಿ ಶಂಕರ್ ಅವರಿಂದ ವ್ಯಾಖ್ಯಾನ, ಸ್ಥಳ: ವನಿತಾ ಸದನ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ರಂಗಾಯಣ:** ಭಾರತೀಯ ರಂಗವಿದ್ಯಾಲಯ ತಂಡದಿಂದ 'ಬೆಕ್ಕು ಬಾವಿ' ನಾಟಕ, ಭೂಮಿಗೀತ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 14 ಶನಿವಾರ 2022

ಸಂಪುಟ: 43 | ಸಂಚಿಕೆ: 28 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅಂತೂ 16 ದಿನದ ನಂತರ ತಮಿಳುನಾಡಲ್ಲಿ ಬೆಂಗಳೂರು ಆಸಿಡ್ ದಾಳಿ ಆರೋಪಿ ನಾಗೇಶ್ ಬಂಧನ

ರಮಣ ಆಶ್ರಮದಲ್ಲಿ ಖಾವಿಧಾರಿಯಾಗಿ ಅಡಗಿದ್ದ; ಈತನ ಸೆರೆಗೆ ಪೊಲೀಸರೂ ಖಾವಿ ವೇಷಧಾರಿಗಳಾದರು!



ಬೆಂಗಳೂರು, ಮೇ 13– ಬೆಂಗಳೂರಲ್ಲಿ ಯುವತಿ ಮೇಲೆ ಆಸಿಡ್ ಎರಚಿ ಪರಾರಿಯಾಗಿದ್ದ ಆಸಿಡ್ ನಾಗೇಶ್‌ನನ್ನು ತಮಿಳುನಾಡಿನ ತಿರುವಣ್ಣಾ ಮಲೈನಲ್ಲಿರುವ ರಮಣ ಆಶ್ರಮದಲ್ಲಿ ಬೆಂಗಳೂರಿನ ಕಾಮಾಕ್ಷಿ ಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಕಳೆದ 16 ದಿನಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಆಸಿಡ್ ನಾಗೇಶ್, ತಾನು ಗುರುತು ಸಿಗಬಾರದೆಂದು ರಮಣ ಆಶ್ರಮದಲ್ಲಿ ಖಾವಿ ತೊಟ್ಟು ಸ್ವಾಮೀಜಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಈತ ಸ್ವಾಮೀಜಿ ವೇಷದಲ್ಲಿದ್ದಾನೆ ಎಂಬ ಖಚಿತ ಮಾಹಿತಿ ಪಡೆದಿದ್ದ ಪೊಲೀಸರು ತಾವೂ ಖಾವಿ ತೊಟ್ಟು ಭಕ್ತರ ವೇಷದಲ್ಲಿ ಆಶ್ರಮ ಪ್ರವೇಶಿಸಿ ಆತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈತನ ಬಂಧನಕ್ಕಾಗಿ ರಚಿಸಲಾಗಿದ್ದ ವಿಶೇಷಪಡೆ ಪೊಲೀಸರಿಗೆ ಆತನ ಕುಟುಂಬದವರು ಕೂಡ ಸಹಕಾರ ನೀಡಿ ದರು ಎಂದು ಹೇಳಲಾಗಿದೆ. ಯುವತಿ ಮೇಲೆ ಆಸಿಡ್ ಎರಚಿದ ವೇಳೆ ನಾಗೇಶ್‌ನ ಬಲಗೈ ಮೇಲೂ ಆಸಿಡ್ ಬಿದ್ದು ಗಾಯವಾಗಿತ್ತು ಎನ್ನಲಾಗಿದ್ದು, ತಮಿಳುನಾಡಿನ ಕೃಷ್ಣಗಿರಿ ಬಳಿ ಕ್ಲಿನಿಕ್‌ವೊಂದರಲ್ಲಿ ಚಿಕಿತ್ಸೆ ಪಡೆದಿದ್ದ. ತನಗಾಗಿದ್ದ ಗಾಯವನ್ನು ಕೆಲ ವಕೀಲರಿಗೆ ತೋರಿ ಸಿದ್ದ ಆತ ವಕೀಲರು ಆತನ ಪರ ವಕಾಲತ್ತು ವಹಿಸಲು ಒಪ್ಪದಿದ್ದಾಗ ತಮಿಳುನಾಡಿಗೆ ಪಲಾಯನವಾಗಿದ್ದ ಎಂದು ಹೇಳಲಾಗಿದೆ. ಅಪ್ಪಟ ದೈವಭಕ್ತನಾಗಿದ್ದ ನಾಗೇಶ್ ▶ 8ನೇ ಪುಟಕ್ಕೆ

ಮೂರು ವರ್ಷದ ಹಿಂದೆ ನಿಗೂಢ ರೀತಿ ನಾಪತ್ತೆಯಾಗಿದ್ದ ಮೈಸೂರು ನಾಟಿ ವೈದ್ಯ ಶಬ್ಬಾ ಷರೀಫ್ ಕೇರಳದಲ್ಲಿ ಭೀಕರ ಹತ್ಯೆ

● ಮೂವರು ಆರೋಪಿಗಳ ಬಂಧನ ● ನಾಟಿ ಔಷಧಿ ಮೂಲ ತಿಳಿದುಕೊಳ್ಳಲು ಅಪಹರಣ ● ಗೃಹಬಂಧನದಲ್ಲಿರಿಸಿ ಚಿತ್ರಹಿಂಸೆ; ಪ್ರಯತ್ನ ಫಲ ನೀಡದಿದ್ದಾಗ ನಾಟಿ ವೈದ್ಯನ ಕೊಂದು, ದೇಹ ಪೀಸ್ ಪೀಸ್ ಮಾಡಿ ನದಿಗೆ ಎಸೆದಿದ್ದರು ● ಕಳವು ಪ್ರಕರಣವೊಂದರ ಹೈಡ್ರಾಮದಲ್ಲಿ ಪ್ರಕರಣ ಬಯಲು

ಮೈಸೂರು, ಮೇ 13(ಎಸ್‌ಬಿಡಿ)– ಮೂರು ವರ್ಷಗಳ ಹಿಂದೆ ನಿಗೂಢವಾಗಿ ನಾಪತ್ತೆಯಾಗಿದ್ದ ಮೈಸೂರಿನ ನಾಟಿ ವೈದ್ಯನನ್ನು ಕೇರಳದಲ್ಲಿ ಅಮಾನುಷವಾಗಿ ಹತ್ಯೆ ಮಾಡಿ, ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ನದಿಗೆ ಎಸೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.



ಶಬ್ಬಾ ಷರೀಫ್

ಮೈಸೂರಿನ ಜನತಾನಗರ ಸಮೀಪದ ವಸಂತನಗರದಲ್ಲಿದ್ದ ನಾಟಿವೈದ್ಯ ಶಬ್ಬಾ ಷರೀಫ್, ಮೂಲವ್ಯಾಧಿ ಕಾಯಿಲೆಗೆ ನಾಟಿ ಔಷಧ ನೀಡುವ ಮೂಲಕ ಜನಪ್ರಿಯರಾಗಿದ್ದರು. 2019ರ ಆಗಸ್ಟ್‌ನಲ್ಲಿ ನಿಗೂಢವಾಗಿ ಕಣ್ಮರೆಯಾದ ಹಿನ್ನೆಲೆಯಲ್ಲಿ ಅವರ ಕುಟುಂಬದವರು ಸರಸ್ವತಿಪುರಂ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಮೊಬೈಲ್ ನೆಟ್‌ವರ್ಕ್‌ನ ಬೆನ್ನತ್ತಿದ್ದ ಪೊಲೀಸರು ಕೇರಳದವರೆಗೂ ಹೋಗಿ ಹುಡುಕಾಟ ನಡೆಸಿದ್ದರಾದರೂ ಪ್ರಯೋಜನವಾಗಿರಲಿಲ್ಲ. ಆದರೆ ಶಬ್ಬಾ ಷರೀಫ್ ಹತ್ಯೆಯಾಗಿರುವುದನ್ನು ಕೇರಳದ ಮಲಪ್ಪುರಂ ಜಿಲ್ಲೆಯ ಪೊಲೀಸರು ಈಗ ಪತ್ತೆ ಹಚ್ಚಿ, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ನಾಟಿ ವೈದ್ಯದಲ್ಲಿ ಜನಪ್ರಿಯತೆ ಗಳಿಸಿದ್ದ ಶಬ್ಬಾ ಷರೀಫ್ ಅವರ ಬಳಿ ಕೇರಳದಿಂದ ಹೆಚ್ಚಿನ ಮಂದಿ ಬಂದು ಔಷಧ ಪಡೆದು ಗುಣಮುಖರಾಗುತ್ತಿದ್ದರು. ಇದರಿಂದ ಕೇರಳದಲ್ಲೂ ಶಬ್ಬಾ ಷರೀಫ್ ಪ್ರಸಿದ್ಧಿ ಪಡೆದಿದ್ದರು. ಮೂಲವ್ಯಾದಿಯನ್ನು ಪರಿಣಾಮಕಾರಿಯಾಗಿ ಪರಿಹರಿಸುವಂತಹ ಔಷಧದ ರಹಸ್ಯ ತಿಳಿದುಕೊಂಡು ದುಬೈ ಇನ್ನಿತರ ದೇಶಗಳಲ್ಲಿ ಔಷಧ ಮಾರಾಟ ಮಾಡಿ, ಹಣ ಸಂಪಾದಿಸುವ ದುರುದ್ದೇಶದಿಂದ ಶಬ್ಬಾ ಷರೀಫ್ ▶ 8ನೇ ಪುಟಕ್ಕೆ



ಜೆಡಿಎಸ್ ಸ್ವತಂತ್ರ ಸರ್ಕಾರ ಸಂಕಲ್ಪ

ಮೈತ್ರಿ ಇಲ್ಲದೆ ಸ್ವತಂತ್ರ ಅಧಿಕಾರ ನೀಡಿ; ರಾಜ್ಯದ ನೀರಾವರಿ, ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡ್ತೇನೆ

ನೆಲಮಂಗಲದಲ್ಲಿ ನಡೆದ ಜನತಾ ಜಲಧಾರೆ ಸಮಾರೋಪ ಸಮಾರಂಭದಲ್ಲಿ ನೆರೆದಿದ್ದ ಲಕ್ಷ ಲಕ್ಷ ಜನಸಾಗರದ ಮುಂದೆ ಮಾಜಿ ಸಿಎಂ ಕುಮಾರಸ್ವಾಮಿ ಕಳಕಳಿಯ ಮನವಿ

ಬೆಂಗಳೂರು, ಮೇ 13– ಮೈತ್ರಿ ಸರ್ಕಾರದ ಸಹವಾಸ ಬೇಡ, ಬದಲಾಗಿ ಸ್ವತಂತ್ರ ಸರ್ಕಾರ ತರಲು ಸಂಕಲ್ಪ ಮಾಡೋಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಮನವಿ ಮಾಡಿದ್ದಾರೆ.

ಇಲ್ಲಿನ ಹೊರವಲಯ ನೆಲಮಂಗಲದ ಮೈದಾನದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ 'ಜನತಾ ಜಲಧಾರೆ' ಸಮಾರೋಪ ಸಮಾರಂಭದಲ್ಲಿ ನೆರೆದಿದ್ದ ಲಕ್ಷಾಂತರ ಜನರನ್ನುದ್ದೇಶಿಸಿ ಮಾತನಾಡಿ, ಮೈತ್ರಿ ಇಲ್ಲದೆ, ಸ್ವತಂತ್ರ ಅಧಿಕಾರ ನೀಡಿದರೆ ರಾಜ್ಯದ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಕುಮಾರಸ್ವಾಮಿಗೆ ಜಯವಾಗಲಿ, ಜೆಡಿಎಸ್‌ಗೆ ಜಯವಾಗಲಿ, ದೇವೇಗೌಡರಿಗೆ ಜಯವಾಗಲಿ ಎಂಬ ಕಾರ್ಯಕರ್ತರ ಘೋಷಣೆಗಳು ಮುಗಿಲು ಮುಟ್ಟಿತ್ತು. ಜೂನ್ ಮತ್ತು ಜುಲೈ ತಿಂಗಳಲ್ಲಿ ಮತ್ತೊಂದು ಸುತ್ತಿನ ರಥಯಾತ್ರೆ ನಡೆಸುತ್ತೇನೆ. ಹಳ್ಳಿ ಹಳ್ಳಿಗಳಲ್ಲಿ ರಥಯಾತ್ರೆ ನಡೆಸಿ ನಾನೇ ಜನರ ಮುಂದೆ ಬರುತ್ತೇನೆ. ನಮ್ಮ ಪಕ್ಷದಿಂದಲೇ ಬೆಳೆದು ಹೋದವರು ಜೆಡಿಎಸ್ ಮುಗಿದೇ ಹೋಯಿತು ಎಂದಿದ್ದರು. ಆದರೆ ಈ ಜನತಾ ಜಲಧಾರೆ ಸಮಾವೇಶ ಅವರಿಗೆ ಉತ್ತರ ಕೊಟ್ಟಿದೆ ಎಂದರು.


90 ವರ್ಷ ವಯಸ್ಸಿನಲ್ಲೂ ನಾಡಿನ ಜನರಿಗಾಗಿ ದೇವೇಗೌಡರು ಹೋರಾಟ ಮಾಡುತ್ತಿದ್ದಾರೆ. ರಾಜಕೀಯದ ಬೆಳವಣಿಗೆಗಳ ಪರಿಣಾಮವಾಗಿ ನಾನು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆದೆ. ಆದರೆ ಯಾವುದೇ ಕಾರ್ಯಕ್ರಮ ▶ 8ನೇ ಪುಟಕ್ಕೆ

ಜೆಡಿಎಸ್‌ನ 'ಜನತಾ ಜಲಧಾರೆ'ಗೆ ಹರಿದುಬಂದ ಲಕ್ಷ ಲಕ್ಷ ಜನಸಾಗರ!

ಬೆಂಗಳೂರು, ಮೇ 13– ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ಸಮರ್ಪಕ ವಾಗಿ ಜಾರಿ ಮಾಡುವುದಕ್ಕೆ ಸಂಕಲ್ಪ ಮಾಡುವ ದೃಷ್ಟಿಯಿಂದ ಜೆಡಿಎಸ್ ಏ. 16ರಂದು ಆರಂಭಿಸಿದ್ದ 'ಜನತಾ ಜಲಧಾರೆ' ಸರಣಿ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ನೆಲಮಂಗಲದಲ್ಲಿ ಇಂದು ಯಶಸ್ವಿಯಾಗಿ ನಡೆಯಿತು.

ಈ ಸಮಾರಂಭದಲ್ಲಿ ಭಾಗವಹಿಸಲು ರಾಜ್ಯದ ನಾನಾ ಕಡೆಗಳಿಂದ ಲಕ್ಷಾಂತರ ಜೆಡಿಎಸ್ ಕಾರ್ಯಕರ್ತರು ನೆಲಮಂಗಲಕ್ಕೆ ಆಗಮಿಸಿದ್ದರಿಂದ ಈ ಹೆದ್ದಾರಿಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಹಾಸನ ಜಿಲ್ಲೆ ಒಂದರಿಂದಲೇ 547 ಸರ್ಕಾರಿ ಸಾರಿಗೆ ಬಸ್ ಮತ್ತು 600 ಖಾಸಗಿ ವಾಹನಗಳಲ್ಲಿ ಜನರು ಬಂದಿದ್ದರು. ರಾಜ್ಯದ ಇತರ ಭಾಗಗಳಿಂದಲೂ ಸಾವಿರಾರು ಬಸ್–ಟೆಂಪೋಗಳಲ್ಲಿ ಕಾರ್ಯಕರ್ತರು ಬಂದಿದ್ದರು. ಸುಮಾರು ಐದು ಲಕ್ಷ ಜನರಿಗೆ ಊಟೋಪಚಾರದ ವ್ಯವಸ್ಥೆಯನ್ನು ಸಮಾರೋಪ ಸಮಾರಂಭದಲ್ಲಿ ಮಾಡಲಾಗಿತ್ತು ಸುಮಾರು 3 ಸಾವಿರ ಬಾಣಸಿಗರು ಇದರಲ್ಲಿ ತೊಡಗಿ ಕೊಂಡಿದ್ದಾರೆ. ಊಟ ಬಡಿಸಲು 2 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು ಪಲಾವ್, ಜಿಲೇಬಿ, ಕೇಸರಿ ಬಾತ್, ಮಜ್ಜಿಗೆಯನ್ನು ಕಾರ್ಯಕರ್ತರಿಗೆ ಉಣಬಡಿಸಲಾಯಿತು.

ಜನತಾ ಜಲಧಾರೆ ಆರಂಭದಿಂದಲೇ ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದೆ



ತಾಯಿ–ತಂದೆ ಆಶೀರ್ವಾದ ಪಡೆದ ಹೆಚ್.ಡಿ.ಕುಮಾರಸ್ವಾಮಿ


ಮೈಸೂರು, ಮೇ 13(ಆರ್‌ಕೆ)– ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ನೆಲಮಂಗಲದಲ್ಲಿ ಆಯೋಜಿಸಿದ್ದ ಜನತಾ ಜಲಧಾರೆ ಸಂಕಲ್ಪ ಸಮಾವೇಶಕ್ಕೂ ಮುನ್ನ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಮಾಡಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ಜಾತ್ಯತೀತ ಜನತಾದಳದಿಂದ ಒಬ್ಬ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೆಂಬುದು ಪಕ್ಷದ ಮುಖಂಡರು, ಕಾರ್ಯಕರ್ತರ ಅಭಿಪ್ರಾಯವಾಗಿದೆ. ಆ ನಿಟ್ಟಿನಲ್ಲಿ ಚರ್ಚಿಸಿ, ನಿರ್ಧರಿಸಿ ಟಿಕೆಟ್ ನೀಡಲಾಗುವುದು ಎಂದರು. ತಾಯಿ ಚಾಮುಂಡೇಶ್ವರಿ ದೇವಿಯ ಅನುಗ್ರಹದಿಂದ ಜನತಾ ಜಲಧಾರೆ ▶ 8ನೇ ಪುಟಕ್ಕೆ

ನೀಟ್ ಪಿಜಿ–2022 ಪರೀಕ್ಷೆ ಮುಂದೂಡಲು ಸುಪ್ರೀಂ ನಕಾರ

ನವದೆಹಲಿ, ಮೇ 13– ವೈದ್ಯರ ಮನವಿಯ ಮೇರೆಗೆ ನೀಟ್–ಪಿಜಿ–2022 ಪರೀಕ್ಷೆಯನ್ನು ಮುಂದೂಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ. ಪರೀಕ್ಷೆ ವಿಳಂಬವಾದರೆ ವೈದ್ಯರ ಅಲಭ್ಯತೆ ಉಂಟಾಗುತ್ತದೆ ಮತ್ತು ರೋಗಿಗಳ ಆರೈಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ನೀಟ್ ಪಿಜಿ–2022 ಪರೀಕ್ಷೆ ಮುಂದೂಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿಗಳಾದ ಡಿವೈ ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರ ಪೀಠ, ಪರೀಕ್ಷೆ ಮುಂದೂಡುವುದರಿಂದ "ಅವ್ಯವಸ್ಥೆ ಮತ್ತು ಅನಿಶ್ಚಿತತೆ" ಸೃಷ್ಟಿಸುತ್ತದೆ ಮತ್ತು ಪರೀಕ್ಷೆಗೆ ನೋಂದಾಯಿಸಿದ ವಿದ್ಯಾರ್ಥಿಗಳ ದೊಡ್ಡ ವಿಭಾಗದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದೆ.

ಆಸಿಡ್ ಸಂತ್ರಸ್ತರಿಗೆ ನಿವೇಶನ, ಮನೆ



ಬೆಂಗಳೂರು, ಮೇ 13 (ಕೆಎಂಶಿ)– ಆಸಿಡ್ ದಾಳಿಗೆ ಒಳಗಾಗಿರುವ ಮಹಿಳೆಯರಿಗೆ ನೀಡಲಾಗುತ್ತಿದ್ದ 3 ಸಾವಿರ ಮಾಸಾಶನವನ್ನು 10 ಸಾವಿರ ರೂ.ಗೆ ಹೆಚ್ಚಿಸಲಾಗಿದ್ದು, ಸಂತ್ರಸ್ತೆಯರಿಗೆ ನಿವೇಶನ, ಮನೆ ನೀಡುವುದಾಗಿ ಸಿಎಂ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ.

ವಿಧಾನಸೌಧದ ಸಭಾಂಗಣದಲ್ಲಿ ನಡೆದ ಹಲೋ ಕಂದಾಯ ಸಚಿವರೆ (72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ) ಸಹಾಯವಾಣಿಯನ್ನು ಲೋಕಾರ್ಪಣೆ ಮಾಡಿದರು. ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಮನೆ ಬಾಗಿಲಿಗೆ ತಲುಪಿ ಸುವ ಕಾರ್ಯಕ್ರಮಕ್ಕೂ ಸಿಎಂ ಚಾಲನೆ ನೀಡಿದರು. ವಾರ್ಷಿಕ ಆದಾಯ 32 ಸಾವಿರ ರೂ.ಗಿಂತ ಕಡಿಮೆ ಇರುವ ವೃದ್ಧರು, ಅಂಗವಿಕಲರು, ವಿಧವೆ, ಅವಿವಾಹಿತರು, ವಿಚ್ಛೇದನ ಪಡೆದ ಮಹಿಳೆಯರು ಈ ಸೌಲಭ್ಯ ಪಡೆಯಲು ಹಲೋ ಕಂದಾಯ ಸಚಿವರೆ ಎನ್ನುವ ದೂರವಾಣಿ 155245ಕ್ಕೆ ಕರೆ ಮಾಡಿದರೆ ಅವರ ಮನೆ ಬಾಗಿಲಿಗೆ 72 ಗಂಟೆಯೊಳಗೆ ಸೌಲಭ್ಯ ದೊರೆಯುತ್ತದೆ.

ಮೇ 19ಕ್ಕೆ SSLC ಫಲಿತಾಂಶ

ಬೆಂಗಳೂರು, ಮೇ 13(ಕೆಎಂಶಿ)– ಮಾರ್ಚ್–ಏಪ್ರಿಲ್ ಮಾಹೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಇದೇ 19 ರಂದು ಪ್ರಕಟಗೊಳ್ಳಲಿದೆ.

ಅಂದು ಬೆಳಗ್ಗೆ 10.30ರ ನಂತರ ವಿದ್ಯಾರ್ಥಿಗಳು ವೆಬ್‌ಸೈಟ್ ನಲ್ಲಿ ಫಲಿತಾಂಶ ಪಡೆದುಕೊಳ್ಳಬಹುದು. ಕಳೆದ ಎರಡು ವರ್ಷಗಳಿಂದ ಕೋವಿಡ್–19ನಿಂದ ವಿದ್ಯಾರ್ಥಿಗಳು ಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪಾಠ ಕೇಳಲು ಸಾಧ್ಯವಾಗಿಲ್ಲ. ಈ ಕಾರಣದಿಂದ ಪ್ರಸಕ್ತ ವರ್ಷವೂ ಮೂರು ವಿಷಯಗಳಿಗೆ ಸಂಬಂಧಿಸಿದಂತೆ ಶೇಕಡ 10 ರಷ್ಟು ಗ್ರೇಸ್‌ಮಾರ್ಕ್ ನೀಡಿ, ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ ತೀರ್ಮಾನಿಸಿದೆ.

ಇಬ್ಬರ ಜಗಳದಲ್ಲಿ ಮುಡಾ ಅಲ್ಲ.. ಸಾರ್ವಜನಿಕರು ಬಡವಾದ್ರು...!!

● ಸಭೆ ನಡೆದು ಬರೋಬ್ಬರಿ 9 ತಿಂಗಳಾಯ್ತು ● ಅಭಿವೃದ್ಧಿ ಕಾಮಗಾರಿಗಳು ನೆನೆಗುದಿಗೆ ಬಿದ್ದಿವೆ ● ವಿಧಾನಪರಿಷತ್ ಚುನಾವಣಾ ನೀತಿ ಸಂಹಿತೆ ಹಿನ್ನೆಲೆ ಶುಕ್ರವಾರ ನಿಗದಿಯಾಗಿದ್ದ ಸಭೆಯೂ ರದ್ದು ● 2021ರ ಆಗಸ್ಟ್ 27ರಂದು ನಡೆದದ್ದೇ ಕಡೇ ಸಭೆ, ಅಂದು ಒಂದೇ ದಿನ 600 ವಿಷಯಕ್ಕೆ ಅಂಗೀಕಾರ ● ಮುಡಾ ಅಧ್ಯಕ್ಷರು– ಹಿಂದಿನ ಆಯುಕ್ತರ ನಡುವಿನ ಶೀತಲ ಸಮರಕ್ಕೆ ಪ್ರಾಧಿಕಾರದ ಕಾರ್ಯಯೋಜನೆಗಳೆಲ್ಲಾ ಬಲಿ



ಮೈಸೂರು, ಮೇ 13 (ಆರ್‌ಕೆ)– ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಇಂದು ನಡೆಯಬೇಕಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಭೆ ರದ್ದಾಗಿದೆ. ಇದರೊಂದಿಗೆ ಕಳೆದ 9 ತಿಂಗಳಿಂದ ಮುಡಾ ಸಭೆ ನಡೆಯದೇ ಸಾರ್ವಜನಿಕ ಅಭಿವೃದ್ಧಿ ಕಾರ್ಯ ನೆನೆಗುದಿಗೆ ಬಿದ್ದಿದೆ.

ಶಿಕ್ಷಕರ ಕ್ಷೇತ್ರ ಹಾಗೂ ದಕ್ಷಿಣ ಪದವೀಧರರ ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ಚುನಾವಣಾ ಆಯೋಗವು ಗುರುವಾರ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದು, ನೀತಿಸಂಹಿತೆ ಜಾರಿಗೆ ಬಂದಿರುವುದರಿಂದ ಇಂದು ನಿಗದಿಯಾಗಿದ್ದ ಮುಡಾ ಸಾಮಾನ್ಯ ಸಭೆಯನ್ನು ರದ್ದುಪಡಿಸಲಾಗಿದೆ.

2021ರ ಆಗಸ್ಟ್ 27ರಂದು ನಡೆದ ಸಭೆಯೇ ಕಡೆಯದಾಗಿದ್ದು, ತದನಂತರ ಮುಡಾ ಅಧ್ಯಕ್ಷರು ಹಾಗೂ ಹಿಂದಿನ ಆಯುಕ್ತರ ನಡುವಿನ ಶೀತಲ ಸಮರದಿಂದಾಗಿ ಸಭೆಗಳೇ ನಡೆಯಲಿಲ್ಲ. ಪರಿಣಾಮ ಪ್ರಾಧಿಕಾರದಲ್ಲಿ ಯಾವುದೇ ನಿರ್ಣಯಗಳಾಗದೇ ಅದೆಷ್ಟೋ ಸಾರ್ವಜನಿಕ ಕಾರ್ಯಗಳು, ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನವಾಗಲಿಲ್ಲ.



ಹೆಚ್.ವಿ. ರಾಜೀವ್

▶ ಕೇವಲ ಪ್ರತಿಷ್ಠೆಗಾಗಿ ಮುಡಾ ಅಧ್ಯಕ್ಷ ಹಾಗೂ ಆಯುಕ್ತರು ಪಟ್ಟು–ಪ್ರತಿಪಟ್ಟು ಹಿಡಿದ ಕಾರಣ ಪ್ರಗತಿಪರ ಯೋಜನೆಗಳು ಕುಂಠಿತವಾದವಲ್ಲದೇ, 9 ತಿಂಗಳಿನಿಂದ ಸಭೆ ನಡೆಯದೇ, ಯಾವುದೇ ನಿರ್ಣಯಗಳಾಗದೇ ಈ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿವೆ. ಅಷ್ಟೇ ಅಲ್ಲದೇ ಕೆಲ ಕಡತಗಳು ಸಭೆಗಾಗಿ ಕಾಯುತ್ತಿರುವುದರಿಂದ ಸಾರ್ವಜನಿಕ ಸೇವೆಗಳಿಗೆ ಬ್ರೇಕ್ ಬಿದ್ದಿದೆ. ಇಂದು (ಮೇ 13) ನಿಗದಿಯಾಗಿದ್ದ ಸಭೆಗೂ 500ಕ್ಕೂ ಹೆಚ್ಚು ವಿಷಯಗಳನ್ನು ಚರ್ಚೆಗಿರಿಸಲಾಗಿತ್ತು. ಖಾಸಗಿ ಡೆವಲಪರ್‌ಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು ತಮ್ಮ ಅಜೆಂಡಾ ಮುಂದಿಟ್ಟುಕೊಂಡು ಬಕಪಕ್ಷಿಯಂತೆ ಕಾಯುತ್ತಿದ್ದರಾದರೂ, ಚುನಾವಣಾ ನೀತಿಸಂಹಿತೆ ಅಡ್ಡಬಂದ ಕಾರಣ ನಿರಾಸೆಗೊಂಡಿದ್ದಾರೆ.



ಡಾ. ಡಿ.ಬಿ. ನಟೇಶ್

ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ ಪ್ರಕಾರ ಪ್ರತೀ 3 ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಬಡಾವಣೆ ರಚಿಸಿ, ಅರ್ಜಿ ಹಾಕಿ ಹಲವು ವರ್ಷಗಳಿಂದ ಕಾದಿರುವ ಆಕಾಂಕ್ಷಿಗಳಿಗೆ ನಿವೇಶನ ಹಂಚಿಕೆ ಮಾಡುವುದು, ಕಾಲ ಕಾಲಕ್ಕೆ ವಸತಿ ಯೋಜನೆ ಗಳನ್ನು ಜಾರಿಗೊಳಿಸಿ ಆಶ್ರಯ ಕಲ್ಪಿಸುವುದು, ಹಂಚಿಕೆಯಾಗಿರುವ ನಿವೇಶನಗಳ ನಾಗರಿಕ ಸಮಸ್ಯೆ ನಿವಾರಣೆ ಮುಡಾದ ಪ್ರಮುಖ ಉದ್ದೇಶ ವಾಗಿದ್ದರೂ ನಾನಾ ಕಾರಣಗಳಿಂದ ಇತ್ತೀಚಿನ ದಿನಗಳಲ್ಲಿ ಯಾವುದೂ ನೆರವೇರುತ್ತಿಲ್ಲ. ಸಭೆ ನಡೆದಾಗಲೂ ಕೇವಲ ಖಾಸಗಿ ಬಡಾವಣೆಗಳಿಗೆ ನಕ್ಷೆ ಅನುಮೋದನೆ ಮಾಡಿಕೊಟ್ಟು ▶ 8ನೇ ಪುಟಕ್ಕೆ

ನವಂಬರ್‌ನಲ್ಲೇ ಬರಬಹುದಾದ ಚುನಾವಣೆಗೆ ಸಜ್ಜಾಗಿ...

● ರಾಜ್ಯ ಕಾಂಗ್ರೆಸ್ ನಾಯಕರಿಗೆ ವರಿಷ್ಠರ ಸೂಚನೆ ● ಕಚ್ಚಾಟ ಬಿಡಿ; ಅವಧಿಗೆ ಮುನ್ನವೇ ಬರಬಹುದಾದ ಚುನಾವಣೆಗೆ ಸಿದ್ಧರಾಗಿ

ಬೆಂಗಳೂರು, ಮೇ 13(ಕೆಎಂಶಿ)– ಗುಜರಾತ್ ಹಾಗೂ ಹಿಮಾಚಲಪ್ರದೇಶ ರಾಜ್ಯಗಳ ಜತೆ ನವಂಬರ್‌ನಲ್ಲೇ ಕರ್ನಾಟಕ ವಿಧಾನಸಭಾ ಚುನಾವಣೆ ನಡೆಸಲು ಬಿಜೆಪಿ ಮುಂದಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಆಂತರಿಕ ಕಚ್ಚಾಟ ಬಿಟ್ಟು ಚುನಾವಣೆಗೆ ಸಜ್ಜಾಗಿ ಎಂದು ಕಾಂಗ್ರೆಸ್ ವರಿಷ್ಠರು ರಾಜ್ಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ರಾಜಸ್ತಾನದ ಉದಯಪುರದಲ್ಲಿ ಆರಂಭವಾಗಿರುವ ಕಾಂಗ್ರೆಸ್ ಪಕ್ಷದ ಮೂರು ದಿನದ ರಾಷ್ಟ್ರೀಯ ಕಾರ್ಯಾಗಾರದ ಮೊದಲ ದಿನವೇ ಬಿಡುವು ಮಾಡಿಕೊಂಡು ಕರ್ನಾಟಕ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಕಾರ್ಯಾಧ್ಯಕ್ಷರಾದ ಸತೀಶ್ ಜಾರಕಿಹೊಳಿ, ಶಾಸಕ ಕೃಷ್ಣಬೈರೇಗೌಡ ಸೇರಿದಂತೆ ಆಯ್ದ ಮುಖಂಡರ ಸಭೆ ನಡೆಸಿ, ಅವಧಿಗೂ ಮುನ್ನ ಕರ್ನಾಟಕದಲ್ಲಿ ಚುನಾವಣೆ ನಡೆಯಲಿದೆ ಎಂದಿದ್ದಾರೆ.

ಒಂದಲ್ಲಾ ಒಂದು ಕಾರಣಕ್ಕೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ನಡೆಯುತ್ತಿರುವ ಆಂತರಿಕ ಕಲಹ ಆ ಪಕ್ಷ ಸಂಘಟನೆ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇದನ್ನು ರಾಜ್ಯ ಬಿಜೆಪಿ ಸರ್ಕಾರ ಲಾಭವಾಗಿ ಪಡೆದುಕೊಳ್ಳುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ರಾಜ್ಯ



ನಾಯಕರಲ್ಲಿರುವ ಅಸಮಾಧಾನ ತಪ್ಪಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಂದಿಟ್ಟು ಕೊಂಡು ಸಭೆ ನಡೆಸಿದರು. ಕರ್ನಾಟಕದಲ್ಲಿ ಅವಧಿ ಪೂರ್ವ ಚುನಾವಣೆ ನಡೆಸುವ ಯಾವ ಕುರುಹನ್ನು ಬಿಜೆಪಿ ನೀಡದಿದ್ದರೂ ಅದಕ್ಕೆ ಸಂಬಂಧಿಸಿದಂತೆ ರಹಸ್ಯವಾಗಿ ಸಿದ್ಧತೆ ನಡೆಸಿದ್ದು, ಇದನ್ನು ಯಾವ ಕಾರಣಕ್ಕೂ ಲಘುವಾಗಿ ಪರಿಗಣಿಸಬಾರದು ಎಂದು ವರಿಷ್ಠರು ಎಚ್ಚರಿಕೆ ನೀಡಿದ್ದಾರೆ.

ಗುಜರಾತ್ ಹಾಗೂ ಹಿಮಾಚಲ ಪ್ರದೇಶದಲ್ಲಿ ಈ ವರ್ಷ ನವಂಬರ್ ವೇಳೆಗೆ ವಿಧಾನ ಸಭೆ ಚುನಾವಣೆಗಳು ನಡೆಯಲಿದ್ದು ಅದೇ ಕಾಲಕ್ಕೆ ಕರ್ನಾಟಕದಲ್ಲೂ ವಿಧಾನಸಭಾ ಚುನಾವಣೆ ನಡೆಸುವುದು ಬಿಜೆಪಿಯ ಲೆಕ್ಕಾಚಾರ. ಎದುರಾಳಿ ಪಕ್ಷ ಸನ್ನದ್ಧ ಸ್ಥಿತಿಯಲ್ಲಿ ಇಲ್ಲದೆ ಇರುವಾಗ ಇದ್ದಕ್ಕಿದ್ದಂತೆ ರಣಾಂಗಣಕ್ಕಿಳಿದು ಗಾಬರಿ ಪಡಿಸುವುದು ಬಿಜೆಪಿಯ ತಂತ್ರ ಹೀಗಾಗಿ ಯಾವ ಕಾರಣಕ್ಕೂ ಈ ಅಂಶವನ್ನು ಬಳಸಿಕೊಳ್ಳಲು ಸಜ್ಜಾಗಿ ಎಂದು ಡಿಕೆಶಿ ಹಾಗೂ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಲಾಗಿದೆ.

ಕರ್ನಾಟಕದಲ್ಲಿ ಪ್ರತಿ ದಿನ ಮುಖಂಡರ ನಡುವೆ ಮುಸುಕಿನ ಗುದ್ದಾಟ ನಡೆಯುತ್ತಿರುವ ಕುರಿತು ಹೈಕಮಾಂಡ್‌ಗೆ ಹಲವು ದೂರುಗಳು ಬಂದಿವೆ. ಹಿರಿಯ ನಾಯಕ ಎಂ.ಬಿ.ಪಾಟೀಲ್ ಮತ್ತು ಮಾಜಿ ಸಂಸದೆ ರಮ್ಯಾಗೆ ಸಂಬಂಧಿಸಿದ ಹೇಳಿಕೆಗಳು ಇದಕ್ಕೆ ಉದಾಹರಣೆಗಳಷ್ಟೇ. ನೀವಿಬ್ಬರೂ ಪರಸ್ಪರ ಒಗ್ಗೂಡದೆ ಇದ್ದರೆ, ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : (ಒಂದು ವಾರ ಶಾಲೆಗೆ ಬರದಿದ್ದ ವಿದ್ಯಾರ್ಥಿಯೋರ್ವನಿಗೆ) "ಹೀಗೆ ಶಾಲೆಗೆ ಆಬ್ಸೆಂಟ್ ಆಗ್ತಿದ್ರೆ ನಿನ್ನ ಪರೀಕ್ಷೆಗೆ ಕೂರಿಸೊಲ್ಲ"

ವಿದ್ಯಾರ್ಥಿ : "ಪರ್ವಾಗಿಲ್ಲ ಸಾರ್ ನಿಂತೇ ಪರೀಕ್ಷೆ ಬರೀತೀನಿ"

ಮೈಸೂರು ಮಿತ್ರ

ಶನಿವಾರ, 14 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಬಹಿರಂಗ ಯಶಸ್ಸಿಗಿಂತ ಅಂತರಂಗ ಶುದ್ಧ ಜೀವನವೇ ಮುಖ್ಯ

– ಬೆಸ್ಮರ್ ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ನಿಜ ಆಡಿದರೆ ನಿಷ್ಠುರ ಸುಳ್ಳಾಡಿದರೆ ಮತ್ಸರ

ನಿಮ್ಮ ಪತ್ರಗಳು

ಕಲಿಕಾ ಚೇತರಿಕೆ ಕಾರ್ಯಕ್ರಮ ಸ್ವಾಗತಾರ್ಹ

ಮಾನ್ಯರೆ,

ಕೋವಿಡ್‌ನಿಂದಾಗಿ ಕಳೆದ ಎರಡು ಮೂರು ವರ್ಷಗಳಿಂದ ಶಾಲೆಗಳಲ್ಲಿ ಭೌತಿಕ ತರಗತಿಗಳು ನಡೆಯದೆ ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸಲು ರಾಜ್ಯ ಶಿಕ್ಷಣ ಇಲಾಖೆ ಬಹಳ ಉತ್ತಮವಾದ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ರೂಪಿಸಿದೆ. ಕೋವಿಡ್–19 ಸೋಂಕಿನ ಋಣಾತ್ಮಕ ಪರಿಣಾಮ ಶಿಕ್ಷಣ ಕ್ಷೇತ್ರದ ಮೇಲೆ ಅತೀ ಹೆಚ್ಚಿನ ಪ್ರಮಾಣದಲ್ಲಿ ಬೀರಿದೆ ಎಂದರೆ ತಪ್ಪಾಗಲಾರದು. ತರಗತಿಗಳಿಲ್ಲದೆ ದೀರ್ಘಾವಧಿಯಲ್ಲಿ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಸಮಸ್ಯೆ ಯಾಗಿದ್ದು, ಮಕ್ಕಳಿಗೆ ಬರವಣಿಗೆಯಲ್ಲೂ ಸಾಕಷ್ಟು ತೊಂದರೆಯಾಗಿದೆ. ಈ ಹಿನ್ನೆಲೆಯಲ್ಲಿ ಕೈ ಬರಹ, ಬರವಣಿಗೆಯ ಸುಧಾರಣೆ ಅಗತ್ಯವಿದೆ. ಕೋವಿಡ್–19 ಸೋಂಕು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಬಹುದೊಡ್ಡ ಪೆಟ್ಟು ನೀಡಿರುವುದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಶಿಕ್ಷಣ ಇಲಾಖೆ ಮಕ್ಕಳಲ್ಲಿ ಕಲಿಕಾ ಹಿನ್ನಡೆಯ ಗಂಭೀರತೆಯನ್ನು ಅರಿತು 2022ರ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ' ಎಂದು ಘೋಷಿಸಿ ಕಲಿಕೆಗೆ ಹೆಚ್ಚಿನ ಒತ್ತು ನೀಡಲು ಅಗತ್ಯ ಕಾರ್ಯಕ್ರಮ ರೂಪಿಸಿರುವುದು ಸ್ವಾಗತಾರ್ಹವಾಗಿದೆ.

ಮೇ 16 ರಿಂದಲೇ ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರ ಸೂಚಿಸಿದ್ದು, ಇದಕ್ಕಾಗಿ ಶಿಕ್ಷಕರಿಗೆ ಈಗಾಗಲೇ ವಿಶೇಷ ತರಬೇತಿಯನ್ನು ನೀಡಲಾಗಿದೆ. ಯೋಜನೆ ಅಡಿಯಲ್ಲಿ 1 ರಿಂದ 9ನೇ ತರಗತಿಯ ವಿದ್ಯಾರ್ಥಿಗಳು ತಾವು ಕಲಿತ ಹಿಂದಿನ ಎರಡು ವರ್ಷಗಳ ವಿಷಯಗಳನ್ನು ಅಭ್ಯಾಸ ಮಾಡಬೇಕಿದ್ದು, ಶಿಕ್ಷಕರಿಗೆ ಪ್ರತ್ಯೇಕ ಕೈಪಿಡಿಯನ್ನು ತಯಾರಿಸಲಾಗಿದೆ. ಕೈಪಿಡಿ ಮತ್ತು ಕಲಿಕಾ ಹಾಳೆ ಆಧರಿಸಿ ಶಿಕ್ಷಕರು ಮಕ್ಕಳಿಗೆ ಪಾಠ ಮಾಡುತ್ತಾರೆ. ಪ್ರತಿ ತರಗತಿಯಲ್ಲೂ ಹಿಂದಿನ ಎರಡು ವರ್ಷಗಳ ಅಗತ್ಯ ಕಲಿಕಾ ಫಲಗಳು, ಪ್ರಸ್ತುತ ತರಗತಿಯ ಅಗತ್ಯ ಕಲಿಕಾ ಫಲಗಳನ್ನು ಆಧರಿಸಿ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿರುವುದು ಕಲಿಕಾ ಚೇತರಿಕೆ ಕಾರ್ಯಕ್ರಮದ ವಿಶೇಷವಾಗಿದೆ. ಕಲಿಕಾ ಹಾಳೆಯಲ್ಲಿ ಹಿಂದಿನ ಎರಡು ವರ್ಷಗಳ ವಿಷಯಗಳು ಮಕ್ಕಳಿಗೆ ಎಷ್ಟು ಅರ್ಥವಾಗಿವೆ ಎಂಬುದನ್ನು ಮೌಲ್ಯಮಾಪನ ಮಾಡಿ ಶಿಕ್ಷಕರು ಅಂಕ ನೀಡಬೇಕಿದೆ. ಒಟ್ಟಾರೆಯಾಗಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಕಲಿಕಾ ಚೇತರಿಕೆ ಕಾರ್ಯಕ್ರಮದ ಕಲ್ಪನೆ ನಿಜಕ್ಕೂ ವೈಜ್ಞಾನಿಕ ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯವಶ್ಯಕವಾದ ಮಾದರಿಯಾಗಿದೆ. ಇದರಿಂದ ಶೈಕ್ಷಣಿಕ ವರ್ಷಾಂತ್ಯದಲ್ಲಿ ಮಗುವು ನನ್ನ ಮುಂದಿನ ತರಗತಿಗೆ ಆತ್ಮವಿಶ್ವಾಸದಿಂದ ನಿರ್ದಿಷ್ಟ ಗುರಿಕೌಶಲ ಹಾಗೂ ಉತ್ತಮ ಕಲಿಕಾ ಫಲಗಳೊಂದಿಗೆ ಮುನ್ನಡೆಯಲು ಸಹಕಾರಿಯಾಗಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ನಿಷ್ಪಕ್ಷಪಾತ ತನಿಖೆಯಾಗಲಿ

ಮಾನ್ಯರೆ,

ಗುತ್ತಿಗೆದಾರರಾದ ಸಂತೋಷ್ ಪಾಟೀಲ್ ಆತ್ಮಹತ್ಯೆ ಘಟನೆ ದುರ್ದೈವದ ಸಂಗತಿಯಾಗಿದೆ. ಈ ಆತ್ಮಹತ್ಯೆ ಪ್ರಕರಣವನ್ನು, ಯಾವುದೇ ಪಕ್ಷಪಾತವಿಲ್ಲದೆ ತನಿಖೆ ನಡೆಸಿ ಸತ್ಯಾಂಶವನ್ನು ಹೊರಗೆಡಹುವ ಮೂಲಕ ತಪ್ಪಿತಸ್ಥರಿಗೆ ಕಾನೂನು ರೀತ್ಯಾ, ಶಿಕ್ಷೆಯನ್ನು ಕೊಡಿಸಬೇಕಾಗಿರುವುದು ಬಿಜೆಪಿ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಪ್ರಸ್ತುತ ಬಿಜೆಪಿಯ ಬಹುತೇಕ ನಾಯಕರು ಒಂದಲ್ಲ ಒಂದು ಭ್ರಷ್ಟಾಚಾರದಲ್ಲಿ ತೊಡಗಿ, ಪರ್ಸೆಂಟೇಜ್ ಹಣವನ್ನು ತಿಂದು ತೇಗುತ್ತಿದ್ದಾರೆ. ರಾಜ್ಯದ ಜನರ ತೆರಿಗೆ ಹಣವನ್ನು ಲೂಟಿ ಹೊಡೆದಿದ್ದಾರೆ. ಸಂತೋಷ್ ಪಾಟೀಲ್ ಒಳ್ಳೆಯ ಗುತ್ತಿಗೆದಾರರಾಗಿದ್ದು ಆತ್ಮಹತ್ಯೆಯಂತಹ ದುಡುಕಿನ ನಿರ್ಧಾರವನ್ನು ಕೈಗೊಳ್ಳಬಾರ ದಾಗಿತ್ತು. ಅವರು ಮನಸ್ಸು ಮಾಡಿದ್ದರೆ ಭ್ರಷ್ಟಾಚಾರ ನಿಗ್ರಹದಳ ಅಥವಾ ಲೋಕಾಯುಕ್ತಕ್ಕೆ ದೂರನ್ನು ಕೊಟ್ಟು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಬಹುದಾಗಿತ್ತು. ಈ ಆತ್ಮಹತ್ಯೆಯ ಹಿಂದೆ ಕಾಣದ ಕೈಗಳು ಕೆಲಸ ಮಾಡಿದ್ದು ತನಿಖೆಯಿಂದ ಮಾತ್ರ ಸತ್ಯ ಹೊರಬರಬೇಕಾಗಿದೆ.

–ಎನ್.ಆರ್. ವಿಜಯಕುಮಾರ್, ಮಾನಸೀನಗರ, ಮೈಸೂರು.

ಕಂಡ ಕಂಡಲ್ಲಿ ಸುರಿಯುತ್ತಿದ್ದಾರೆ ಕೋವಿಡ್ ಪರೀಕ್ಷಾ ಕಿಟ್‌ಗಳನ್ನು



ಮಾನ್ಯರೆ,

ಮೈಸೂರು ರಾಜೀವ್ ನಗರದ 3ನೇ ಹಂತದ ಖಾಲಿ ನಿವೇಶನ, ರಸ್ತೆಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಿದ ಕಿಟ್‌ಗಳನ್ನು ಕಂಡ ಕಂಡಲ್ಲಿ ಸುರಿಯಲಾಗುತ್ತಿದೆ. ಇಲ್ಲಿ ವಾಯು ವಿಹಾರಕ್ಕೆ ಹೋಗುವವರು ಆತಂಕದಲ್ಲೇ ವಿಹರಿಸಬೇಕಾಗಿದೆ. ಸಂಬಂಧಿಸಿದವರು ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ನಮೀದ್ ಅಹಮದ್, ರಾಜೀವ್‌ನಗರ, ಮೈಸೂರು.

ಶ್ರೀಲಂಕಾದಲ್ಲಿ ಆರ್ಥಿಕ ಕುಸಿತ : ಮುಂದೇನು?

ಮಾನ್ಯರೆ,

ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿನ ಪರಿಸ್ಥಿತಿ ದಿನೇ ದಿನೇ ಬಿಗಡಾಯಿಸುತ್ತಿದೆ. ಆರ್ಥಿಕ ಸಂಕಷ್ಟಗಳ ಜೊತೆಗೆ ರಾಜಕೀಯ ಅಸ್ಥಿರತೆಯೂ ಸೇರಿಕೊಂಡು ಶ್ರೀಲಂಕಾವನ್ನು ಪ್ರಪಾತಕ್ಕೆ ತಳ್ಳಿದೆ. ಪ್ರತಿಭಟನಾಕಾರರು ರೊಚ್ಚಿಗೆದ್ದು, ಹಿಂಸಾಚಾರಕ್ಕೆ ತೊಡಗಿದ್ದಾರೆ. ಈಗಾಗಲೇ ಕೆಲವು ಸಂಸತ್ ಸದಸ್ಯರನ್ನು ಬೀದಿಯಲ್ಲಿ ಅಟ್ಟಾಡಿಸಿಕೊಂಡು ಹೊಡೆದು ಕೊಲ್ಲಲಾಗಿದೆ. ಪ್ರಧಾನ ಮಂತ್ರಿ ಮಹಿಂದ ರಾಜಪಕ್ಸೆ ಸೇರಿದಂತೆ ಹಲವಾರು ಸಚಿವರ ಮನೆಗಳಿಗೆ ಬೆಂಕಿ ಹಚ್ಚಲಾಗಿದ್ದು, ಸದರಿ ಮನೆಗಳು ಸುಟ್ಟು ಕರಕಲಾಗಿವೆ. ಪ್ರತಿಭಟನಾಕಾರರ ಆಕ್ರೋಶಕ್ಕೆ ಮಣಿದು, ಪ್ರಧಾನಿ ಮಹಿಂದ ರಾಜಪಕ್ಸೆ ಈಗಾಗಲೇ ರಾಜೀನಾಮೆ ನೀಡಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಮುಖ್ಯವಾಗಿ, ಈ ದೇಶದಲ್ಲಿ ರಾಜಕೀಯ ಸ್ಥಿರತೆ ಸ್ಥಾಪನೆ ಆಗಬೇಕಾಗಿದೆ. ದೇಶ ದಲ್ಲಿ ಹೊಸದಾಗಿ ಚುನಾವಣೆ ನಡೆಸಬಹುದು. ಈ ಸಂದರ್ಭವನ್ನು ದುರುಪಯೋಗ ಪಡಿಸಿಕೊಳ್ಳಲು ಚೈನಾ ಸೇರಿದಂತೆ ಕೆಲವು ವಿದೇಶಿ ಶಕ್ತಿಗಳು ಪ್ರಯತ್ನಿಸಬಹುದು. ವಿಶ್ವಸಂಸ್ಥೆ ಶ್ರೀಲಂಕಾಗೆ ಶಾಂತಿ ಪಾಲನಾ ಪಡೆ ಕಳುಹಿಸಿ ಪರಿಸ್ಥಿತಿಯನ್ನು ನಿಭಾಯಿಸಬಹುದು. ಎಲ್ಲಾ ಒಂದು ಹಂತಕ್ಕೆ ಬಂದ ಮೇಲೆ, ಆರ್ಥಿಕ ದುಸ್ಥಿತಿಯ ಪರಿಹಾರಕ್ಕೆ ಮಾರ್ಗೋಪಾಯ ಗಳನ್ನು ಕಂಡುಕೊಳ್ಳಬಹುದು.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಮೂವರು ಕನ್ನಡಿಗರ ಕೊಡುಗೆಗಳು

ಮೊದಲನೆಯವರೇ ಟಿ.ಎಸ್. ವೆಂಕಣ್ಣಯ್ಯನವರು. ಇವರು ಚಳ್ಳಕೆರೆ ತಾಲೂಕಿನ **ತಳುಕು** ಎಂಬ ಹಳ್ಳಿಯಲ್ಲಿ 1.10.1885ರಂದು ಜನಿಸಿದರು. ವೆಂಕಣ್ಣಯ್ಯನವರು ಹೊಸಗನ್ನಡ ಸಾಹಿತ್ಯದ ವಿದ್ವಾಂಸರೆಂದು ಪ್ರಖ್ಯಾತಿ ಪಡೆದರು. ಅಷ್ಟೇ ಅಲ್ಲದೇ ಇವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಕನ್ನಡ ಪ್ರಾಧ್ಯಾಪಕರೂ ಆಗಿದ್ದರು. ಕನ್ನಡದ ಆಶುಕವಿಗಳೂ ಆಗಿದ್ದ ಸುಬ್ಬಣ್ಣನವರು ಇವರ ತಂದೆ. ಪ್ರಾಚೀನ ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಲಕ್ಷ್ಮೀದೇವಮ್ಮನವರೇ ಇವರ ತಾಯಿ. ಇಂತಹ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ವೆಂಕಣ್ಣಯ್ಯನವರು, ತಳುಕು ಗ್ರಾಮದಲ್ಲಿ **ಲೋಯರ್ ಸೆಕೆಂಡರಿ** ಪರೀಕ್ಷೆಯಲ್ಲಿ ತೇರ್ಗಡೆಯಾದರು. ನಂತರ **ಎಫ್.ಎ.** (ಈಗ ಅದು ಇಲ್ಲ) ಪರೀಕ್ಷೆ ಓದಲೆಂದು 1904ರಲ್ಲಿ ವೆಂಕಣ್ಣಯ್ಯನವರು ಮೈಸೂರಿಗೆ ಬಂದರು. ಪರೀಕ್ಷೆ ತೇರ್ಗಡೆಯಾದ ನಂತರ ಬಳ್ಳಾರಿಯ ವಾರ್ಡ್ಲಾ ಕಾಲೇಜಿನಲ್ಲಿ 1906ರಲ್ಲಿ ಮತ್ತು 1907ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರವನ್ನು ಅಧ್ಯಯನ ಮಾಡಿ 1909ರಲ್ಲಿ ಬಿಎ ಪದವಿಯನ್ನು ಪಡೆದರು. ನಂತರ ಇವರು ಕನ್ನಡ ಎಂಎ ಪದವಿಯನ್ನು ಪಡೆದರು.

ಇವರ ವ್ಯಕ್ತಿತ್ವ ಬಹುಮುಖ ಉಳ್ಳದ್ದಾಗಿದ್ದಿತು. ಹೊಸಗನ್ನಡ ಸಾಹಿತ್ಯವನ್ನು ಬೆಳೆಸಬೇಕಾಗಿದ್ದ ಕಾಲದಲ್ಲಿ ವೆಂಕಣ್ಣಯ್ಯನವರು ವಹಿಸಿದ ಪಾತ್ರ ಚಿರಸ್ಮರಣೀಯವಾದುದು. ಇವರು ಅಧ್ಯಾಪಕರಾಗಿದ್ದ ಕಾಲದಲ್ಲಿ ಇವರು ಪ್ರಾಚೀನ ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವಂತೆ ಎಲ್ಲರಿಗೂ ಕರೆ ಕೊಟ್ಟರು. ಅಷ್ಟೇ ಅಲ್ಲದೇ ವೆಂಕಣ್ಣಯ್ಯನವರು, ತಮ್ಮ ವಿದ್ಯಾರ್ಥಿಗಳು ಎಲ್ಲೇ ಇರಲಿ ಅವರೆಲ್ಲರಿಗೂ ಕನ್ನಡದ ದೀಕ್ಷೆಯನ್ನು ನೀಡಿದರು. ತಮ್ಮ ವಿದ್ಯಾರ್ಥಿಗಳ **ಸಾಮರ್ಥ್ಯ, ದೌರ್ಬಲ್ಯ**ಗಳನ್ನು ತಿಳಿದುಕೊಳ್ಳುವಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದರು ಮತ್ತು ಕನ್ನಡದ ಕೆಲಸಗಳು ಸರಾಗವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ವೆಂಕಣ್ಣಯ್ಯನವರು ತರ್ಕ, ವ್ಯಾಜ್ಯ ಮತ್ತು ಪ್ರತಿಭಟನೆಗಳಲ್ಲಿ ಎಂದೂ ಭಾಗವಹಿಸದೇ ಶಾಂತ ಮನಸ್ಕರಾಗಿರುತ್ತಿದ್ದರು. ಸತ್ಸಂಗ, ಆತ್ಮ ವಿಮರ್ಶೆ ಹಾಗೂ ಅಂತರ್ಮುಖರಾಗಿದ್ದ ಇವರು ಸಾಧುಗಳಂತಿದ್ದರು. ವೆಂಕಣ್ಣಯ್ಯನವರು ಆಗ ತಾನೇ ಹುಟ್ಟುತ್ತಿದ್ದ **ಕನ್ನಡ ಸಾಹಿತ್ಯ ಪರಿಷತ್ತು**, ಸೆಂಟ್ರಲ್ ಕಾಲೇಜು (ಬೆಂಗಳೂರು) ಮತ್ತು ಮೈಸೂರಿನ ಮಹಾರಾಜಾ ಕಾಲೇಜುಗಳು ಹಾಗೂ ಕರ್ನಾಟಕ ಸಂಘಗಳು, ಸುಪ್ರಸಿದ್ಧ ಕನ್ನಡ ತ್ರೈಮಾಸಿಕ ಪತ್ರಿಕೆಯಾದ **ಪ್ರಬುದ್ಧ ಕರ್ನಾಟಕ** ಮುಂತಾದ ಪತ್ರಿಕೆಗಳನ್ನು ಪೋಷಿಸಿ ಬೆಳೆಸುವಲ್ಲಿ ಹಾಗೂ **ಹೊಸಗನ್ನಡ ಸಾಹಿತ್ಯ**ವನ್ನು ಬೆಳೆಸುವಲ್ಲಿ ಹಾಗೂ ಅದನ್ನು ಕನ್ನಡಿಗರಲ್ಲಿ ಹರಡಲು ಅದ್ವಿತೀಯ ಪಾತ್ರವನ್ನು ವಹಿಸಿದರು.

ವೆಂಕಣ್ಣಯ್ಯನವರು ಕನ್ನಡದ ಜೊತೆಗೆ **ತೆಲುಗು, ಇಂಗ್ಲಿಷ್, ತಮಿಳು** ಹಾಗೂ **ಬಂಗಾಲಿ** ಸಾಹಿತ್ಯದಲ್ಲಿ ಆಳವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಇವರು ಶ್ರೀ ರಾಮಕೃಷ್ಣ ಲೀಲಾ ಪ್ರಸಂಗದ ಒಂದು ಭಾಗವನ್ನು ಬಂಗಾಲಿಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ ರವೀಂದ್ರನಾಥ ಠ್ಯಾಗೋರರು ಸಾಹಿತ್ಯದ ವಿಷಯವಾಗಿ ಬರೆದ ಅನೇಕ ಪ್ರಬಂಧಗಳನ್ನು ವೆಂಕಣ್ಣಯ್ಯನವರು ಬಂಗಾಲಿಯಿಂದ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಹಾಗೂ ಹರಿಶ್ಚಂದ್ರ ಕಾವ್ಯ ಸಂಗ್ರಹ, **ಕಾದಂಬರಿ ಸಂಗ್ರಹ, ಬಸವರಾಜ ದೇವರ ರಗಳೆ**, ಹಾಗೂ **ಸಿದ್ಧರಾಮ ಚರಿತ್ರೆಯ ಸಂಗ್ರಹ** ಮುಂತಾದವು ವೆಂಕಣ್ಣಯ್ಯನವರು ಸಂಪಾದಿಸಿದ ಮುಖ್ಯ ಕೃತಿಗಳು. ಕಾದಂಬರಿ ಸಂಗ್ರಹ ಹಾಗೂ ಬಸವರಾಜ ದೇವರ ರಗಳೆಗೆ ಇವರು ಬರೆದಿರುವ ಮುನ್ನುಡಿಗಳು ಇವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ **ಕನ್ನಡ ಕೈಪಿಡಿ** ಮತ್ತು **ಹಳಗನ್ನಡ ವ್ಯಾಕರಣ** ಹಾಗೂ ಕನ್ನಡ ಭಾಷಾ ಚರಿತ್ರೆಯ ಕೆಲವು ಭಾಗಗಳನ್ನು ಇವರು ಬರೆದಿದ್ದಾರೆ.

ವೆಂಕಣ್ಣಯ್ಯನವರು 24.2.1939ರಲ್ಲಿ ನಿಧನರಾದರು. ಇವರ ನೆನಪಿಗಾಗಿ ಹಾಗೂ ಇವರ ವ್ಯಕ್ತಿತ್ವ ಮತ್ತು ಇವರ ಸಾಹಿತ್ಯವನ್ನು ಕುರಿತು ಕುವೆಂಪು ಅವರು **ಸಂಸ್ಮರಣಾ ಗ್ರಂಥ**ವನ್ನು 1970ರಲ್ಲಿ ಪ್ರಕಟಿಸಿದರು. ಕುವೆಂಪು ಅವರು ವೆಂಕಣ್ಣಯ್ಯನವರ ವ್ಯಕ್ತಿತ್ವದಿಂದ ವಿಶೇಷವಾಗಿ ಪ್ರಭಾವಿತರಾಗಿದ್ದರು. ಆದುದರಿಂದಲೇ ಕುವೆಂಪು ಅವರು ಬರೆದ **ಶ್ರೀ ರಾಮಾಯಣ ದರ್ಶನಂ** ಮಹಾ ಕಾವ್ಯವನ್ನು ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದಾರೆ. ಇಂದಿಗೂ ಛಾಯಾಪತಿಯವರು ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇವರು ಪ್ರಕಟಿಸಿದ ಪುಸ್ತಕಗಳು ನೂರನ್ನೂ ಮೀರಿತೆಂಬುದು ತಜ್ಞರ ಅಭಿಪ್ರಾಯ.

ಎರಡನೆಯ ಶ್ರೇಷ್ಠರೇ ತೀ.ನಂ.ಶ್ರೀಕಂಠಯ್ಯನವರು. ಇವರು 26.11.1906ರಂದು ತುಮಕೂರು ಜಿಲ್ಲೆಯ ತೀರ್ಥಪುರ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಶ್ಯಾನುಭೋಗ ನಂಜುಂಡಯ್ಯನವರು. ಇವರು ಆರಂಭದ ಶಿಕ್ಷಣವನ್ನು ತೀರ್ಥಪುರ ಮತ್ತು ತುಮಕೂರಿನಲ್ಲಿ ಪಡೆದರು. ನಂತರ ಇವರು ಮೈಸೂರಿನ ಮಹಾರಾಜಾ ಕಾಲೇಜನ್ನು ಸೇರಿ **ರಾಜ್ಯಶಾಸ್ತ್ರ** ಹಾಗೂ **ಅರ್ಥಶಾಸ್ತ್ರ**ಗಳ ಜೊತೆಗೆ ಕನ್ನಡ ಹಾಗೂ ಸಂಸ್ಕೃತವನ್ನು ವ್ಯಾಸಂಗ ಮಾಡಿ 1926ರಲ್ಲಿ ಬಿಎ ಪದವಿಯನ್ನು 6 ಚಿನ್ನದ ಪದಕಗಳೊಡನೆ ಪಡೆದರು. 1028ರಲ್ಲಿ ಎಂಎ ಪದವಿಯನ್ನು ಪಡೆದರು.

1928ರಲ್ಲಿ ಸ್ವಲ್ಪ ಕಾಲ ಅಮಲ್‌ದಾರರಾಗಿ ಕಾರ್ಯನಿರ್ವಹಿಸಿದರು. ಈ ಕೆಲಸ ಇವರಿಗೆ ಇಷ್ಟವಾಗಲಿಲ್ಲ. 1929ರಿಂದ 1952ರ ವರೆಗೆ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. 1953ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉಪ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಧಾರವಾಡದಿಂದ ಹಿಂದಿರುಗಿದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ 1962ರಲ್ಲಿ ನಿವೃತ್ತರಾದರು. 1963ರಿಂದ ಕನ್ನಡ ಸಾಹಿತ್ಯ ಪರಿಷತ್ತು, ಸಿದ್ಧಪಡಿಸಿದ ಕನ್ನಡ–ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ ಶ್ರೀಕಂಠಯ್ಯನವರು ಭಾಷಾ ವಿಜ್ಞಾನದ ದೃಷ್ಟಿಯಿಂದ ಕನ್ನಡ ನಿಘಂಟನ್ನು ಬರೆಯುವ ಪದ್ಧತಿಗೆ ಭದ್ರವಾದ ತಳಪಾಯವನ್ನು ಹಾಕಿದರು.

ತೀನಂಶ್ರೀ ಅವರು ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿದ್ದರು. ವಿಮರ್ಶೆ, ಛಂದಸ್ಸು, ಭಾಷಾ ವಿಜ್ಞಾನ ಹಾಗೂ ಕಾವ್ಯ ಮೀಮಾಂಸೆಗಳು ಇವರಿಗೆ ಪ್ರಿಯವಾದ ವಿಷಯಗಳಾಗಿದ್ದವು. ಇವುಗಳಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದ ತೀನಂಶ್ರೀ ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳೇ **ಒಲುಮೆ (1932)**, **ಬಿಡಿಮುತ್ತು**(1970), **ಕಾವ್ಯ ಸಮೀಕ್ಷೆ**(1947), **ರಾಕ್ಷಸ ಮುದ್ರಿಕೆ**(1942), **ನೆಂಟರು**(1963), **ಪಂಪ ಸಮಾಲೋಕನ** (1950), **ನಂಬಿಯಣ್ಣನ ರಗಳೆ**(1946), **ಗದಾಯುದ್ಧಸಂಗ್ರಹ** (1949), **ಭಾರತೀಯ ಕಾವ್ಯಮೀಮಾಂಸೆ**(1953), ಕಾವ್ಯಾನುಭವ (1970) ಇವುಗಳು ತೀನಂಶ್ರೀ ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

1954ರಲ್ಲಿ ತೀನಂಶ್ರೀ ಅವರು 8 ತಿಂಗಳ ಕಾಲ ವಿದ್ಯೆಗೆ ಸಂಬಂಧಿಸಿದ ಪ್ರವಾಸಗಳನ್ನು ಕೈಗೊಂಡರು. ಈ ಪ್ರವಾಸ ಕಾಲದಲ್ಲಿ ಇವರು **ಬರ್ಕ್ಲಿ, ಹಾರ್ವರ್ಡ್, ಏಲ್** ವಿಶ್ವವಿದ್ಯಾನಿಲಯಗಳನ್ನು ಸಂದರ್ಶಿಸಿದರು. ನಂತರ 1955ರಲ್ಲಿ **ಹಾಲೆಂಡ್, ಫ್ರಾನ್ಸ್, ಇಟಲಿ** ದೇಶಗಳಲ್ಲಿ ಪ್ರವಾಸ ಮಾಡಿ 1956 ರಲ್ಲಿ ಮೈಸೂರಿಗೆ ಹಿಂದಿರುಗಿದರು.

ತೀನಂಶ್ರೀ ಅವರು ವಿದ್ಯಾ ಇಲಾಖೆಗಾಗಿ ಸಿದ್ಧಪಡಿಸಿಕೊಟ್ಟ ಕನ್ನಡ ಮಾಧ್ಯಮ ವ್ಯಾಕರಣ (1959) ಭಾಷಾ ವಿಜ್ಞಾನ ದೃಷ್ಟಿಯಿಂದ ಬರೆದುಕೊಟ್ಟ ಗ್ರಂಥ.

ಇವರಿಗೆ ಅನೇಕ ಗೌರವ ಮತ್ತು ಪ್ರಶಸ್ತಿಗಳು ದೊರೆತಿದ್ದವು. ದೆಹಲಿಯಲ್ಲಿ 1957ರಲ್ಲಿ ನಡೆದ ಪ್ರಾಚ್ಯವಿದ್ಯಾ ಸಮ್ಮೇಳನ ಸಂಸ್ಕೃತ ವಿಭಾಗಕ್ಕೆ ಇವರು ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1958ರಲ್ಲಿ ನಡೆದ ಭಾಷಾ ವಿಜ್ಞಾನದ ಬೇಸಿಗೆ ಶಾಲೆ (ಸಮ್ಮರ್ ಸ್ಕೂಲ್) ಪೂರ್ಣ ಜವಾಬ್ದಾರಿಯನ್ನು ತೀನಂಶ್ರೀ ವಹಿಸಿದ್ದರು. ಅಖಿಲ ಭಾಷಾ ವಿಜ್ಞಾನಿಗಳ ಸಂಘಕ್ಕೆ ಇವರು 1961ರಲ್ಲಿ ಗದಗಿನಲ್ಲಿ ನಡೆದ ಗೋಷ್ಠಿಗೆ ಅಧ್ಯಕ್ಷರಾಗಿದ್ದರು.

ತೀನಂಶ್ರೀ ಅವರು 7.9.1966ರಂದು ನಿಧನರಾದರು. ಇವರ ಸ್ಮರಣೆಗಾಗಿ **ಶ್ರೀಕಂಠ ತೀರ್ಥ** ಎಂಬ ಸಂಸ್ಮರಣ ಗ್ರಂಥವನ್ನು 1976ರಲ್ಲಿ ಪ್ರಕಟಿಸಲಾಯಿತು. ತೀನಂಶ್ರೀ ಅವರು ರಚಿಸಿದ **ಭಾರತೀಯ ಕಾವ್ಯ ಮೀಮಾಂಸೆ** ಗ್ರಂಥಕ್ಕೆ 1989ರಲ್ಲಿ ಮರಣೋತ್ತರ ಪಂಪ ಪ್ರಶಸ್ತಿಯನ್ನು ನೀಡಲಾಯಿತು.

ಮೂರನೆಯ ಶ್ರೇಷ್ಠರಾದ ಬಿ.ಎಂ.ಶ್ರೀ ಅವರನ್ನು ಅಧ್ಯಯನ ಮಾಡಬಹುದು. ಬಿ.ಎಂ.ಶ್ರೀ ಅವರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ **ಸಂಪಿಗೆ** ಎಂಬ ಹಳ್ಳಿಯಲ್ಲಿ 1.3.1884ರಂದು ಜನಿಸಿದರು. ಇವರಮ ತಂದೆ ಬೆಳ್ಳೂರು ಮೈಲಾರಯ್ಯನವರು ಹಾಗೂ ತಾಯಿ ಭಾಗೀರಥಮ್ಮನವರು. ಇವರು ತಂದೆಯವರಿಂದ ಇಂಗ್ಲಿಷ್ ಕಲಿತರು. ಆನಂತರ ಇವರು ಮೈಸೂರಿನ ಮಹಾರಾಜಾ ಕಾಲೇಜು ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ 1906ರಲ್ಲಿ ಬಿಎ ಪದವಿ ಪಡೆದರು. 1907ರಲ್ಲಿ ಮದ್ರಾಸಿಗೆ ಹೋಗಿ ಬಿ.ಎಲ್. ಪದವಿಯನ್ನು ಗಳಿಸಿದರು. 1909ರಲ್ಲಿ ಮೈಸೂರಿಗೆ ಹಿಂದಿರುಗಿ ಇಂಗ್ಲಿಷ್ ಅಧ್ಯಾಪಕರಾದರು. ಇದೇ ಹುದ್ದೆಯಲ್ಲಿ 1930ರವರೆಗೂ ಮುಂದುವರೆದರು. ಇವರು 1926ರಿಂದ 1931ರ ವರೆಗೆ ಕುಲಸಚಿವರಾಗಿ ಕಾರ್ಯನಿರ್ವಹಿಸಿದರು. ಇವರು 1938ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು.

ಬಿ.ಎಂ.ಶ್ರೀ ಅವರು 1912ರಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದ ಎ ಹ್ಯಾಂಡ್ ಬುಕ್ ಆಫ್ ರ್‍ಹೆಟೋರಿಕ್ (ಅಲಂಕಾರ ಶಾಸ್ತ್ರ ಟಿಪ್ಪಣಿ) ಮುಖ್ಯವಾದ ಕೃತಿ. 1941ರಲ್ಲಿ ಇವರು ಧಾರವಾಡದಲ್ಲಿ ನೀಡಿದ ಎರಡು ಉಪನ್ಯಾಸಗಳು, **ಕನ್ನಡವನ್ನು ಅಭಿವೃದ್ಧಿ ಪಡಿಸುವ ಬಗೆಗೆ** ಹಾಗೂ **ಕನ್ನಡವನ್ನು ಕಟ್ಟೋಣ** ಎಂಬ ಗ್ರಂಥಗಳು ಕರ್ನಾಟಕದ ಜನರಲ್ಲಿ ಜಾಗೃತಿಯನ್ನುಂಟು ಮಾಡಿದವು. 1921ರಲ್ಲಿ **ಇಂಗ್ಲಿಷ್ ಗೀತೆಗಳು** ಗ್ರಂಥದ ಕನ್ನಡಾನುವಾದ ಪ್ರಕಟವಾಯಿತು. 1926ರಲ್ಲಿ ರನ್ನನ ಗದಾಯುದ್ಧ ಕಾವ್ಯವನ್ನಾಧರಿಸಿ ಇವರು ರಚಿಸಿದ ಗದಾಯುದ್ಧ ನಾಟಕಂ ಪ್ರಕಟವಾಯಿತು.

1935ರಲ್ಲಿ ಇಂಗ್ಲಿಷ್‌ನಲ್ಲಿ ಪ್ರಕಟವಾದ ಪಾರಸಿಕರು ಈಸ್ಕಲಸ್ ಗ್ರಂಥವನ್ನು ಬಿ.ಎಂ.ಶ್ರೀ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಿ.ಎಂ.ಶ್ರೀ ಅವರು ಕನ್ನಡ ಬಾವುಟ ಎಂಬ ಸಂಕಲನಕ್ಕೆ ಸಂಪಾದಕರಾಗಿದ್ದರು. ಬಿ.ಎಂ.ಶ್ರೀ ಅವರು ಬರೆದ ಅನೇಕ ಕವನಗಳು 1943ರಲ್ಲಿ ಹೊಂಗನಸು ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಬಿ.ಎಂ.ಶ್ರೀ ಅವರು 1948ರಲ್ಲಿ ವಿವಿಧ ಸ್ಥಳಗಳಲ್ಲಿ ಮಾಡಿದ ಭಾಷಣಗಳನ್ನು ಹಾಗೂ ಮುನ್ನುಡಿಗಳನ್ನು ಸೇರಿಸಿ ಒಳ್ಳೆಯ ಸಾಹಿತ್ಯ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. 1949ರಲ್ಲಿ ಬರೆದ ಬಿ.ಎಂ.ಶ್ರೀ ಅವರ ಬರಹಗಳು ಎಲ್ಲರಿಗೂ ಮಾದರಿಯಾಗಿವೆ. 1946ರಲ್ಲಿ ಇಸ್ಲಾಂ ಸಂಸ್ಕೃತಿ ಎಂಬ ಪುಸ್ತಕವನ್ನು ಬಿ.ಎಂ.ಶ್ರೀ ಅವರು ಕನ್ನಡಕ್ಕೆ ಭಾಷಾಂತರಿಸಿದರು.

ಇವರು ಕನ್ನಡ ಪ್ರಚಾರಕ್ಕೆ ಕೈಗೊಂಡ ಯೋಜನೆಗಳು ನೂರಾರು. ಇವರು ಕರ್ನಾಟಕದ ಹಳ್ಳಿಗಳಲ್ಲಿ ಸಂಚಾರ ಮಾಡಿ, ಜನಗಳಲ್ಲಿ ಕನ್ನಡದ ಬಗ್ಗೆ ಆಸಕ್ತಿ ಹಾಗೂ ಗೌರವ ಬರುವಂತೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಹಣೆಯಲ್ಲಿ ಇವರು ಪಾಲ್ಗೊಂಡ ನಂತರ ಉಪನ್ಯಾಸಗಳು, ಗ್ರಂಥಗಳ ಪ್ರಕಟಣೆ, ಸಾಹಿತ್ಯ ಪರೀಕ್ಷೆಗಳ ವ್ಯವಸ್ಥೆ, ಸಮಾರಂಭಗಳು, ಕನ್ನಡ ಪತ್ರಿಕೆಗಳ ಆರಂಭ, ಕನ್ನಡ ಅಚ್ಚುಕೂಟ(ಪ್ರಿಂಟಿಂಗ್ ಪ್ರೆಸ್) ಸ್ಥಾಪನೆ, ದತ್ತಿ ನಿಧಿಗಳ ಏರ್ಪಾಡು ಮೊದಲಾದವು ಗಳನ್ನು ಮಾಡಿದರು.

ಕನ್ನಡದಲ್ಲಿ ಪೌರಾಣಿಕ ಹಾಗೂ ರುದ್ರ ನಾಟಕಗಳ ರಚನೆಗೆ ಇವರು ಹೆಚ್ಚಿನ ಪ್ರೋತ್ಸಾಹ ನೀಡಿದರು. ಕನ್ನಡ ಸಾಹಿತ್ಯ ವಿಭಾಗ ಹಾಗೂ ಅನುಸರಿಸಬೇಕಾದ ಕ್ರಮಗಳಲ್ಲಿ ಕೆಲವು ಅಂಶಗಳನ್ನು ಇವರು ಸೂಚಿಸಿದರು. **ಚಾವುಂಡರಾಯ ಪುರಾಣ** ಹಾಗೂ **ಅಜಿತಪುರಾಣ**ಗಳಲ್ಲಿರುವ ಸಾಮ್ಯತೆಯನ್ನು ಇವರು ತೋರಿಸಿದರು. ಕನ್ನಡ ಮೊದಲೋ ಅಥವಾ ತಮಿಳು ಮೊದಲೋ ಎಂಬ ಪ್ರಶ್ನೆ ಬಂದಾಗ ಕನ್ನಡ ರೂಪಗಳು ಮೊದಲು ಬಂದವೆಂದೂ, ತಮಿಳು ಆನಂತರ ಬಂದಿತೆಂದೂ ಉದಾಹರಣೆಗಳ ಮೂಲಕ ಇವರು ತೋರಿಸಿದರು.


ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡಿನ ಚರಿತ್ರೆ, ಕನ್ನಡ ಕೈಪಿಡಿ, ಕಾವ್ಯ ಸಂಗ್ರಹಗಳು ಸೇರಿದಂತೆ ಹಲವು ಈ ಬಗೆಯ ಗ್ರಂಥಗಳಿಂದ ಕನ್ನಡ ವಿದ್ವತ್ತಿಗೆ ಇವರು ತಳಹದಿಯನ್ನು ಹಾಕಿದರು.

ಬಿ.ಎಂ.ಶ್ರೀ ಅವರಿಗೆ ಕನ್ನಡ ನಾಡು, ನುಡಿಗಳ ಮುನ್ನುಡಿಗೆ ಮನ್ನಣೆ ಎಂಬಂತೆ ಕನ್ನಡದ ಜನತೆ ತನ್ನ ಕೃತಜ್ಞತೆಯನ್ನು ಸಲ್ಲಿಸಿದೆ. 1928ರಲ್ಲಿ ಗುಲ್ಬರ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಇವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. 1938ರಲ್ಲಿ ಮೈಸೂರಿನ ಮಹಾರಾಜರು ಇವರಿಗೆ **ರಾಜಸೇವಾಸಕ್ತ** ಎಂಬ ಬಿರುದನ್ನು ನೀಡಿ ಗೌರವಿಸಿದರು.

ಬಿ.ಎಂ.ಶ್ರೀ ಅವರ ಸಮಗ್ರ ಕೃತಿಗಳನ್ನು **ಶ್ರೀ ಸಾಹಿತ್ಯ** ಎಂಬ ಹೆಸರಿನಲ್ಲಿ ಮೈಸೂರಿನಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದೆ.

ಬಿ.ಎಂ.ಶ್ರೀ ಅವರು ಕನ್ನಡ ನುಡಿಗೆ ಸಲ್ಲಿಸಿದ ಸೇವೆಯನ್ನು ಗಮನಿಸಿ ಮೈಸೂರಿನ ನಾಗರಿಕರು ಬಿ.ಎಂ.ಶ್ರೀ ನಗರವನ್ನು ಸ್ಥಾಪಿಸಿದ್ದಾರೆ. ಬಿ.ಎಂ.ಶ್ರೀ ಅವರು ತಮ್ಮ 672ನೇ ವಯಸ್ಸಿನಲ್ಲಿ 1946ರಲ್ಲಿ ನಿಧನರಾದರು.

ಕನ್ನಡವು ಬಿಎಂಶ್ರೀ ಅವರು ತೋರಿದ್ದ ಮಾರ್ಗದಲ್ಲೇ ಅಭಿವೃದ್ಧಿಯಾಗುತ್ತಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಸಾಹಿತ್ಯಭವನವಿದೆ. ಇದು ಇಂದಿಗೂ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ. ಇವುಗಳ ಮೂಲಕ ಕನ್ನಡಿಗರೆಲ್ಲರೂ ಬಿಎಂಶ್ರೀ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಬಹುದು.



ತಳುಕಿನ ವೆಂಕಣ್ಣಯ್ಯ



ತೀ.ನಂ. ಶ್ರೀಕಂಠಯ್ಯ



ಬಿ.ಎಂ.ಶ್ರೀ

ರಾಜಕೀಯದಲ್ಲಿದ್ದರೂ ಸಿನಿಮಾ ಮಾತ್ರ ಬಿಡಲ್ಲ

ಮೈಸೂರಲ್ಲಿ ಭಾವನಾ; 'ಮೈಸೂರು ಮಿತ್ರ'ನ ಜೊತೆ ಮಾತುಕತೆ

ಮೈಸೂರು,ಮೇ13(ಜಿಎ)– 'ಚಂದ್ರಮುಖಿ ಪ್ರಾಣಸಖಿ' ಖ್ಯಾತಿಯ ನಟಿ ಭಾವನಾ ಭರತನಾಟ್ಯ ಕಲಾವಿದೆಯೂ ಹೌದು. ತಮ್ಮ ಗುರುಗಳಾದ ಕರ್ನಾಟಕ ಕಲಾಶ್ರೀ ವಿದ್ವಾನ್ ಸತ್ಯನಾರಾಯಣ ರಾಜು ಅವರೊಂದಿಗೆ ಮೈಸೂರಿನಲ್ಲಿ 'ಭರತನಾಟ್ಯ ಕಾರ್ಯಾಗಾರ'ದಲ್ಲಿ ಪಾಲ್ಗೊಂಡಿದ್ದಾರೆ.

ಮೈಸೂರಿನ ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಕುವೆಂಪುನಗರದಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ಆಯೋಜಿಸಿರುವ ಮೂರು ದಿನಗಳ ಭರತ ನಾಟ್ಯ ಕಾರ್ಯಾಗಾರಕ್ಕೆ ಇಂದು ಚಾಲನೆ ದೊರಕಿತು. ಈ ವೇಳೆ ನಟಿ ಭಾವನಾ ಪ್ರಸ್ತುತ ವಿದ್ಯಮಾನ, ತಮ್ಮ ಸಿನಿಮಾ, ರಾಜಕೀಯ ಜೀವನ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮನಬಿಚ್ಚಿ ಮಾತನಾಡಿದರು.

ಮೈಸೂರು ಕನ್ನಡವನ್ನು ಬಿಂಬಿಸುವ ಅತೀ ಶ್ರೇಷ್ಠ ನಗರ. ನನಗೆ ಮೈಸೂರೆಂದರೆ ತುಂಬಾ ಇಷ್ಟ ನನ್ನ ಗುರುಗಳಾದ ವಿದ್ವಾನ್ ಸತ್ಯನಾರಾಯಣ್ ಅವರೊಂದಿಗೆ ಆರು ವರ್ಷಗಳ ಹಿಂದೆ ಭರತನಾಟ್ಯ ಪ್ರದರ್ಶನ ನೀಡಿದ್ದೆ ಈಗ ಮತ್ತೆ ಮೈಸೂರಿಗೆ ಬಂದಿರುವುದಕ್ಕೆ ತುಂಬಾ ಸಂತಸವಾಗಿದೆ ಎಂದು ತಿಳಿಸಿದರು.

ಚಿತ್ರರಂಗ ಬಿಡುವ ಮಾತೇ ಇಲ್ಲ: ಸದಾಕಾಲ ತೆರೆಯ ಮೇಲೆ ಕಾಣಿಸುತ್ತಿಲ್ಲ ಎಂದ ಮಾತ್ರಕ್ಕೆ ನಾನು ಚಿತ್ರರಂಗದಲ್ಲಿ ಸಕ್ರಿಯವಾಗಿಲ್ಲ ಎಂದರ್ಥವಲ್ಲ ನಾನು ಚಿತ್ರರಂಗ ತೊರೆಯುವ ಆಲೋಚನೆಯನ್ನೂ ಮಾಡಿಲ್ಲ. ಮೈ ಮನಸ್ಸಿನಲ್ಲಿ ನೃತ್ಯ ಕಲೆ ಯಾವ ರೀತಿ ಆವರಿಸಿದೆಯೋ ಹಾಗೆಯೇ ಅಭಿನಯವೂ ಕೂಡ ಜನಪ್ರಿಯತೆ ಸಿಕ್ಕಿರುವುದು ಸಿನಿಮಾರಂಗದಿಂದ. ರಾಜಕೀಯಕ್ಕೆ ಹೋದರೂ ಮತ್ತೆ ಸಿನಿಮಾಗೆ ಬಂದೇ ಬರುತ್ತೇನೆ. ನೋಟು ಅಮಾನ್ಯೀಕರಣ ಪರಿಣಾಮ ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಏರುಪೇರಾಗಿತ್ತು. ರಾಜಕೀಯದಲ್ಲಿಯೂ ಸಕ್ರಿಯವಾಗಿದ್ದರಿಂದ ನಾನು ಎರಡು ವರ್ಷ ಬ್ರೇಕ್ ತೆಗೆದು ಕೊಂಡು ಸ್ವಯಂ ವಿಮರ್ಶೆ ಮಾಡಿಕೊಂಡಿದ್ದೇನೆ ಯಾವ ಮಾರ್ಗದಲ್ಲಿ ನಡೆದರೆ ಉತ್ತಮ ಎಂಬುದನ್ನು ಮನಗಂಡಿದ್ದೇನೆ. ಸದ್ಯದಲ್ಲೇ ನಿರ್ಮಾಪಕಿಯಾಗುವುದರ ಜೊತೆಗೆ ನಿರ್ದೇಶನ ಮಾಡುವ ಆಲೋಚನೆಯೂ ಇದೆ ಎಂದು ಸಿನಿಮಾ ಮೇಲಿನ ಪ್ರೀತಿ ವ್ಯಕ್ತಪಡಿಸಿದರು.

ಕೆಜಿಎಫ್ ಚಿತ್ರದಿಂದ ಚಿತ್ರರಂಗದಲ್ಲಿ ಒಂದು ರೀತಿ ಬದಲಾವಣೆ ಗಾಳಿ ಬೀಸಿದೆ. ಹೊಸ ತಂತ್ರಜ್ಞಾನದ ಜೊತೆಗೆ ಚಿತ್ರರಂಗದ ಆಲೋಚನೆಯೂ ಬದಲಾಗಿದೆ.

ಧಾರಾವಾಹಿಯಿಂದ ಮನೆಗಳ ತಲುಪಿದ್ದೇನೆ: ಸಿನಿಮಾ ಹಾಗೂ ಧಾರಾವಾಹಿ ಎರಡೂ ಮಾಧ್ಯಮಗಳೇ. ಆದರೆ ನಿರ್ಮಾಣ ಹಾಗೂ ಪ್ರದರ್ಶನದಲ್ಲಿ ಒಂದಷ್ಟು ವ್ಯತ್ಯಾಸಗಳಿರುತ್ತವೆ. ಸಿನಿಮಾದಲ್ಲಿ ನಟಿಸುವಾಗ ಭಯ ಇರುತ್ತದೆ. ಏಕೆಂದರೆ ಹಿಂದಿನ ಸಿನಿಮಾವನ್ನು ತಲೆಯಲ್ಲಿ ಇಟ್ಟುಕೊಂಡು ಹೊಸ ಚಿತ್ರ ಮಾಡಬೇಕಿರುತ್ತದೆ. ಬಿಡುಗಡೆ ನಂತರ ಗಲ್ಲಾಪೆಟ್ಟಿಗೆಯ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಆದರೆ ಧಾರಾವಾಹಿಯಲ್ಲಿ ಆ ರೀತಿ ಯಾವುದೂ ಇರುವುದಿಲ್ಲ. ಕಿರುತೆರೆಯಲ್ಲಿ ಮೊದಲ ಬಾರಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಆರಂಭದಲ್ಲಿ ಭಯವಿತ್ತು. ನನ್ನ ಪಾತ್ರವನ್ನು ಜನರು ಹೇಗೆ ಸ್ವೀಕರಿಸುತ್ತಾರೋ ಎಂಬ ಗೊಂದಲವಿತ್ತು. ಆದರೆ 'ರಾಮಾಚಾರಿ' ಧಾರವಾಹಿಯ ಪಾತ್ರದ ಮೂಲಕ ಕರ್ನಾಟಕದ ಪ್ರತಿಯೊಂದು ಮನೆ ತಲುಪಿದ್ದು, ವೀಕ್ಷಕರು ಆ ಪಾತ್ರದ ಹೆಸರಿಡಿದು ಗುರುತಿಸುತ್ತಿರುವುದು ಖುಷಿ ತಂದಿದೆ ಎಂದು ಕಿರುತೆರೆಯ ಅನುಭವ ಬಿಚ್ಚಿಟ್ಟರು.

ಕಾಂಗ್ರೆಸ್‌ನಲ್ಲಿದ್ದೇನೆ: ಹಿರಿಯ ಮುಖಂಡರಾದ ಕೆ.ಸಿ.ವೇಣುಗೋಪಾಲ್ ಮತ್ತು ಸುರ್ಜೇವಾಲ ಆತ್ಮೀಯತೆಯಿಂದ ಕಾಂಗ್ರೆಸ್‌ಗೆ ಬರಮಾಡಿಕೊಂಡಿದ್ದಾರೆ. ಸದ್ಯ ಪಕ್ಷದಲ್ಲಿ ಯಾವುದೇ ಸ್ಥಾನಮಾನ ನೀಡಿಲ್ಲ. ನನಗೂ ಯಾವುದೇ ರೀತಿಯ ಆಕಾಂಕ್ಷೆ ಇಲ್ಲ. ಪಕ್ಷದ ವೇದಿಕೆ ಮೂಲಕ ಸಂಘಟನೆ ಮತ್ತು ಸಮಾಜದ ಒಳಿತಿಗಾಗಿ ಶ್ರಮಿಸುತ್ತೇನೆ. ಬೆಲೆ ಏರಿಕೆಯಿಂದ ಎಲ್ಲಾ ವರ್ಗದ ಕುಟುಂಬದವರಿಗೂ ಬಿಸಿ ತಟ್ಟಿದಂತೆ ನನಗೂ ತಟ್ಟಿದೆ. ಜನರ ಈ ಸಮಸ್ಯೆಗಳನ್ನು ಆಧರಿಸಿ ಜನಪ್ರತಿನಿಧಿಯನ್ನು ಆಯ್ಕೆ ಮಾಡುತ್ತಾರಾ ಅಥವಾ ರಾಮಜನ್ಮ ಭೂಮಿ ವಿಚಾರವನ್ನು ಇಟ್ಟುಕೊಳ್ಳುತ್ತಾರೋ ನೋಡಬೇಕು. ಈ ಬಾರಿ ಕಾಂಗ್ರೆಸ್ ಜಯ ಗಳಿಸಲಿದೆ ಎಂಬ ಆಶಯವಿದೆ. ಕಳೆದ ಬಾರಿಯಷ್ಟು ನಾನು ರಾಜಕೀಯದಲ್ಲಿ ಸಕ್ರಿಯವಾಗಿಲ್ಲ. ಹಾಗಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಆಸೆ ಇಲ್ಲ. ಆದರೆ ಪಕ್ಷದಿಂದ ಆಯ್ಕೆ ಮಾಡಿದರೆ ಸ್ಪರ್ಧಿಸುತ್ತೇನೆ. ರಾಜಕೀಯದಲ್ಲಿ ಅಭಿನಯ ಮಾಡಿದವರೆಲ್ಲ ಸೋತ್ತಿದ್ದಾರೆ ಮತ್ತು ಜನರಿಗೆ ಅದು ಸುಲಭವಾಗಿ ತಿಳಿಯುತ್ತದೆ ಎಂದು ತಿಳಿಸಿದರು.

ಹಿಂದಿ ಹೇರಿಕೆ ಸಹಿಸಲ್ಲ: ಸಾಂವಿಧಾನಿಕವಾಗಿ ಹಿಂದಿ ರಾಷ್ಟ್ರ ಭಾಷೆಯಲ್ಲ. ರಾಷ್ಟ್ರ ಭಾಷೆಯಾಗಿ ಅದನ್ನು ಹೇರಿದರೆ ನಾನು ದಕ್ಷಿಣ ಭಾರತದ ಪ್ರಜೆಯಾಗಿ ಕನ್ನಡತಿಯಾಗಿ ಒಪ್ಪುವುದಿಲ್ಲ. ಸುದೀರ್ಘವಾದ ಇತಿಹಾಸ ನಮ್ಮ ಕನ್ನಡ ಭಾಷೆಗೆ ಇದೆ. ನಮ್ಮ ಭಾಷೆಗೆ ಹಿಂದಿ ಸಮವಲ್ಲ ಎಂದು ಇದೇ ವೇಳೆ ಅಭಿಪ್ರಾಯಿಸಿದರು.





Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಳಿಗೆ ಬಾಡಿಗೆಗೆ ಇದೆ
10X20 ಮೂಲೆ ನಿವೇಶನ
ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಎದುರು ಹೈ ಟೆನ್ಷನ್ ರಸ್ತೆ, 621, 10ನೇ ಮೈನ್ ವಿಜಯನಗರ, 2ನೇ ಹಂತ, ಮೈಸೂರು, ಸಂಪರ್ಕಿಸಿ
6361166487

ಶೀಟ್ ಮೆಟಲ್
ವರ್ಕರ್, ಗ್ರಿಲ್ ವರ್ಕ್ ಫ್ಯಾಬ್ರಿಕೇಟರ್ಸ್ ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ.
9845809755

ಬೇಕಾಗಿದ್ದಾರೆ
ಕ್ಯಾಡ್, ಕೋರಲ್ ಡ್ರಾದಲ್ಲಿ ಅನುಭವವಿರುವ ನುರಿತ ಡಿಟಿಪಿ ಆಪರೇಟರ್‌ಗಳು ಬೇಕಾಗಿದ್ದಾರೆ. ನೇರ ಸಂದರ್ಶನಕ್ಕೆ ಹಾಜರಾಗಿ.
ವಿಳಾಸ: ಗ್ರೀನ್ ಡಾಟ್
ನಂ. 32, ಭೂದೇವಿ ಫಾರಂ ಎದುರು, ಪಡುವಾರಹಳ್ಳಿ ಸಿಗ್ನಲ್ ಬಳಿ, ಹುಣಸೂರು ರಸ್ತೆ, ಮೈಸೂರು

SRI VINAYAKA CENTRAL SCHOOL, TARIPURA
WANTED TEACHERS
Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.
8971577685 / 9980631121
Send your resume through SMS

ಮನೆ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಹಾಗೂ ಸೈಟು ಮಾರಾಟಕ್ಕಿದೆ
9901772178

SITE FOR SALE
30x40
MUDA Approved Site for Sale Opposite University Layout 100 Meter from ring road
7026901111

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan, 3D Elevation ಸಹಿತ ಮನೆ Construction ಮಾಡಿ ಕೊಡುತ್ತೇವೆ
8970257787

ಸೂರ್ಯ ಕೋಚಿಂಗ್
(Commerce)
ಅತ್ಯುತ್ತಮ ಕೋಚಿಂಗ್ 2ನೇ PUC Commerce ವಿದ್ಯಾರ್ಥಿಗಳಿಗೆ Accounts, Statistics, Business, Maths, Economics ಇತ್ಯಾದಿ ಕಡಿಮೆ Fee ಬಡವಿದ್ಯಾರ್ಥಿಗಳಿಗೆ ಉಚಿತ. 100% personal Attention ಪ್ರತೀ ವಿದ್ಯಾರ್ಥಿಗೆ. Prof: ಶರ್ಮ
9901932751

ಬೇಕಾಗಿದ್ದಾರೆ
ಅನುಭವವುಳ್ಳ ಡಿ.ಟಿ.ಪಿ ಆಪರೇಟರ್, ಪ್ರಿಂಟಿಂಗ್ ಮಿಷನ್ ಮತ್ತು ಕಟಿಂಗ್ ಮಿಷನ್ ಸಹಾಯಕರು. ಕೂಡಲೇ
ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್
12/1, ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570001

WANTED
Office Assistant / Accountant with computer knowledge in Tally.
Salary: Rs. 15,000 per month. *Contact:*
Mob: 9342118153
Work place in Bannimantap

SITE FOR SALE
9x9
0.5 km from Bogadi Gaddige Main Road
7026901111

WANTED
RECEPTIONIST
naturals®
India's No.1 hair and beauty salon
Opp. to Akshay Bhandar, Saraswathipuram, Mysore - 570009
M : 90362 06233

WANTED
1) Senior Engineer (B.E / Diploma)
2) Civil Engineer (Electrical Engineer (B.E /Diploma)
3) Drafting Engineer & Site Engineer.
4) Total Station operator & Assistant
5) 3D Designer
CADD FORUM
9916266181

ಬೇಕಾಗಿದ್ದಾರೆ
ಅಕೌಂಟೆಂಟ್
ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಸಂಬಳ: 12,000/–
ಆಕರ್ಷಕ ವೇತನ
ಅಶೋಕ ರೋಡ್, ಮೈಸೂರು
Call: 97418 25653

SITE FOR SALE
30x40
ಪೂರ್ವಾಭಿಮುಖ
ಜ್ಞಾನಭಾರತಿ ಲೇಔಟ್
ದಡದಹಳ್ಳಿ, ಮುಡಾ ಖಾತೆ ಆಗಿದೆ
9342123373

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ದ್ವಿಚಕ್ರವಾಹನವುಳ್ಳ, ಮೈಸೂರು ನಗರ ಮತ್ತು ತಾಲ್ಲೂಕಿನವರು ಸನ್‌ಡೈರೆಕ್ಟ್ ಡಿ.ಟಿ.ಹೆಚ್ ಆಫೀಸ್‌ನಲ್ಲಿ ಕೆಲಸ ಮಾಡಲು ಪಿ.ಯು.ಸಿ ಅಥವಾ ಐಟಿಐ ಮಾಡಿರುವ ಹುಡುಗರು ಬೇಕಾಗಿದ್ದಾರೆ ಹಾಗೂ ಬೇಸಿಕ್ ಕಂಪ್ಯೂಟರ್ ತಿಳಿದಿರುವ ಹುಡುಗಿಯರು ಮೈಸೂರು ನಗರದವರು ಮಾತ್ರ ಬೇಕಾಗಿದ್ದಾರೆ. ಸಂಪರ್ಕಿಸಿ. ಜಾಣ್ವಿ ಎಂಟರ್‌ಪ್ರೈಸಸ್ ಅಭಿಷೇಕ್ ಸರ್ಕಲ್, ಮಂಚೇಗೌಡನಕೊಪ್ಪಲು, ಹೆಬ್ಬಾಳು, ಮೈಸೂರು
9964555920 / 9164409202

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ಸಂಬಳ: 14,700/– (8 Hours, W/o), ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

FOR RENT
New Godown (Ware House) 9,000 Sq.Ft. B.M.Road, Induvalu, Mandya
9900359955
9902631426

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

Ambari Travels Smile on every mile...
Mysore to Bangalore Drop or Pickup
9611337069

Vehicle	City Drop	Airport
Mini	Rs. 2,300/-	Rs. 2,600/-
Sedan	Rs. 2,600/-	Rs. 3,000/-
INNOVA	Rs. 3,600/-	Rs. 4,400/-

COVID-19 Sanitized Taxi's available for all Up and Down Trips and Local Trips

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಿ ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸಮಯ: 9.00 am to 5.00 pm (Basic Salary + Incentives)
8904131762

WANTED TEACHERS
Dedicated and Service oriented Teachers are required for English Medium Higher Primary School at Rajive Nagar, Mysore. Contact: The Corrrespondent St. Peter's English Medium School, 1st Stage, Rajendra nagar, Mysore.
9900526856 / 9731531948

ಬೇಕಾಗಿದ್ದಾರೆ
ಮುಂಬರುವ ಪ್ರಖ್ಯಾತಿವುಳ್ಳ ಸಸಿಕಟ್ಟಿಗಾಗಿ ಪೂರ್ಣ ಸಮಯದ (Full time) ಸಸಿಕಟ್ಟು ವ್ಯಕ್ತಿಯನ್ನು ಹುಡುಕುತ್ತಿದೇವೆ. ಕಸಿ, ಗೊಬ್ಬರ ಮತ್ತು ಎಲ್ಲಾ ರೀತಿಯ ಸಸ್ಯಗಳನ್ನು ನೆಡುವಿಕೆ ಮತ್ತು ಸೋರ್ಸಿಂಗ್ ವ್ಯಾಪಕವಾದ ಅನುಭವವನ್ನು ಹೊಂದಿರಬೇಕು. ಅನುಭವದ ಆಧಾರದ ಮೇಲೆ ಸಂಬಳ ಮತ್ತು ಸವಲತ್ತುಗಳು ಸುಮಾರು 8000 ಇಂದ 20000 ತನಕ. ಸ್ಥಳ: ಬೋಗಾದಿ, ಮೈಸೂರು. ಸಂಪರ್ಕ ಸಂಖ್ಯೆ:
8104620965

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04045209698

ASFT Fashion Design Courses
3 MONTHS SHORT TERM COURSES
* Basic Hand Embroidery * Basic Stitches & Motifs Kurtha * Saree Designing for hand * Embroidery Motif * Basic Sewing * Basic Necklines * 2 Frock Zabla Petticoat * Blouse Lining without lining.
Srirampura Branch - Alpha Intl. School.
Proposed Branch: Gokulam & Udayagiri
Mob: 782 993 7469

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

HOUSE FOR SALE
MUDA 30x40
New 4 BHK Duplex with 22 Squares Furnished House, E/F Door at SBM Layout, Bogadi - Rs.1.40 Cr Pillar construction, 100 mtrs from Gaddige Road
Direct Owner: 6361295132

SITES FOR SALE
30x40 - 26.40 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limits) 1.5 kms from J P Nagar Ring Road.
8660105902

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೈಟುಗಳು ಮತ್ತು ಮನೆ ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ, ಮೈಸೂರು
8050345574

FOR SALE
MUDA APPROVED
30X40
EAST FACING
Immediate Registration and Bank Loan Available
1 KM from SJCE Campus
Bogadi Main Road
Call: 98800 65122 / 77956 09173

SC ಆದಿಕರ್ನಾಟಕ (ಬಲಗೈ)
B.E, M.Tech, MBBS, MD, MS, BAMS, M.Sc, MCA, MBA, M.Com, MA Phd, B.Sc, B.Com. BA B.Ed
ವಧುವರರಿಗೆ ಸಂಪರ್ಕಿಸಿ
ನವಿಲೂರು ರಂಗಸ್ವಾಮಿ
ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ,
ಎನ್. ಆರ್. ಮೊಹಲ್ಲಾ, ಮೈಸೂರು
Ph. No.8711974172

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

HOUSE FOR SALE
MUDA Allotted 40x55
N/F, 4 BHK Duplex Furnished, 32 squares, 15 years Old House at T K Layout, 4th Stage, Prime Location, Rs. 1.95 cr. Owner will give 6 months Time for registration. Brokers Excuse
8660105902

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಪ್ರಮಾಣ ಪತ್ರ
ಮೈಸೂರು ಸಿಟಿ, ಆರ್.ಎಸ್. ನಾಯ್ಡುನಗರ, ಕೆಸರೆ, 2ನೇ ಹಂತ, ಮನೆ ನಂಬರ್ 392ರಲ್ಲಿ ವಾಸವಾಗಿರುವ ಲೇಟ್ ಶ್ರೀ ವೀರನಾಯಕ ಉರುಫ್ ಸಿ.ಪಿ. ಭದ್ರಾಚಾರ್ ರವರ ಧರ್ಮಪತ್ನಿಯಾದ ರುಕ್ಮಿಣಿ ಅಲಿಯಾಸ್ ರುಕ್ಮಿಣಿಬಾಯಿ ಪ್ರಮಾಣೀಕರಿಸುವುದೇನೆಂದರೆ, ನಮ್ಮ ಯಜಮಾನರ ಹೆಸರು ವೀರನಾಯಕ ಉರುಫ್ ಸಿ.ಪಿ. ಭದ್ರಾಚಾರ್ ಆಗಿರುತ್ತದೆ. ಅದರಂತೆ ನನ್ನ ಹೆಸರು ರುಕ್ಮಿಣಿ ಅಲಿಯಾಸ್ ರುಕ್ಮಿಣಿಬಾಯಿ ಆಗಿರುತ್ತದೆ. ಕೆಲವು ದಾಖಲೆಗಳಲ್ಲಿ ನಮ್ಮ ಯಜಮಾನರ ಹೆಸರು ಸಿ.ಪಿ. ಭದ್ರಾಚಾರ್ ಎಂತಲೂ ಕೆಲವು ದಾಖಲೆಗಳಲ್ಲಿ ವೀರನಾಯಕ ಎಂದು ನಮೂದಾಗಿರುತ್ತದೆ. ಅದರಂತೆ ನನ್ನ ಹೆಸರು ಸಹ ಕೆಲವು ದಾಖಲೆಗಳಲ್ಲಿ ರುಕ್ಮಿಣಿ ಎಂತಲೂ ಕೆಲವು ದಾಖಲೆಗಳಲ್ಲಿ ರುಕ್ಮಿಣಿಬಾಯಿ ಎಂತಲೂ ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳೂ ನಮ್ಮದೇ ಆಗಿರುತ್ತವೆ. ನಮ್ಮ ಯಜಮಾನರು ಮೃತರಾಗಿರುತ್ತಾರೆ, ಎಂದು ನೋಟರಿ ಪುಷ್ಪಲತಾ. ಸಿ. ರವರ ಎದುರು ದಿನಾಂಕ 18.4.2022 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ರುಕ್ಮಿಣಿಬಾಯಿ

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5300
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ
(T&C) ಸಂಪರ್ಕಿಸಿ– S.M ಗೋಲ್ಡ್ ಕಂಪನಿ
8050518881

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

WANTED
Branch Manager for a Security agency with Experience, Good English Communication & Computer knowledge Age 30-45 Yrs. Contact:
8884081119
E-mail:backofcmys@gmail.com

HOUSE FOR SALE
30x50 MUDA
NEW 4 BHK Duplex with Home Theatre, N/F Door with Pillar Construction at Somnathnagar, Dattagalli -Rs 1.95 cr (Brokers excuse)
Contact Owner: 9035412545

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

FOR RENT
1BHK Independent 1st Floor, N-Facing for Small Family at S.Puram Vegetarian only No Brokers
9480383250

ಸೈಟು ಬೇಕಾಗಿದೆ
ಪೋಲೀಸ್ ಲೇಔಟ್
ಜೆ.ಎಸ್.ಎಸ್ 2ನೇ ಹಂತ,
ಶಿಕ್ಷಕರ ಬಡಾವಣೆ
ಜೆ.ಎಸ್.ಎಸ್ 1ನೇ ಹಂತ
9901772178

WANTED JOB URGENTLY
Direct Field Excutive Marketing for Steel Industry. Experience- Fresher / Exprienced, Education: Not Necessary should have good Kannada Communication. Salary upto : 13,000 + Incentive, Location: T.K.Layout.
9380640669

MEDICAL CLINIC CABIN
Ready to occupy for Medical Clinic 10x14 Feet with Well Furnished. Hebbal Main Road, Mysore
9343983533

WANTED
Computer Teacher
for Institution - Female Candidates only, Salary 8-10k, Contact:
9663304337

ಮಾರಾಟಕ್ಕಿದೆ
ತಳೂರು ಸರ್ಕಲ್‌ನಲ್ಲಿ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ.
East Face - 40x60
East Face - 40x60
West Face - 30x40
7975141102

ಶ್ರೀ ರಾಘವೇಂದ್ರ ಬಿಲ್ಡಿಂಗ್ ಕನ್ಸ್ಟ್ರಕ್ಷನ್
ನಿಮ್ಮ ಅದೃಷ್ಟದ ಮನೆಯನ್ನು ವಾಸ್ತು ಪ್ರಕಾರ ಹೊಸ ಮನೆಯನ್ನು ನಾವು ಕಟ್ಟಿಕೊಡುತ್ತೇವೆ ಹಾಗೂ ಯಾವುದೇ ರೀತಿ ಹಳೆ ಮನೆಯ ಆಲ್ಟ್ರೇಶನ್ ಕೆಲಸ ವಿದ್ದರೂ ಹೇಳಿ ಮಾಡಿಕೊಡುತ್ತೇವೆ. (Plan Approval, 3D Elevation) ಮಾಡಿಕೊಡುತ್ತೇವೆ. ಇಂದೇ ಕರೆ ಮಾಡಿ
8749004423 / 9481738565

60X40
MUDA SITE FOR SALE
Adjacent to Vijayanagara IV Stage, Near SVEI School, Belawadi:
Rs. 2500/- Sq.Ft. Negotiable
Contact Owner :
7019212497
9448350216

FOR SALE
1)30x40 attach Brahmins Layout 12 lks
2)30x40 Karle habitat opp University Layout
3) 43 x66 G+1 Saraswathipuram
4) 40x60 JP Nagar
5) 20x30 Sathagalli 2nd stage
6) 30x40 G+floor New House Bogadi Near Hari Vidyalaya
PRAKRUTHI PROPERTIES
90359 90359 / 95386 90359

ಮನೆ ಬಾಡಿಗೆಗೆ ಇದೆ
ವಿಳಾಸ ಚಾಮುಂಡಿ ವಿಹಾರ ಲೇಔಟ್, 1ನೇ ಫ್ಲೋರ್, ನಂ. 65/ಎ, 5ನೇ ಕ್ರಾಸ್, ಎರಡು ಬೆಡ್ ರೂಮ್ ಅಟ್ಯಾಚ್ಡ್, ನಜರ್‌ಬಾದ್
9900160604 / 9845391016

HOUSE FOR SALE
20x30 Site 5.5 Sq.Ft. Built up area. Ground Floor South Facing, 'M' Block, Kuvempunagar, Mysore
9342114528

ಶ್ರೀ ರಾಮ್ ಟೂರ್
29–05–2022 ರಿಂದ ವಿಮಾನದಲ್ಲಿ ನೇಪಾಳ ಮುಕ್ತಿನಾಥ್, ಕಾಶಿ, ಪುರಿ ಜಗನ್ನಾಥ್, ಜಾರ್ಖಂಡ್, ವೈದ್ಯನಾಥ ಎಲ್ಲಾ ಸೇರಿ 40,000/–
9108933383

FOR SALE
Conventional Hall 22000 Sq. Ft. For Sale at Bilikere
Contact:
7026901111

ಜಮೀನು ಜೆ.ವಿ.ಗೆ ಲಭ್ಯವಿದೆ
7 ಎಕರೆ ಜಮೀನು ಸಿಎಂಸಿ ಲಿಮಿಟ್ಸ್‌ನಲ್ಲಿ (ಮೈಸೂರು ಜಿಲ್ಲೆ) ಜಂಟಿ ಅಭಿವೃದ್ಧಿ ವಸತಿ ಬಡಾವಣೆಗೆ ಲಭ್ಯವಿದೆ. ಕಡಿಮೆ ಬಂಡವಾಳ ಅಧಿಕ ಲಾಭ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9880059793

ಬೇಕಾಗಿದ್ದಾರೆ
ಗ್ಲೋಬಲ್ ಏಜೆನ್ಸಿ (Global Agency) 8th, 9th, 10th, ITI, Diploma, Salary: 15,000 to 20,000/- ಉಚಿತ ಊಟ Free (Food) No.27/C, Metagalli Post, Hebbal Main Road to Lokanayaka Nagar, Mysore
9916739611 / 9900973818
8747973876 / 8197750343

WANTED
* Sales & Marketing Executive
* Digital Marketing
* Web - Site Developer
* Retired revenue officer
For Leading Real - Estate Company Since 1974
Contact:
0821-4004002
mysorejobsuv1974@gmail.com

ಮೈಸೂರು ಮ್ಯಾರೇಜ್ ಲಿಂಕ್ಸ್
ಎಲ್ಲಾ ಜಾತಿಯ ವಧು ವರರು, ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆಯ ಯೋಗವನ್ನು ತಿಳಿಸಲಾಗುತ್ತದೆ. ವಧು – ವರರಿಗೆ ಅದೃಷ್ಟದ ರುದ್ರಾಕ್ಷಿಯನ್ನು ಉಚಿತವಾಗಿ ಕೊಡಲಾಗುತ್ತದೆ.
ಡಾ.ಗುರೂಜಿ ಮೈಸೂರು
6361740552

WANTED
Drivers Wanted for TATA 1109 and Eicher 11.10, Mysore to Chennai and Hyderabad open Vehicle
9902076396
9538811425

ಹೊಸ ಮನೆ ಮಾರಾಟಕ್ಕಿದೆ
30x40
ಡೂಪ್ಲೆಕ್ಸ್ ಮನೆ, ಪೂರ್ವ ದಿಕ್ಕು, ವಿದ್ಯಾರಣ್ಯಪುರಂ, ಮೈಸೂರು.
9900335553

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ 01/06/22 ಕಾಶಿ, ಗಯಾ, ಬಾಬಾ ಬೈದ್ಯನಾಥ, ಅಯೋಧ್ಯೆ.
9 ದಿನಗಳ ಶ್ರೀ ಅಮರನಾಥ ಹಾಗೂ ವೈಷ್ಣೋದೇವಿ ಪ್ರವಾಸ, ಶ್ರೀನಗರ, ಜಮ್ಮು, ದಾಲ್ ಲೇಕ್, ಗುಲ್ಮಾರ್ಗ 9/7/22
13 ದಿನಗಳ ಚಾರ್‌ಧಾಮ್ ಪ್ರವಾಸ, ಬದ್ರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ ಹಾಗೂ ಇತರೆ 11/06/22
8970949434 / 9008381022

ಬೇಕಾಗಿದ್ದಾರೆ (VACANCY)
ಕೂರ್ಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಫ್ಲೇವುಡ್ ಕಂಪನಿಗೆ 18 ರಿಂದ 50 ವರ್ಷದ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಕೋಮಲ್ ಎಂಟರ್‌ಪ್ರೈಸಸ್
ರತ್ನಯ್ಯ: 9900889325
ಜೋರೇಗೌಡ: 8050905152
ಇಂಟರೀವ್ ಏಕ್ಸೆಲ್ ಪಬ್ಲಿಕ್ ಸ್ಕೂಲ್ ಹತ್ತಿರ
ಸಮಯ: ಬೆಳಿಗ್ಗೆ 9.30 ರಿಂದ 12.30 ರವರೆಗೆ

ಕ್ವಿಕ್ ಮ್ಯಾರೇಜಸ್
ಎಲ್ಲಾ ಜಾತಿಯ ವಧು–ವರರಿಗಾಗಿ & ವಿಧುರ – ವಿಚ್ಛೇದಿತ ವಧು – ವರರಿಗಾಗಿ ಕೂಡಲೇ ಸಂಪರ್ಕಿಸಿ
9343175000

TECHERS REQUIRED
Vidyavahini School (R)
#282/8, Near Cauvery Circle, hebbal, 2nd Stage, Mysuru-570017.
N.S.T, D.ED, B.A/M.A- English
B.Sc., B.Ed - Mathematics
D.P.Ed/ B.P.Ed
Computer Teacher
Email: vidyavahini06@gmail.com
9844032278 / 7795115811

SITE FOR SALE
30x51 Dimension at Prakruthi Layout, T.N.Pura Road, Mysore
7975393882
7019032729

ಅಡುಗೆ ಭಟ್ಟರು ಬೇಕಾಗಿದ್ದಾರೆ
ಕೆಫೆಟೇರಿಯಾದಲ್ಲಿ ಬೆಳಗ್ಗಿನ ಉಪಹಾರ ತಯಾರಿಸಲು ಉತ್ತಮ ಅನುಭವಿ ಅಡುಗೆ ಭಟ್ಟರು ಬೇಕಾಗಿದ್ದಾರೆ. (ಇಡ್ಲಿ, ವಡಾ, ಬಾತ್) ಮತ್ತು ಸಂಜೆ ಗೋಬಿ, ಚೈನೀಸ್ ಮತ್ತು ಫಾಸ್ಟ್‌ಫುಡ್ ತಯಾರಿಸಲು ಅನುಭವವಿರುವವರು ಬೇಕಾಗಿದ್ದಾರೆ.
ಸ್ಥಳ: ಸೂರ್ಯ ಬೇಕರಿ ಹತ್ತಿರ,
ಸಂಪರ್ಕಿಸಿ: ಎಂ. ವೆಂಕಟರಮಣ
7396703919

TAILOR REQUIRED
Blouse and Chudidar ಹೊಲಿಯಲು ಅನುಭವವುಳ್ಳ Tailor ಬೇಕಾಗಿದ್ದಾರೆ. ವಿವರಗಳಿಗೆ ಸಂಪರ್ಕಿಸಿ
9448467950

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ, ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಪಂ॥ ಎಸ್.ಮಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಘೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ, ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುಮತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಖಾಯಂ ವಿಳಾಸ: ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವೆಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಮೈಸೂರು ಮಿತ್ರ ಶನಿವಾರ 14 ಮೇ 2022

ಸಾಲ ಹಿಂದಿರುಗಿಸಿದರೂ ಗಿರವಿ ಇಟ್ಟಿದ್ದ ಒಡವೆ ನೀಡದ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಪ್ರತಿಭಟನೆ

ಶ್ರೀರಂಗಪಟ್ಟಣ, ಮೇ 13(ವಿನಯ್ ಕಾರೇಕುರ)–ಗಿರವಿ ಇಟ್ಟಿದ್ದ ಒಡವೆಗೆ ಬಡ್ಡಿ ಸಮೇತ ಸಾಲ ತೀರಿಸಿದರೂ ಒಡವೆಗಳನ್ನು ಹಿಂದಿರುಗಿಸದ ಬ್ಯಾಂಕ್ ವ್ಯವಸ್ಥಾಪಕಿ ಕ್ರಮ ಖಂಡಿಸಿ ಜನವಾದಿ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣ ತಾಲೂಕಿನ ಕೆ. ಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕಿ ಕಾತ್ಯಾಯಿನಿ ಒಡವೆಗಳನ್ನು ಗ್ರಾಹಕರಿಗೆ ವಾಪಸ್ ನೀಡುವುದನ್ನು ತಡೆಹಿಡಿದ ಪರಿಣಾಮ ಪ್ರತಿಭಟನಾಕಾರರು ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ತಾಲೂಕಿನ ಸಬ್ಬನಕುಪ್ಪೆ ಗ್ರಾಮದ ರೈತ ರಾಜಣ್ಣ ಅನಿವಾರ್ಯ ಕಾರಣದಿಂದ ಕೆನರಾ ಬ್ಯಾಂಕಿನಲ್ಲಿ ಒಡವೆಗಳನ್ನು ಗಿರವಿ ಇಟ್ಟು 1.40 ಲಕ್ಷ ಸಾಲ ಪಡೆದಿದ್ದರು. ಬಳಿಕ ಸಾಲವನ್ನು ಬಡ್ಡಿ ಸಮೇತ ಹಿಂದಿರುಗಿಸಿದ್ದರೂ



ಒಡವೆಗಳನ್ನು ವಾಪಸ್ ನೀಡದೆ ವ್ಯವಸ್ಥಾಪಕಿ ಕಾತ್ಯಾಯಿನಿ ಸತಾಯಿಸುತ್ತಿದ್ದರು. ಅಲ್ಲದೆ ಮಗಳ ಶಿಕ್ಷಣಕ್ಕೆ ಪಡೆದಿದ್ದ ಶೈಕ್ಷಣಿಕ ಸಾಲವನ್ನು ತೀರಿಸುವಂತೆ ಒತ್ತಾಯಿಸಿದ್ದಲ್ಲದೆ, ಅಲ್ಲಿಯವರೆಗೂ ಒಡವೆಗಳನ್ನು ನೀಡುವುದಿಲ್ಲ ಎಂದು ಧಮ್ಕಿ ಹಾಕಿದರು ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ವೇಳೆ ರಾಜಣ್ಣ ಮಂಡ್ಯ ಜಿಲ್ಲಾ ಶಾಖೆಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ರೋಸಿಹೋದ ರಾಜಣ್ಣ ಶೈಕ್ಷಣಿಕ ಸಾಲವನ್ನೂ ತೀರಿಸಿದರು. ಸಾಲ ಹಿಂದಿರುಗಿಸಿ 20 ದಿನ ಕಳೆದರೂ ಒಡವೆಗಳನ್ನು ವಾಪಸ್ ನೀಡದೆ ವ್ಯವಸ್ಥಾಪಕಿ ಕಾತ್ಯಾಯಿನಿ ಸತಾಯಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಒಡವೆಗಳನ್ನು ತಕ್ಷಣ ಹಿಂದಿರುಗಿಸಬೇಕು ಹಾಗೂ ಮುದ್ರಾ ಯೋಜನೆಯಡಿ ಕೃಷಿಕರಿಗೆ ಬಡ್ಡಿರಹಿತ ಸಾಲ ನೀಡಬೇಕೆಂದು ಪಟ್ಟು ಹಿಡಿದು, ವ್ಯವಸ್ಥಾಪಕಿ ಕಾತ್ಯಾಯಿನಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದುದನ್ನು ಗಮನಿಸಿದ ಪೊಲೀಸರು ಮಧ್ಯ ಪ್ರವೇಶಿಸಿ ಪ್ರತಿಭಟನಾಕಾರರನ್ನು ಸಮಾಧಾನಪಡಿಸಿ, ವ್ಯವಸ್ಥಾಪಕಿ ಕಾತ್ಯಾಯಿನಿಯೊಂದಿಗೆ ಚರ್ಚೆ ನಡೆಸಿದರು. ನಂತರ ಸಾಲ ತೀರಿದ ಒಡವೆಗಳನ್ನು ಹಿಂದಿರುಗಿಸುವಂತೆ ಪೊಲೀಸರು ಹೇಳಿದ ನಂತರ ವ್ಯವಸ್ಥಾಪಕಿ ಕಾತ್ಯಾಯಿನಿ ರಾಜಣ್ಣನಿಗೆ ಒಡವೆಗಳನ್ನು ಹಿಂದಿರುಗಿಸಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಜಯಮ್ಮ, ಪ್ರಭಾ, ಸುಶೀಲಾ, ಲಕ್ಷ್ಮಮ್ಮ, ರೈತ ರಾಜಣ್ಣ, ಬಿಜೆಪಿ ಮುಖಂಡ ಇಂದ್ರಕುಮಾರ್ ಸೇರಿದಂತೆ ಹಲವಾರು ಮಂದಿ ಭಾಗವಹಿಸಿದ್ದರು.

ಇಂದು ಪಾಂಡವಪುರದಲ್ಲಿ ಬಿಜೆಪಿ ಸಮಾವೇಶ

ಪಾಂಡವಪುರ, ಮೇ 13– ನಾಳೆ (ಶನಿವಾರ) ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಬಿಜೆಪಿ ಬೃಹತ್ ಸಮಾವೇಶ ಹಾಗೂ ವಿವಿಧ ಪಕ್ಷಗಳ ಕಾರ್ಯಕರ್ತರ ಬಿಜೆಪಿ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ ಎಂದು ಮುಖಂಡ ಡಾ. ಎನ್.ಎಸ್.ಇಂದ್ರೇಶ್ ಹೇಳಿದರು.

2023ರ ಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷವನ್ನು ಸಂಘಟನೆ ಮಾಡುವ ಉದ್ದೇಶ ಹಾಗೂ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಉದ್ದೇಶದಿಂದ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ, ಸಚಿವ ಕೆ.ಸಿ.ನಾರಾಯಣಗೌಡ, ಮಾಜಿ ಸಚಿವ ಸಿ.ಪಿ.ಯೋಗೇಶ್ವರ್, ಕೊಳ್ಳೆಗಾಲ ಶಾಸಕ ಎನ್.ಮಹೇಶ್, ಮೈಸೂರು ಸಂಸದ ಪ್ರತಾಪ್‌ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಅನೇಕ ಬಿಜೆಪಿ ನಾಯಕರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಸಮಾವೇಶಕ್ಕೂ ಮುನ್ನ ಪಟ್ಟಣದ ಐದು ದೀಪ ವೃತ್ತದಿಂದ ಪಕ್ಷದ ನಾಯಕ



ರನ್ನು ಬೈಕ್ ರ‍್ಯಾಲಿ ಮೂಲಕ ವೇದಿಕೆಗೆ ಬರಮಾಡಿ ಕೊಳ್ಳಲಾಗುವುದು. ಸಮಾವೇಶದಲ್ಲಿ ಬಿಜೆಪಿ ಸರಕಾರಗಳ ಸಾಧನೆ ಹಾಗೂ ಪಕ್ಷದ ತತ್ವ ಸಿದ್ಧಾಂತವನ್ನು ಮೆಚ್ಚಿ ಬೇರೆ ಪಕ್ಷದ ಸುಮಾರು ಒಂದೂವರೆ ಸಾವಿರಕ್ಕೂ ಅಧಿಕ ಮಂದಿ ಕಾರ್ಯಕರ್ತರು ಪಕ್ಷ ಸೇರ್ಪಡೆಗೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ರಾಜ್ಯದ ಬಿಜೆಪಿ ನಾಯಕರು ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಪಕ್ಷವನ್ನು ಕಟ್ಟುವ ಕೆಲಸ ಮಾಡಿದ್ದಾರೆ. ಈಗಾಗಲೆ ಮಂಡ್ಯದಲ್ಲಿ ಮಾಜಿ ಸಚಿವರ ಪುತ್ರ ಅಶೋಕ್ ಜಯರಾಂ, ಲಕ್ಷ್ಮೀಅಶ್ವಿನಿಗೌಡ, ಮಾಜಿ ಎಂಎಲ್‌ಸಿ ಸಂದೇಶ್‌ನಾಗರಾಜು ಸೇರಿದಂತೆ ಅನೇಕರು ಪಕ್ಷ ಸೇರ್ಪಡೆಗೊಂಡಿದ್ದಾರೆ. ಇದೇ ತಿಂಗಳು ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ನಾಯಕ ಇಂಡುವಾಳು ಸಚ್ಚಿದಾನಂದ ಅವರು ಪಕ್ಷ ಸೇರ್ಪಡೆಗೊಳ್ಳುತ್ತಿದ್ದಾರೆ. ಮುಂದಿನ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಾಲ್ಕರಿಂದ ಐದು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ವಿಶ್ವಾಸವಿದೆ ಎಂದು ಭವಿಷ್ಯ ನುಡಿದರು.

ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದೆ, ಇದೊಂದು ಕಾರ್ಯಕರ್ತರ ಪಕ್ಷ. ಪಕ್ಷಕ್ಕಿಂತ ದೇಶದ ದೊಡ್ಡದು ಎನ್ನುವ ಸಿದ್ಧಾಂತವನ್ನು ಬಿಜೆಪಿ ಬೆಳೆಸಿಕೊಂಡು ಬಂದಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಅಧ್ಯಕ್ಷ ಅಶೋಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂತರಾಜು, ಜಿಲ್ಲಾ ಕಾರ್ಯದರ್ಶಿ ಮಂಗಳ ನವೀನ್, ಧನಂಜಯ್, ಸಂದೇಶ್, ಗ್ರಾಪಂ ಸದಸ್ಯೆ ಸವಿತ, ಶ್ರೀನಿವಾಸ್ ನಾಯ್ಕ ಸೇರಿ ದಂತೆ ಹಲವರು ಹಾಜರಿದ್ದರು.

ಕೆಆರ್‌ಎಸ್ ತೋಟಗಾರಿಕೆ ಇಲಾಖೆಯಿಂದ ತೆಂಗಿನ ಸಸಿ ವಿತರಣೆ

ಶ್ರೀರಂಗಪಟ್ಟಣ,ಮೇ 13(ಮಂಜು)–ಕೃಷ್ಣರಾಜಸಾಗರದ ಸರ್ಕಾರಿ ಹಣ್ಣಿನ ತೋಟದಲ್ಲಿ ಉತ್ತಮ ಗುಣಮಟ್ಟದ ಸಾವಿರಾರು ಟಿ ಮತ್ತು ಡಿ ಮತ್ತು ತಿಪಟೂರು ಟಾಲ್ ತಳಿಯ ತೆಂಗಿನ ಸಸಿಗಳು ಲಭ್ಯವಿದ್ದು, ಮೇ 13 ರಿಂದ ವಿತರಣೆ ಮಾಡಲಾಗುತ್ತದೆ ಎಂದು ಕೆ.ಆರ್. ಸಾಗರ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ (ರಾಜ್ಯ ವಲಯ) ರಘು ತಿಳಿಸಿದ್ದಾರೆ. ಆಸಕ್ತ ರೈತರು ತಮ್ಮ ಆಧಾರ್ ಮತ್ತು ಆರ್.ಟಿ.ಸಿ.ಯೊಂದಿಗೆ ಕೆ.ಆರ್.ಸಾಗರದ ಉತ್ತರ ಬೃಂದಾವನದಲ್ಲಿನ ಸರ್ಕಾರಿ ಹಣ್ಣಿನ ತೋಟದಲ್ಲಿನ ಕ್ಷೇತ್ರ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀಶ್ ಕುಮಾರ್–9740975342, ಭರತ್ ಕುಮಾರ್–8277206549 ಮತ್ತು ಸುರೇಶ್–9900509776 ಸಂಪರ್ಕಿಸಲು ಕೋರಲಾಗಿದೆ.

ಗೂಡ್ಸ್ ವಾಹನ ಡಿಕ್ಕಿ: ಒಂದೇ ಕುಟುಂಬದ ಇಬ್ಬರು ಮಹಿಳೆಯರು ಸಾವು

ಕೃಷ್ಣರಾಜಪೇಟೆ, ಮೇ 13– ಕೆ.ಆರ್.ಪೇಟೆ ತಾಲೂಕಿನ ಕೊಟಗಹಳ್ಳಿ ಗ್ರಾಮದ ಬಳಿ ಜಲಸೂರು–ಬೆಂಗಳೂರು ಹೈವೆ ರಸ್ತೆಯಲ್ಲಿ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಒಂದೇ ಕುಟುಂಬದ ಇಬ್ಬರು ಮಹಿಳೆಯರು ಮೃತಪಟ್ಟಿರುವ ಘಟನೆ ನಡೆದಿದೆ.



ಕೊಟಗಹಳ್ಳಿ ಗ್ರಾಮದ ಮಂಜುನಾಥ್ ಅವರ ಪತ್ನಿ ಪೂಜಾ (40) ಹಾಗೂ ಮಂಜುನಾಥ್ ಸಹೋದರಿ ಶ್ವೇತಾ(25) ಮೃತಪಟ್ಟವರು. ವಾಹನ ಡಿಕ್ಕಿ ರಭಸಕ್ಕೆ ಮಂಜುನಾಥ್ ಪತ್ನಿ ಪೂಜಾ ಸ್ಥಳದಲ್ಲಿಯೇ ಮೃತಪಟ್ಟರೆ, ಶ್ವೇತಾ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಿಸದೆ ಅವರೂ ಸಹ ಮೃತಪಟ್ಟರು.

ಅಪಘಾತ ನಡೆಸಿ ಪರಾರಿಯಾಗುತ್ತಿದ್ದ ವಾಹನವನ್ನು ಗ್ರಾಮಸ್ಥರು ಹಾಗೂ ಅದೇ ಮಾರ್ಗವಾಗಿ ತೆರಳುತ್ತಿದ್ದ ಜೆಡಿಎಸ್ ಮುಖಂಡ ಎಚ್.ಟಿ.ಮಂಜು ಬೆನ್ನಟ್ಟಿ ತಡೆಹಿಡಿದು ಪೊಲೀಸರಿಗೆ ಒಪ್ಪಿಸಿದರು. ನಂತರ ಅಪಘಾತ ಸ್ಥಳಕ್ಕೆ ಆಗಮಿಸಿದ ಕೆ.ಆರ್. ಪೇಟೆ ಪೊಲೀಸರು ಮಹಜರು ನಡೆಸಿ ಮರಣೋತ್ತರ ಪರೀಕ್ಷೆಯ ನಂತರ ಶವಗಳನ್ನು ಕುಟುಂಬಕ್ಕೆ ಹಸ್ತಾಂತರಿಸಿದರು.

ಕಾವೇರಿ ಸಾಯಿಧಾಮದಲ್ಲಿ ಬುದ್ಧಪೂರ್ಣಿಮೆ ವಿಶೇಷ ಪೂಜೆ



ಶ್ರೀರಂಗಪಟ್ಟಣ, ಮೇ 13–ಇಲ್ಲಿಗೆ ಸಮೀಪದ ದೊಡ್ಡೇಗೌಡನ ಕೊಪ್ಪಲು ಗ್ರಾಮದಲ್ಲಿರುವ ಕಾವೇರಿ ಸಾಯಿಧಾಮದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ಮೇ 16ರಂದು ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆಯಿಂದಲೇ ಶ್ರೀ ಓಂಕಾರೇಶ್ವರ ಹಾಗೂ ಸಾಯಿಬಾಬಾ ಮೂರ್ತಿಗೆ ಅಭಿಷೇಕ ಹಾಗೂ ಪೂಜಾ ಕೈಂಕರ್ಯಗಳು ನಡೆಯಲಿವೆ. ತದನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದ್ದು, ಮಾಹಿತಿಗೆ 9449825051 ಸಂಪರ್ಕಿಸುವಂತೆ ಸಾಯಿಧಾಮದ ವ್ಯವಸ್ಥಾಪಕ ಟ್ರಸ್ಟಿ ಹೆಚ್. ಜಯದೇವ್ ತಿಳಿಸಿದ್ದಾರೆ.

ಗುಂಡ್ಲುಪೇಟೆಯಲ್ಲಿ ಅದ್ದೂರಿ ಬಸವ ಜಯಂತಿ ಮೆರವಣಿಗೆ

ಸಾವಿರಾರು ಜನರು ಭಾಗಿ, ಕುಣಿದು ಕುಪ್ಪಳಿಸಿದ ಯುವಕರು, ಶಾಸಕರು

ಗುಂಡ್ಲುಪೇಟೆ, ಮೇ 13(ಸೋಮ್.ಜಿ)– ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಯುವ ಸೇನೆ ಮತ್ತು ವಿವಿಧವೀರಶೈವ-ಲಿಂಗಾಯತ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು.

ಬಸವ ಜಯಂತಿ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಪಟ್ಟಣದ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣದಲ್ಲಿ ಅಲಂಕೃತ ಅಶ್ವರೂಢ ಬೆಳ್ಳಿ ಬಣ್ಣದ ರಥದ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು. ಸಾವಿರಾರು ಜನರು ಭಾಗವಹಿಸಿದ್ದರು.

ನಂದಿಧ್ವಜಗಳು, ಗೊರವರ ಕುಣಿತ, ವೀರ



ಭದ್ರ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಚೆಂಡೆ ವಾದ್ಯ, ಡಿಜೆ ಸೌಂಡ್ ಇನ್ನೂ ಹಲವು ಕಲಾ ತಂಡಗಳೊಂದಿಗೆ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿತು. ವೀರಶೈವ–ಲಿಂಗಾಯತ ಸಮುದಾಯದವರು ಬಿಳಿ ಬಣ್ಣದ ಶರ್ಟ್ ಮತ್ತು ಲುಂಗಿ ತೊಟ್ಟು, ಬಸವೇಶ್ವರರ ಭಾವಚಿತ್ರವಿರುವ ಕೇಸರಿ ಶಲ್ಯ ಹಾಕಿಕೊಂಡು, ಬಸವೇಶ್ವರ ಭಾವಚಿತ್ರವಿರುವ ಬಾವುಟ ಹಿಡಿದು ಮೆರವಣಿಗೆ ರಂಗು ತಂದರು. ಕಲಾ ತಂಡಗಳ ತಾಳ ಮತ್ತು ಡಿಜೆ ಸೌಂಡ್‌ನ ಹಾಡುಗಳಿಗೆ ಯುವಕರು ನೃತ್ಯ ಮಾಡಿ ಸಂಭ್ರಮಿಸಿದರು. ಪಟ್ಟಣದ ವಿವಿಧ ಅಂಗಡಿಯವರು, ಮುಸ್ಲಿಂ ಸಮುದಾಯದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದವರಿಗೆ ಕುಡಿಯುವ ನೀರು ನೀಡಿದರು.

ಭಾವೈಕ್ಯತೆಗೆ ಸಾಕ್ಷಿಯಾದ ಮೆರವಣಿಗೆ: ಮೆರವಣಿಗೆಯಲ್ಲಿ ಸಾಗಿ ಬಂದ ಅಲಂಕೃತ ಬೆಳ್ಳಿ ಬಣ್ಣದ ಸಾರೋಟು ವಾಹನದಲ್ಲಿದ್ದ ಬಸವೇಶ್ವರ ಪುತ್ಥಳಿಗೆ ಮುಸ್ಲಿಂ ಸಮುದಾಯದವರು ಹಾರ ಹಾಕಿ ಗೌರವ ಸಲ್ಲಿಸಿದರು. ಪರಸ್ಪರ ಬಸವ ಜಯಂತಿ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಭಾವೈಕ್ಯತೆ ಸಾರಿದರು.

ನೃತ್ಯ ಮಾಡಿದ ಶಾಸಕರು: ನೂರಾರು ಸಂಖ್ಯೆಯಲ್ಲಿ ನೃತ್ಯ ಮಾಡುತ್ತಿದ್ದ ಯುವಕರು ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಅವರನ್ನು ಸುತ್ತುವರೆದು ನೃತ್ಯ ಮಾಡುವಂತೆ ಒತ್ತಾಯಿಸಿದರು. ಆರಂಭದಲ್ಲಿ ಒಲ್ಲೆ ಎಂದ ಶಾಸಕರು ನಂತರ ನೃತ್ಯ ಮಾಡಿದರು. ನಂದಿಧ್ವಜವನ್ನು ಹೊತ್ತು ಕುಣಿಯುವ ಗಮನ ಸೆಳೆದರು. ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಚ್.ಎಸ್.ನಂಜಪ್ಪ, ಮುಖಂಡ ಹೆಚ್.ಎಂ.ಗಣೇಶಪ್ರಸಾದ್ ಕೂಡ ನೃತ್ಯ ಮಾಡಿದರು.

ವಿಶ್ವಗುರು ಬಸವೇಶ್ವರ ವೃತ್ತ ಉದ್ಘಾಟನೆ: ಪಟ್ಟಣದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ವಿಶ್ವಗುರು ಬಸವೇಶ್ವರ ವೃತ್ತವನ್ನು ನಾಮಫಲಕ ಅನಾವರಣ ಮಾಡುವ ಮೂಲಕ ಶಾಸಕ ನಿರಂಜನ್‌ಕುಮಾರ್ ಉದ್ಘಾಟಿಸಿದರು. ಪುರಸಭೆ ಅಧ್ಯಕ್ಷ ಪಿ.ಗಿರೀಶ್, ನಂಜಪ್ಪ ನಂಜುಂಡ ಪ್ರಸಾದ್ ಇತರರು ಹಾಜರಿದ್ದರು.

ಸಾವಿನಲ್ಲೂ ಮಾನವೀಯತೆ ಮೆರೆದ ಬಾಲು ಕುಟುಂಬ

ಯಳಂದೂರು ಮೇ 13 (ವಿ.ನಾಗರಾಜು)– ಸಮೀಪದ ಸಂತೇಮರಹಳ್ಳಿಯ ಬಾಲು ಹೋಟೆಲ್ ಮಾಲೀಕರಾದ ಸರಸ್ವತಿ(71) ವರ್ಷ ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಘಾತದಿಂದ ನಿಧನರಾದರು.



ಮೃತರು ಪತಿ ಬಾಲು, ಪುತ್ರರಾದ ಏಕಲವ್ಯ ಪ್ರಶಸ್ತಿ ವಿಜೇತ ಕ್ರೀಡಾಪಟು ಬಿ.ಸುದರ್ಶನ್, ಉಪ ವಲಯ ಅರಣ್ಯಾಧಿಕಾರಿ ಬಿ.ಅನಂತ ರಾಮು, ಪ್ರೊಪ್ರೈಟರ್ ಬಿ.ನಾಗೇಂದ್ರ ಹಾಗೂ ನಿವೃತ್ತ ಸೈನಿಕಬಿಸುರೇಶ್ ಅವರನ್ನು ಅಗಲಿದ್ದಾರೆ.

ಮೃತರ ಕಣ್ಣುಗಳನ್ನು ಮೈಸೂರಿನ ಲಯನ್ಸ್ ಇಂಟರ್ ನ್ಯಾಷನಲ್ ಐ ಬ್ಯಾಂಕ್‌ಗೆ ದಾನ ಮಾಡಿ ಮಾನವೀಯತೆ ಮೆರೆದಿದ್ದಾರೆ ಎಂದು ಡಾ.ಚಂದ್ರಶೇಖರ್ ತಿಳಿಸಿದರು.

ನಗರಕ್ಕೆ ಆಗಮಿಸಿದ ಶ್ರೀ ಚಾಮರಾಜೇಶ್ವರ ಬ್ರಹ್ಮರಥ

● ಮೆರವಣಿಗೆಗೆ ಸಹಕರಿಸಿದ ಮಳೆ ● ರಥ ನೋಡಲು ಮುಗಿಬಿದ್ದ ಜನ

ಚಾಮರಾಜನಗರ, ಮೇ 13(ಎಸ್‌ಎಸ್)– ಇತಿಹಾಸ ಪ್ರಸಿದ್ಧ ನಗರದ ಶ್ರೀ ಚಾಮರಾಜೇಶ್ವರ ನೂತನ ಬ್ರಹ್ಮರಥವನ್ನು ಶುಕ್ರವಾರ ನಗರದಲ್ಲಿ ಬರಮಾಡಿಕೊಳ್ಳಲಾಯಿತು.

ಕಿಡಿಗೇಡಿಯೊಬ್ಬ ರಥಕ್ಕೆ ಬೆಂಕಿ ಹಚ್ಚಿದ್ದರಿಂದ ಹೊಸ ರಥ ನಿರ್ಮಾಣಕ್ಕೆ ಆದೇಶವಾಗಿತ್ತು. ಹೊಸದಾಗಿ ನಿರ್ಮಾಣವಾದ ನೂತನ ರಥ ಆಗಮಿಸಿದ್ದು, ಜನಪ್ರತಿನಿಧಿಗಳು, ಯಜಮಾನರು, ಜಿಲ್ಲಾಡಳಿತ, ಚಾಮರಾಜೇಶ್ವರನ ಭಕ್ತರು ಅದ್ದೂರಿ ಸ್ವಾಗತ ಕೋರಿ, ಜಾನಪದ ಕಲಾತಂಡಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಕಳೆದ ಐದು ವರ್ಷದಿಂದ ರಥೋತ್ಸವ ನಿಂತು ಹೋಗಿ, ಈಗ ಜು.13ರಂದು ರಥೋತ್ಸವ ನಡೆಯಲಿದ್ದು, ರಥೋತ್ಸವಕ್ಕೆ ಮೆರುಗು ಬಂದು, ರಥ ನೋಡಿ ಜನತೆ ಪುಳಕಿತಗೊಂಡು ಭಕ್ತಿಭಾವ ಮೆರೆದರು.

ನಗರದ ಆದಿಶಕ್ತಿ ದೇವಸ್ಥಾನದ ಬಳಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ನಗರಸಭಾ ಅಧ್ಯಕ್ಷೆ ಆಶಾ ನೂತನ ರಥಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಭವ್ಯ ಸ್ವಾಗತ ಕೋರಿದರು.

ಅನಂತರ ವಿವಿದ ಜಾನಪದ ಕಲಾತಂಡಗಳೊಂದಿಗೆ ನಗರದ ಡಿವಿಯೇಷನ್ ರಸ್ತೆ, ಕೆಎಸ್‌ಆರ್‌ಟಿಸಿ ಮುಂಭಾಗಷರೀಫ್ ಸುಲ್ತಾನ್ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ ಮೂಲಕ ದೇವಸ್ಥಾನದ ಅವರಣಕ್ಕೆ ನೂತನ ರಥ ಆಗಮಿಸುತ್ತಿದ್ದಂತೆಯೇ ತಂಡೋಪತಂಡವಾಗಿ ಜನರು ಬಂದು ಬೆಂಗಳೂರಿನ ಬಸವರಾಜು ಬಡಿಗೇರ್ ಮತ್ತು ಮಕ್ಕಳು ನಿರ್ಮಾಣ ಮಾಡಿರುವ ರಥ ನೋಡಿ, ಕುಶಲಕರ್ಮಿಗಳಿಗೆ



ಧನ್ಯವಾದ ಅರ್ಪಿಸಿ ಭಕ್ತಿಭಾವ ಮೆರೆದರು.

ಮೆರವಣಿಗೆಯಲ್ಲಿ ಪುಟ್ಟರಂಗಶೆಟ್ಟಿ, ಎಂ.ರಾಮಚಂದ್ರ, ಆಶಾ, ನಗರಸಭಾ ಸದಸ್ಯರು, ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ, ಅಡಿಷನಲ್ ಎಸ್ಪಿ ಸುಂದರ್‌ರಾಜು, ನಾಡಶೆಟ್ಟರಾದ ಲೋಕನಾಥ್, ಯಜಮಾನರಾದ ಮಾದಣ್ಣ, ಶ್ರೀನಿವಾಸ ಜೆಟ್ಟಪ್ಪ, ಮಹದೇವಶೆಟ್ಟಿ, ಚಾ.ರಂ. ಶ್ರೀನಿವಾಸಗೌಡ, ಸುರೇಶ್‌ನಾಯಕ, ಮಹದೇವನಾಯಕ, ಸುರೇಶ್ ಎನ್, ಋಗ್ವೇದಿ, ಬಂಗಾರ ಸ್ವಾಮಿ, ಗಣೇಶ್‌ದೀಕ್ಷಿತ್, ನಾಗರಾಜದೀಕ್ಷಿತ್, ರಾಮಕೃಷ್ಣ, ವೆಂಕಟನಾಗಪ್ಪಶೆಟ್ಟಿ, ಗು. ಪುರುಷೋತ್ತಮ್, ಜಯಕುಮಾರ್ ಇತರರುಭಾಗವಹಿಸಿದ್ದರು.

ಸಹಕರಿಸಿದ ಮಳೆ: ಗುರುವಾರ ಮಧ್ಯಾಹ್ನದಿಂದ ಶುಕ್ರವಾರ ಬೆಳಗ್ಗೆ 10 ಗಂಟೆಯವರೆಗೆ ಸುರಿಯುತ್ತಿದ್ದ ಮಳೆ, ನೂತನ ರಥ ಆಗಮಿಸಿ ಮೆರವಣಿಗೆಗೆ ಚಾಲನೆ ನೀಡುತ್ತಿದ್ದಂತೆ ಥಟ್ಟನೆ ನಿಂತು ಸಹಕಾರ ನೀಡಿತು, ಇದರಿಂದಾಗಿ ಮೆರವಣಿಗೆ ಸುಲಲಿತವಾಗಿ ನಡೆಯಿತು. ರಥವನ್ನು ನೋಡಲು ಜನರು ಗುಂಪು ಗುಂಪಾಗಿ ಆಗಮಿಸಿದ್ದರು.

ಇಂದು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಥಮ ಘಟಿಕೋತ್ಸವ

ಚಾಮರಾಜನಗರ, ಮೇ 13– ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೊದಲನೇ ವರ್ಷದ ಘಟಿಕೋತ್ಸವ ಮೇ 14ರಂದು ನಡೆಯಲಿದೆ ಎಂದು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಿರ್ದೇಶಕರು ಹಾಗೂ ಡೀನ್ ಡಾ.ಜಿ.ಎಂ.ಸಂಜೀವ್ ತಿಳಿಸಿದ್ದಾರೆ.

ನಗರದ ಹೊರವಲಯದ ಯಡಪುರದ ಬಳಿ ಇರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಶನಿವಾರ ಬೆಳಗ್ಗೆ 11 ಗಂಟೆಗೆ ಸಿಮ್ಸ್ ಕಾಲೇಜಿನ ಆವರಣದಲ್ಲಿ ಮೊದಲ ವರ್ಷದ ಘಟಿಕೋತ್ಸವವನ್ನು ಬೆಂಗಳೂರಿನ ಆರ್‌ಜಿಯುಹೆಚ್‌ಎಸ್ ಕುಲಪತಿ ಡಾ.ಎಂ.ಕೆ. ರಮೇಶ್ ಉದ್ಘಾಟಿಸುವರು. ಘಟಿಕೋತ್ಸವದಲ್ಲಿ ಗೌರವ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತರು, ನವದೆಹಲಿಯ ಎಂ.ಎ.ಆರ್.ಬಿ.ಎನ್.ಎಂ.ಸಿ ಅಧ್ಯಕ್ಷರು ಹಾಗೂ ನಿಮಾನ್ಸ್ ಮಾಜಿ ನಿರ್ದೇಶಕರು ಡಾ.ಬಿ.ಎನ್.ಗಂಗಾಧರ, ಬಿಳಿಗಿರಿರಂಗನಬೆಟ್ಟದ ಬುಡಕಟ್ಟು ಆರೋಗ್ಯ ಚಟುವಟಿಕೆ ಹಾಗೂ ಕರುಣಾ ಟ್ರಸ್ಟ್‌ನ ಸಂಸ್ಥಾಪಕರು ಹಾಗೂ ಪದ್ಮಶ್ರೀ ಪುರಸ್ಕೃತ ಡಾ.ಎಚ್.ಆರ್.ಸುದರ್ಶನ್ ಭಾಗವಹಿಸಲಿದ್ದಾರೆ ಎಂದರು.

ಜಿಲ್ಲೆಯಲ್ಲಿ 2016ನೇ ಸಾಲಿನಲ್ಲಿ ಆರಂಭವಾದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರವೇಶಾತಿಯಲ್ಲಿ 146 ವೈದ್ಯಕೀಯ ವಿದ್ಯಾರ್ಥಿಗಳು ಕಾಲೇಜಿಗೆ ಸೇರ್ಪಡೆಯಾಗಿದ್ದು, ಈ ಪೈಕಿ 138 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ವೈದ್ಯಕೀಯ ವಿಜ್ಞಾನದ ಅಂತಿಮ ಪರೀಕ್ಷೆಯಲ್ಲಿ 3 ವಿದ್ಯಾರ್ಥಿಗಳು ಉನ್ನತ ಶ್ರೇಣಿ (ಡಿಸ್ಟಿಂಗ್ಷನ್) ಪಡೆದಿದ್ದಾರೆ. 58 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 77 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಮೊದಲ ಘಟಿಕೋತ್ಸವದಲ್ಲಿ ಪ್ರಮಾಣಪತ್ರ ಸ್ವೀಕರಿಸಲಿದ್ದಾರೆ ಎಂದು ಅವರು ಹೇಳಿದರು.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಔಷಧ ವಿಭಾಗದ ಮುಖ್ಯಸ್ಥರಾದ ಡಾ.ರಮೇಶ್, ಸಿಮ್ಸ್ ಬೋಧನಾ ಆಸ್ಪತ್ರೆಯ ಡಿಎನ್‌ಎಂಎಸ್ ಡಾ.ಶ್ರೀನಿವಾಸ್, ಡಾ.ಸತೀಶ್, ಸಂಸ್ಥೆಯ ಪ್ರಾಂಶುಪಾಲ ಡಾ. ಗಿರೀಶ್ ವಿ ಪಾಟೀಲ್, ವೈದ್ಯಕೀಯ ವಿದ್ಯಾರ್ಥಿಗಳಾದ ಡಾ. ಸಚಿನ್ ಹಾಗೂ ಡಾ.ಸ್ಫೂರ್ತಿ ಅವರುಗಳು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಅನಧಿಕೃತ ಮನೆ ನೆಲಸಮ



ಮಡಿಕೇರಿ,ಮೇ 13– ನಗರದ ಚೈನ್‌ಗೇಟ್ ಬಳಿ ಚಿತ್ರ ಕಲಾವಿದ ಆರ್.ಸಂದೀಪ್ ಅನಧಿಕೃತವಾಗಿ ನಿರ್ಮಿಸಿದ್ದ ಮನೆಯನ್ನು ನಗರಸಭೆ ನೆಲಸಮಗೊಳಿಸಿದೆ.

ಸಣ್ಣದೊಂದು ಮನೆಯನ್ನು ನಿರ್ಮಿಸಿಕೊಂಡಿದ್ದ ಸಂದೀಪ್ ಇದನ್ನು ಆರ್ಟ್ ಗ್ಯಾಲರಿ ಎಂದು ಕರೆದುಕೊಂಡಿದ್ದರು. ಅನಧಿಕೃತ ನಿರ್ಮಾಣದ ಬಗ್ಗೆ ನಗರಸಭೆ ಆಕ್ಷೇಪ ವ್ಯಕ್ತಪಡಿಸಿತ್ತಲ್ಲದೆ ಈ ಹಿಂದೆ ತೆರವುಗೊಳಿಸಲು ಪ್ರಯತ್ನ ನಡೆಸಿತ್ತು. ಆದರೆ ಸಂದೀಪ್ ಪೋಷಕರು ಆತ್ಮಹತ್ಯೆಯ ಬೆದರಿಕೆವೊಡ್ಡಿ ಕಾರ್ಯಾಚರಣೆ ಸ್ಥಗಿತಗೊಳ್ಳುವಂತೆ ನೋಡಿಕೊಂಡಿದ್ದರು. ಮತ್ತೆ ಹೈಡ್ರಾಮ ಎದುರಾಗಬಹುದೆನ್ನುವ ಕಾರಣದಿಂದ ನಗರಸಭೆ ಅಧಿಕಾರಿಗಳು ಪೊಲೀಸರ ರಕ್ಷಣೆಯೊಂದಿಗೆ ಶುಕ್ರವಾರ ಮುಂಜಾನೆ ಸುಮಾರು 6.30 ಗಂಟೆಗೆ ಜೆಸಿಬಿ ಬಳಸಿ ಮನೆಯನ್ನು ನೆಲಸಮಗೊಳಿಸಿದರು. ಈ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಸಂದೀಪ್ ಹಾಗೂ ಪೋಷಕರು ಕಲಾವಿದನಿಗೆ ಅನ್ಯಾಯವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಶಿಕ್ಷಕನ ಪತ್ನಿ ಆತ್ಮಹತ್ಯೆ

ಕುಶಾಲನಗರ, ಮೇ 13– ಪಟ್ಟಣದ ನೆಹರು ಬಡಾವಣೆಯಲ್ಲಿ ಶಿಕ್ಷಕರೊಬ್ಬರ ಪತ್ನಿ ನೇಣಿಗೆ ಶರಣಾದ ಘಟನೆ ನಡೆದಿದೆ. ಮಾದಾಪಟ್ಟಣ ಸ.ಹಿ.ಪ್ರಾ, ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ಸುರೇಶ್ ಎಂಬವರ ಪತ್ನಿ ಪ್ರಭಾವತಿ (33) ಆತ್ಮಹತ್ಯೆಗೆ ಶರಣಾದವರು.

ಗುರುವಾರ ಸಂಜೆ ನೆಹರು ಬಡಾವಣೆಯ ಮನೆಯಲ್ಲಿ ಪತಿ ಇಲ್ಲದ ಸಮಯದಲ್ಲಿ ಪ್ರಭಾವತಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಈ ಸಂಬಂಧ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವರಸುದಾರರಿಗೆ ಹಸ್ತಾಂತರಿಸಲಾಯಿತು. ಮಹಿಳೆಯ ಅಂತ್ಯಸಂಸ್ಕಾರವನ್ನು ಪಿರಿಯಾಪಟ್ಟಣದಲ್ಲಿ ನೆರವೇರಿಸಲಾಯಿತು. ಶಿಕ್ಷಕರ ಸಂಘದ ಪದಾಧಿಕಾರಿಗಳು ಪಾಲ್ಗೊಂಡು ಪ್ರಭಾವತಿ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಮಳೆಗಾಲ ಬರುತ್ತಿದೆ ತಯಾರಿ ಮಾಡಿಕೊಳ್ಳಿ

ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಸೂಚನೆ

ಮಡಿಕೇರಿ,ಮೇ 13– ಪ್ರಸ್ತುತ ವರ್ಷದ ಮಳೆಗಾಲ ಎದುರಿಸಲು ಪೂರ್ವ ತಯಾರಿ ನಡೆಸಿಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮಡಿಕೇರಿಯ ಜಿ.ಪಂ ಸಭಾಂಗಣದಲ್ಲಿ ನಡೆದ ಮಳೆಗಾಲದ ಪೂರ್ವ ಸಿದ್ಧತಾ ಸಭೆಯಲ್ಲಿ ಮಳೆಗಾಲಕ್ಕೆ ಜಿಲ್ಲಾಡಳಿತ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ವಿವಿಧ ಇಲಾಖಾಧಿಕಾರಿಗಳಿಂದ ಮಾಹಿತಿ ಪಡೆದರು. ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಸಂಭವಿಸಬಹುದಾದ ಪ್ರಾಕೃತಿಕ ವಿಕೋಪದ ಬಗ್ಗೆ ಅಧಿಕಾರಿಗಳು ಎಚ್ಚರ ವಹಿಸಬೇಕು. ಈ ಬಗ್ಗೆ ಸೂಕ್ತ ಪೂರ್ವ ತಯಾರಿ ನಡೆಸಿಕೊಳ್ಳಬೇಕೆಂದು ಸೂಚನೆ ನೀಡಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಪ್ರತಿ ಬಾರಿಯ ಪ್ರವಾಹ ಪರಿಸ್ಥಿತಿ ಒಂದು ಪಾಠವಾಗಿದೆ. ಈ ಬಾರಿ ಏನಾಗಲಿದೆ ಎಂದು ಊಹಿಸುವುದು ಅಸಾಧ್ಯ



ವಾಗಿದೆ. ಆದ್ದರಿಂದ ಒಂದು ಜವಾಬ್ದಾರಿಯುತ ಸರ್ಕಾರವಾಗಿ ಅಂತಹ ಪರಿಸ್ಥಿತಿ ಎದುರಾದಲ್ಲಿ ಅದನ್ನು ಎದುರಿಸಲು ಯಾವೆಲ್ಲಾ ತಯಾರಿ ನಡೆಸಬೇಕು ಅಷ್ಟನ್ನೂ ಮಾಡಲಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ ಈ ಬಾರಿ ಉತ್ತಮ ಮಳೆಯಾಗಲಿದೆ ಎಂದು ಹವಮಾನ ಇಲಾಖೆ ವರದಿ ನೀಡಿದೆ. ಈಗಿರುವ ತಂತ್ರಜ್ಞಾನದಿಂದ ಯಾವ ಸ್ಥಳದಲ್ಲಿ ಭೂ ಕುಸಿತದಂತಹ ಅಪಾಯ ಸಂಭವಿಸಲಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಗುರುತಿಸಿದ ಸ್ಥಳದಿಂದ ಒಂದೂವರೆ ಕಿ.ಮೀ ವ್ಯಾಪ್ತಿಯಲ್ಲಿ ಅನಾಹುತ ಸಂಭವಿಸಬಹುದು ಎಂಬುದನ್ನಷ್ಟೇ ಊಹಿಸಲು ಸಾಧ್ಯ. ಆದ್ದರಿಂದ ಪ್ರತೀ ಗ್ರಾ.ಪಂ ಮಟ್ಟದಿಂದ ಜಿಲ್ಲಾಡಳಿತದವರೆಗೂ ಟಾಸ್ಕ್ ಫೋರ್ಸ್ ರಚಿಸಿ ಮುಂಜಾಗ್ರತೆ ವಹಿಸಲಾಗುವುದು ಎಂದರು. ಮೇ.16ಕ್ಕೆ ಟಾಸ್ಕ್‌ಫೋರ್ಸ್ ಸಭೆ ನಡೆಸಲಿದ್ದು, ಅಂದು ಅಂತಿಮವಾಗಿ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ನಿರ್ಧರಿಸಲಾಗುವುದು ಎಂದು ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ ಉಪಸ್ಥಿತರಿದ್ದರು.

ಗುಡ್ಡ ಕುಸಿದಿದ್ದ ಪ್ರದೇಶಕ್ಕೆ ಸಚಿವರ ಭೇಟಿ



ಮಡಿಕೇರಿ: ಮುಂಗಾರು ಮಳೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಸಿದ್ಧತೆ ಕುರಿತು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಭೆ ನಡೆಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ. ನಾಗೇಶ್ ಅವರು ಈ ಹಿಂದೆ ಮಣ್ಣು/ಗುಡ್ಡ ಕುಸಿತವಾಗಿದ್ದ ಮಕ್ಕಂದೂರು ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ದಲಿತ ಜಾಗೃತಿ ಸಮಾವೇಶ ಪ್ರಯುಕ್ತ ಪ್ರಬಂಧ ಸ್ಪರ್ಧೆ

ಮಡಿಕೇರಿ ಮೇ 9–ಕೊಡಗು ಜಿಲ್ಲಾ ದಸಂಸ ವತಿಯಿಂದ ಡಾ.ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಮತ್ತು ದಲಿತ ಜಾಗೃತಿ ಸಮಾವೇಶ ಮೇ 29ರಂದು ನಡೆಯಲಿದ್ದು, ಇದರ ಪ್ರಯುಕ್ತ ಮಡಿಕೇರಿ ತಾಲೂಕು ಸಮಿತಿಯಿಂದ ಪ್ರಬಂಧ' ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಮಿತಿಯ ತಾಲೂಕು ಸಂಚಾಲಕ ಎ.ಪಿ.ದೀಪಕ್ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಮಹಿಳೆಯರಿಗೆ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಕೊಡುಗೆ' ವಿಷಯದ ಕುರಿತು ಪ್ರಬಂಧ ಸ್ಪರ್ಧೆ ನಡೆಯಲಿದ್ದು, ಮೇ 20ರೊಳಗೆ ಪ್ರಬಂಧವನ್ನು ಕಳುಹಿಸಿಕೊಡುವಂತೆ ಮನವಿ ಮಾಡಿದ್ದಾರೆ.

ಪ್ರಬಂಧ'ಗಳನ್ನು, ಈ deepakdeepuap@gmail.com ವಿಳಾಸಕ್ಕೆ ಈ–ಮೇಲ್ ಮಾಡಬಹುದಾಗಿದೆ. ಮಾಹಿತಿಗಾಗಿ 9611766713 ಅನ್ನು ಸಂಪರ್ಕಿಸಬಹುದಾಗಿದೆ ಎಂದು ದೀಪಕ್ ಹೇಳಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ ಮೇ 13– ಕುಶಾಲನಗರ 220/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರ ಹೋಗುವ ಎಫ್6 ಇಂಡಸ್ಟ್ರಿಯಲ್ ಮತ್ತು ಎಫ್2 ಕಾವೇರಿ ಫೀಡರ್‌ಗಳಲ್ಲಿ ಮುಂಗಾರು ಮಳೆಯ ಮುಂಚಿತವಾಗಿ ನಿರ್ವಹಣಾ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಮೇ 14 ರಂದು ಬೆಳಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಆದ್ದರಿಂದ ಕೂಡ್ಲೂರು, ಕೂಡುಮಂಗಳೂರು, ಸುಂದರನಗರ, ಇಂಡಸ್ಟ್ರಿಯಲ್ ಏರಿಯಾ, ಚಿಕ್ಕತ್ತೂರು, ದೊಡ್ಡತ್ತೂರು, ಬಸವನತ್ತೂರು ಮತ್ತು ಕೂಡಿಗೆ ಸುತ್ತಮುತ್ತ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ಕೋರಿದ್ದಾರೆ.

ಅಪರಾಧ ಸುದ್ದಿಗಳು

ಪಿಜಿಗಳಲ್ಲಿ ಲ್ಯಾಪ್‌ಟಾಪ್, ಮೊಬೈಲ್ ಕಳವು

ಆಂಧ್ರದ ಇಬ್ಬರು ಖದೀಮರ ಬಂಧನ

8 ಲಕ್ಷ ಮೌಲ್ಯದ 8 ಲ್ಯಾಪ್‌ಟಾಪ್, 12 ಮೊಬೈಲ್ ವಶ



ಮೈಸೂರು, ಮೇ 13(ಆರ್‌ಕೆ/ಎಸ್‌ಬಿಡಿ)– ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆಂಧ್ರಪ್ರದೇಶದ ಇಬ್ಬರು ಖದೀಮರನ್ನು ಮೈಸೂರಿನ ಪೊಲೀಸರು ಬಂಧಿಸಿದ್ದಾರೆ.



ಬಾಬು ಮನೋಹರ್

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ ಬೋಡಿಗುಟ್ಟಲಪಲ್ಲಿ ಗ್ರಾಮದ ಬಾಬು(23) ಹಾಗೂ ಬಿ.ಕೆ.ಮನೋಹರ್(34) ಬಂಧಿತ ಆರೋಪಿಗಳು. ಮೈಸೂರು ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಬಿ.ಎಸ್.ರವಿಶಂಕರ್ ನೇತೃತ್ವದ ವಿಶೇಷ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವುದರ ಜೊತೆಗೆ 8 ಲ್ಯಾಪ್‌ಟಾಪ್ ಹಾಗೂ 12 ಮೊಬೈಲ್ ಸೇರಿ ಸುಮಾರು 8 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮನೆ–ಪಿಜಿಯಲ್ಲಿ ಕೈಚಳಕ: ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ಒಂದು ತಿಂಗಳಿಂದ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳ್ಳತನ ಹೆಚ್ಚಾಗಿತ್ತು. ಮನೆ ಹಾಗೂ ಪಿಜಿಯಲ್ಲಿ ಕಂಡು ಕಾಣದಂತೆ ಮಾಯವಾಗುತ್ತಿದ್ದವು. ಇದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಹೇಗಾದರೂ ಕಳ್ಳರನ್ನು ಪತ್ತೆ ಹಚ್ಚಬೇಕೆಂದು ನರಸಿಂಹರಾಜ ಉಪವಿಭಾಗದ ಎಸಿಪಿ ಎಂ.ಶಿವಶಂಕರ್ ಅವರು ಇನ್‌ಸ್ಪೆಕ್ಟರ್ ಬಿ.ಎಸ್.ರವಿಶಂಕರ್ ನೇತೃತ್ವದ ವಿಶೇಷ ತಂಡ ರಚಿಸಿದ್ದರು.

ಕಳ್ಳರ ಪತ್ತೆಗೆ ವಿಶೇಷ ಕಾರ್ಯಾಚರಣೆ ಆರಂಭಿಸಿದ್ದ ಪೊಲೀಸರು, ಕಳ್ಳತನವಾಗಿದ್ದ ಮನೆ ಹಾಗೂ ಪಿಜಿಗಳಿಗೆ ಭೇಟಿ ನೀಡಿ, ಮಾಹಿತಿ ಕಲೆ ಹಾಕಿದ್ದರು. ಅಲ್ಲದೆ ವಿಶೇಷ ಕಾಲೇಜು ಹಾಗೂ ಪಿಜಿಗಳ ಆಸುಪಾಸಿನಲ್ಲಿ ಹೆಚ್ಚಿನ ನಿಗಾ ವಹಿಸಿದ್ದರು. ಈ ನಡುವೆ ವಿಜಯನಗರ 2ನೇ ಹಂತ ವಿದ್ಯಾವರ್ಧಕ ಕಾಲೇಜು ಬಳಿ ನಿನ್ನೆ(ಮೇ 12) ಸಂಜೆ 6 ಗಂಟೆಯಲ್ಲಿ ವಿಶೇಷ ಗಸ್ತಿನಲ್ಲಿದ್ದ ಸಿಬ್ಬಂದಿ, ಅನುಮಾನಾಸ್ಪದವಾಗಿ ಲ್ಯಾಪ್‌ಟಾಪ್ ಬ್ಯಾಗ್ ಹಿಡಿದುಕೊಂಡು ನಿಂತಿದ್ದ ಬಾಬುನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಆತ ನೀಡಿದ ಮಾಹಿತಿ ಮೇರೆಗೆ ಟಿ.ನರಸೀಪುರ ಯಳವಾಡಿಯಲ್ಲಿದ್ದ ಮತ್ತೋರ್ವ ಆರೋಪಿ ಬಿ.ಕೆ.ಮನೋಹರ್‌ನನ್ನು ಇಂದು ಬಂಧಿಸಿದ್ದಾರೆ.

ಇವರಿಬ್ಬರೂ ವಿಜಯನಗರ ಸೇರಿದಂತೆ ಪಿಜಿಗಳು ಹೆಚ್ಚಿರುವ ಬಡಾವಣೆಗಳಲ್ಲಿ ಹೊಂಚು ಹಾಕಿ, ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದರು. ಮುಂಜಾನೆ ವೇಳೆ ವಿದ್ಯಾರ್ಥಿಗಳ ಸೋಗಿನಲ್ಲಿ ನಿರ್ಭೀತಿಯಿಂದ ಪಿಜಿಗಳಿಗೆ ತೆರಳಿ ಕಳ್ಳತನ ಮಾಡುತ್ತಿದ್ದರು ಎಂದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸಿಪಿ ಗೀತಾ ಪ್ರಸನ್ನ ಹಾಗೂ ನರಸಿಂಹರಾಜ ಉಪ ವಿಭಾಗದ ಎಸಿಪಿ ಎಂ.ಶಿವಶಂಕರ್ ಮಾರ್ಗದರ್ಶನ, ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಬಿ.ಎಸ್.ರವಿಶಂಕರ್ ನೇತೃತ್ವದಲ್ಲಿ ನಡೆದ ಈ ಕಾರ್ಯಾರಣೆಯಲ್ಲಿ ಸಬ್‌ಇನ್‌ಸ್ಪೆಕ್ಟರ್ ವಿ.ಆರ್.ಶಬರೀಶ್, ಇಂದ್ರಮ್ಮ, ಕೆ.ನಾರಾಯಣ, ಸಿಬ್ಬಂದಿ ಮುರುಳಿಗೌಡ, ಶಂಕರ್, ಸೋಮಾರಾಧ್ಯ, ಪ್ರದೀಪ್ ಕುಮಾರ್, ತಿಲಕ್ ಕುಮಾರ್, ಅಣ್ಣಪ್ಪ ದೇವಾಡಿಗ, ನಂದೀಶ್, ಮಂಜುನಾಥ್, ಕುಮಾರ್ ಭಾಗವಹಿಸಿದ್ದರು.

16 ಲಕ್ಷ ರೂ. ವಂಚನೆ: ಮೊಬೈಲ್ ಅಂಗಡಿ ಮಾಲೀಕ ಆತ್ಮಹತ್ಯೆ

ಕುಶಾಲನಗರ, ಮೇ 13– ವ್ಯಕ್ತಿಯೋರ್ವ 16 ಲಕ್ಷ ರೂ. ಪಡೆದು ಮೋಸ ಮಾಡಿದ್ದರಿಂದ ಮೊಬೈಲ್ ಶಾಪ್ ಮಾಲೀಕ ಆತ್ಮಹತ್ಯೆ ಮಾಡಿಕೊಂಡಿರುವುದು ಬಯಲಾಗಿದ್ದು, ಆರು ಮಂದಿ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಾಗಿದೆ.

ಕುಶಾಲನಗರದ ರಾಧಾಕೃಷ್ಣ ಬಡಾವಣೆಯಲ್ಲಿ ವಾಸವಾಗಿದ್ದ ಎಂ.ಎಂ. ಸಮೀವುಲ್ಲಾ ಎಂಬಾತ ಮೇ 5ರಂದು ತಮ್ಮ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು. ಆ ವೇಳೆ ಕುಶಾಲನಗರ ಪಟ್ಟಣ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿತ್ತು. ಸಮೀವುಲ್ಲಾ ಅಂತ್ಯಕ್ರಿಯೆ ನಂತರ ಆತನ ಸಹೋದರ ಮಹಮ್ಮದ್ ರಫಿ ಅವರು ಸಮೀವುಲ್ಲಾ ಮನೆಗೆ ಹೋಗಿ ಅವರು ಬರೆದಿದ್ದ ಡೈರಿ ನೋಡಿದಾಗ ಆತ್ಮಹತ್ಯೆಗೆ ಕಾರಣವೇನು ಎಂಬುದು ಬಯಲಾಗಿದೆ. ಮೃತ ಸಮೀವುಲ್ಲಾ ಸಹೋದರರೊಬ್ಬರು ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಂದ ಸಮೀವುಲ್ಲಾ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುತ್ತಿದ್ದರು. ಹರೀಶ್ ಎಂಬಾತ ಮನೆ ಕಟ್ಟಲು 16 ಲಕ್ಷ ರೂ. ಸಾಲ ಪಡೆದಿದ್ದು, 5 ತಿಂಗಳಲ್ಲಿ ಹಿಂತಿರುಗಿಸುವುದಾಗಿ ಹೇಳಿದ್ದನಂತೆ. ಆದರೆ, ಆತ 3 ವರ್ಷವಾದರೂ ಹಣವನ್ನು ಹಿಂತಿರುಗಿಸದ ಕಾರಣ ಮಾನಸಿಕವಾಗಿ ನೊಂದಿದ್ದ ಸಮೀವುಲ್ಲಾ, ಕುಶಾಲನಗರದ ಮಂಜುನಾಥ ಮೆಡಿಕಲ್ ಶಾಪ್ ಮತ್ತು ಗಣೇಶ್ ಮೆಡಿಕಲ್ ಶಾಪ್‌ನಿಂದ ನಿದ್ದೆ ಮಾತ್ರೆಗಳನ್ನು ಖರೀದಿಸಿ, ಸೇವಿಸುತ್ತಾ ಬಂದಿದ್ದ ಎಂಬುದು ಡೈರಿಯಲ್ಲಿ ಆತ ನಮೂದಿಸಿದ್ದಾನೆ ಎಂದು ಹೇಳಲಾಗಿದೆ. ಕೊನೆಗೆ ಮಾರ್ಚ್ 9ರಂದು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸಮೀವುಲ್ಲಾ ಸಹೋದರ ಮಹಮ್ಮದ್ ರಫಿ ನೀಡಿದ ದೂರಿನನ್ವಯ ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ಸಮೀವುಲ್ಲಾಗೆ ಮೋಸ ಮಾಡಿದ್ದ ಹರೀಶ್, ಆತನ ಪತ್ನಿ ಶೋಭಾ, ನಿದ್ದೆ ಮಾತ್ರೆ ನೀಡಿದ್ದ ಮಂಜುನಾಥ ಮೆಡಿಕಲ್ ಶಾಪ್‌ನ ಮಾಲೀಕ ವಿದ್ಯಾಧರ, ಆತನ ಪುತ್ರ ಪೃಥ್ವೀಶ್, ಗಣೇಶ ಮೆಡಿಕಲ್ ಶಾಪ್ ಮಾಲೀಕ ರಾಜಣ್ಣ, ಅವರ ಪುತ್ರ ಗಣೇಶ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅನ್ನಭಾಗ್ಯ ಅಕ್ಕಿ ಅಕ್ರಮ ಸಾಗಾಟ: ಇಬ್ಬರ ಬಂಧನ; 2,183 ಕೆಜಿ ಅಕ್ಕಿ ವಶ

ಯಳಂದೂರು, ಮೇ 13– ಅನ್ನಭಾಗ್ಯ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಯಳಂದೂರು ಠಾಣೆ ಪೊಲೀಸರು 2183 ಕೆಜಿ ಅಕ್ಕಿ ಮತ್ತು ಟೆಂಪೋವನ್ನು ವಶಪಡಿಸಿಕೊಂಡಿದ್ದಾರೆ. ಕೊಳ್ಳೇಗಾಲ ಪಟ್ಟಣದ ನೂರ್ ಮೊಹಲ್ಲಾ ನಿವಾಸಿ ಮಹಮ್ಮದ್ ಖಾಸಿಬ್(30) ಮತ್ತು ಯಳಂದೂರು ತಾಲೂಕು ಯರಗಂಬಳ್ಳಿಯ ಸಯ್ಯದ್ ಮುಜಾಮಿಲ್(31) ಬಂಧಿತರಾಗಿದ್ದು, ಇವರ ಟೆಂಪೋ (ಕೆಎ 19–ಬಿ 0837)ವನ್ನು ಯಳಂದೂರಿನ ಬಳೇ ಪೇಟೆ ಬಳಿ ನಿಲ್ಲಿಸಿಕೊಂಡಿದ್ದಾಗ ಮಾಹಿತಿ ಅರಿತ ಆಹಾರ ನಿರೀಕ್ಷಕ ಆರ್. ಬಿಸಲಯ್ಯ ಸಮ್ಮುಖದಲ್ಲಿ ದಾಳಿ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸಿ ಅಕ್ಕಿ ಮತ್ತು ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಯಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಲಿ ಸಿಲಿಂಡರ್ ತುಂಬಿದ್ದ ಲಾರಿ ಉರುಳಿ ಚಾಲಕನಿಗೆ ತೀವ್ರ ಗಾಯ

ಸುಂಟಿಕೊಪ್ಪ,ಮೇ 13– ಚಾಲಕನ ನಿಯಂತ್ರಣ ಕಳೆದುಕೊಂಡ ಖಾಲಿ ಗ್ಯಾಸ್ ಸಿಲಿಂಡರ್ ತುಂಬಿದ ಲಾರಿಯೊಂದು ಮಡಿಕೇರಿ–ಸುಂಟಿಕೊಪ್ಪ ನಡುವಿನ 7ನೇ ಮೈಲಿನ ತಿರುವಿನಲ್ಲಿ ಉರುಳಿ ಬಿದ್ದಿದ್ದು ಚಾಲಕನ ಸ್ಥಿತಿ ಗಂಭೀರವಾಗಿದೆ. ಶುಕ್ರವಾರದ ಮಧ್ಯಾಹ್ನ 12ರ ಸುಮಾರಿಗೆ ಈ ಅಪಘಾತ ಸಂಭವಿಸಿದ್ದು, ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಹೆಚ್.ಡಿ. ಮಂಜು ಮತ್ತು ಪೊಲೀಸ್ ಸಿಬ್ಬಂದಿಗಳು ಧಾವಿಸಿ ಪರಿಶೀಲನೆ ನಡೆಸಿದರು. ಗಂಭೀರವಾಗಿ ಗಾಯಗೊಂಡಿರುವ ಲಾರಿ ಚಾಲಕನನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಮಂಗಳೂರಿನಿಂದ ಮೈಸೂರು ಕಡೆಗೆ ಖಾಲಿ ಸಿಲಿಂಡರ್‌ಗಳನ್ನು ಸಾಗಿಸುತ್ತಿದ್ದ 6 ಚಕ್ರದ ಲಾರಿ ಅಪಘಾತಗೊಳ್ಳುವ ಮುನ್ನ ಹೆದ್ದಾರಿ ಬದಿಯಲ್ಲಿದ್ದ ಈಶ್ವರ ದೇವಸ್ಥಾನದ ಕಾಣಿಕೆ ಡಬ್ಬಿ ಹಾಗೂ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಡಿಕ್ಕಿ ಹೊಡೆದಿದೆ. ಆದರೂ ಚಾಲಕನ ನಿಯಂತ್ರಣಕ್ಕೆ ಬಾರದೆ ಅನತಿ ದೂರದಲ್ಲಿದ್ದ ಕಾಫಿ ತೋಟದೊಳಗೆ ತಲೆ ಕೆಳಗಾಗಿ ಉರುಳಿ ಬಿದ್ದಿದೆ. ಕಾಣಿಕೆ ಡಬ್ಬಿ ಮತ್ತು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಲಾರಿ ಡಿಕ್ಕಿ ಹೊಡೆಯದೇ ನೇರವಾಗಿ ಮುನ್ನುಗ್ಗಿದ್ದಲ್ಲಿ ಸಮೀಪದಲ್ಲಿದ್ದ ವರ್ಕ್‌ಶಾಪ್ ಮತ್ತು ಮನೆಗಳ ಮೇಲೆ ಬೀಳುವ ಸಂಭವವಿತ್ತು. ಇದರಿಂದಾಗಿ ಭಾರೀ ಪ್ರಮಾಣದ ಹಾನಿ ಸೇರಿದಂತೆ ಅಪಾರ ಪ್ರಮಾಣ ನಷ್ಟ ಸಂಭವಿಸುತ್ತಿತ್ತು ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೂರು ದ್ವಿಚಕ್ರ ವಾಹನ, ಆಟೋ ಕಳವು

ಮೈಸೂರು, ಮೇ 13– ಮೈಸೂರು ನಗರದಲ್ಲಿ 3 ದ್ವಿಚಕ್ರ ವಾಹನ ಹಾಗೂ ಆಟೋರಿಕ್ಷಾವೊಂದ ಕಳವಾಗಿರುವ ಬಗ್ಗೆ ವರದಿಯಾಗಿದೆ. ಮೂಲತಃ ತಿ.ನರಸೀಪುರ ತಾಲೂಕು ಹ್ಯಾಕತ್ತೂರು ಗ್ರಾಮದವರಾಗಿದ್ದು, ತಿ.ನರಸೀಪುರದ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ಕಲೆಕ್ಷನ್ ಆಫೀಸರ್ ಆಗಿರುವ ಜಿ. ಮನೋಜ್ ಅವರು, ಏಪ್ರಿಲ್ 26ರಂದು ರಾತ್ರಿ ಹಾಸನಕ್ಕೆ ಹೋಗುವ ಸಲುವಾಗಿ ಮೈಸೂರಿನ ಶಿಕ್ಷಕರ ಬಡಾವಣೆಯಲ್ಲಿರುವ ತಮ್ಮ ಸ್ನೇಹಿತನ ಮನೆ ಮುಂದೆ ತಮ್ಮ ಹೋಂಡಾ ಡಿಯೋ ಸ್ಕೂಟರ್ (ಕೆಎ 09–ಹೆಚ್‌ಝಡ್ 0069) ಅನ್ನು ನಿಲ್ಲಿಸಿ ಹೋಗಿದ್ದು, ಮರುದಿನ ನೋಡಿದಾಗ ಅದು ಕಳುವಾಗಿತ್ತು ಎಂದು ಅವರು ಆಲನಹಳ್ಳಿ ಠಾಣೆಯಲ್ಲಿ ಮೇ 5ರಂದು ದೂರು ಸಲ್ಲಿಸಿದ್ದಾರೆ.

ಸ್ಕೂಟರ್ ನಾಪತ್ತೆ ಮೈಸೂರಿನ ಮೇಟಗಳ್ಳಿ ಲೋಕನಾಯಕನಗರದ ನಿವಾಸಿ ಎಸ್. ಅರುಣ್ ಅವರು ಮೇ 10ರಂದು ಬೆಳಗ್ಗೆ 8.30ರಲ್ಲಿ ಬಸವನಗುಡಿ ವೃತ್ತದ ಬಳಿ ಇರುವ ಪಾರ್ಕ್ ಮುಂಭಾಗ ತಮ್ಮ ಪತ್ನಿಯ ಹೋಂಡಾ ಆಕ್ಟೀವಾ (ಕೆಎ 09–ಹೆಚ್‌ಕೆ 3684) ಅನ್ನು ನಿಲ್ಲಿಸಿ, ವಾಯುವಿಹಾರ ಮುಗಿಸಿ 9 ಗಂಟೆಗೆ ಬಂದು ನೋಡಿದಾಗ ದ್ವಿಚಕ್ರ ವಾಹನ ಕಳುವಾಗಿರುವುದು ತಿಳಿಯಿತು ಎಂದು ಹೆಬ್ಬಾಳ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಹೋಂಡಾ ಆಕ್ಟೀವಾ: ಬೃಂದಾವನ ಬಡಾವಣೆಯ 1ನೇ ಹಂತದಲ್ಲಿರುವ ಮಹದೇಶ್ವರ ಭಂಡಾರ ಪ್ರಾವಿಷನ್ ಸ್ಟೋರ್ ಮಾಲೀಕ ಪಿ. ಪುಟ್ಟಸ್ವಾಮಿಯವರು ಮೇ 4ರಂದು ಸಂಜೆ 5.30ರಲ್ಲಿ ತಮ್ಮ ಅಂಗಡಿ ಮುಂದೆ ಹೋಂಡಾ ಆಕ್ಟೀವಾ (ಕೆಎ 55–ಡಬ್ಲ್ಯೂ 7823) ಅನ್ನು ನಿಲ್ಲಿಸಿ, ಸ್ಕೂಟರ್‌ನಲ್ಲೇ ಕೀ ಬಿಟ್ಟು ಅಂಗಡಿಗೆ ತೆರಳಿದ್ದು, 6.30ರಲ್ಲಿ ಬಂದು ನೋಡುವುದರಲ್ಲಿ ಸ್ಕೂಟರ್ ಕಳುವಾಗಿದೆ ಎಂದು ವಿವಿ ಪುರಂ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬೆಳಗಾಗುವುದರಲ್ಲಿ ಆಟೋ ಇಲ್ಲ: ಮೈಸೂರಿನ ಬೋಗಾದಿ ನಿವಾಸಿ ಆಟೋ ಚಾಲಕ ಸಿದ್ದಲಿಂಗ ಅವರು ಏಪ್ರಿಲ್ 17ರಂದು ತಮ್ಮ ಮನೆಯ ಮುಂದೆ ಆಟೋರಿಕ್ಷಾ (ಕೆಎ 09–ಡಿ 7624) ಅನ್ನು ನಿಲ್ಲಿಸಿ ಬೆಳಗ್ಗೆ ನೋಡುವಷ್ಟರಲ್ಲಿ ಅದು ಕಳುವಾಗಿದೆ ಎಂದು ಮೇ 11ರಂದು ಸರಸ್ವತಿಪುರಂ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವಿದ್ಯಾರ್ಥಿ ಮೊಬೈಲ್ ಕಿತ್ತುಕೊಂಡು ಓಡುತ್ತಿದ್ದ ಖದೀಮನ ಹಿಡಿದ ಸಾರ್ವಜನಿಕರು!

ಕ್ರೈಂ ಬಾಕ್ಸ್

ಮೈಸೂರು, ಮೇ 13– ಮೈಸೂರು ನಗರ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿಯಿಂದ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಖದೀಮನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮೇ 11ರಂದು ಸಂಜೆ ನಡೆದಿದೆ.

ರಾಜೀವ್‌ನಗರದ ನಿವಾಸಿ ಮಹಮದ್ ಇಮ್ರಾನ್ ಸಿಕ್ಕಿಬಿದ್ದ ಖದೀಮನಾಗಿದ್ದು, ಈತ ನಗರ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಮೈಸೂರು ತಾಲೂಕು ಗುಜ್ಜಪ್ಪನ ಹುಂಡಿ ಗ್ರಾಮದ ನಿವಾಸಿ, ಕುವೆಂಪುನಗರದಲ್ಲಿರುವ ಕಾವೇರಿ ಕಾಲೇಜಿನ ಪ್ರಥಮ ಬಿ.ಕಾಂ ವಿದ್ಯಾರ್ಥಿ ಸಮ್ರುದ್ ಎಂಬಾತನ ಕೈಯ್ಯಲ್ಲಿದ್ದ ಮೊಬೈಲ್ ಅನ್ನು ಕಿತ್ತುಕೊಂಡು ಪರಾರಿಯಾಗುತ್ತಿದ್ದಾಗ ಆತನ್ನು ದರ್ಶನ್ ಮತ್ತು ಕಾರ್ತಿಕ್ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಖದೀಮನನ್ನು ಬಂಧಿಸಿರುವ ದೇವರಾಜ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೈಕ್‌ಗೆ ಬಸ್ ಡಿಕ್ಕಿ: ತಂದೆ ಸಾವು, ಮಗನಿಗೆ ಗಾಯ

ಕೆ.ಆರ್.ನಗರ, ಮೇ 13– ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಬೈಕ್‌ನ ಹಿಂಬದಿ ಸವಾರರು ಸಾವನ್ನಪ್ಪಿದ ಘಟನೆ ಚುಂಚನಕಟ್ಟೆ ಸೇತುವೆ ಮೇಲೆ ಮೇ 11ರಂದು ಸಂಭವಿಸಿದೆ.

ಸಾಲಿಗ್ರಾಮ ತಾಲೂಕು ಕೆಡಗ ಗ್ರಾಮದ ಗೋವಿಂದಶೆಟ್ಟಿ (65), ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಬೈಕ್ ಚಲಾಯಿಸುತ್ತಿದ್ದ ಅವರ ಪುತ್ರ ಸೋಮಶೇಖರ್ ಗಾಯಗೊಂಡು ಕೆ.ಆರ್.ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೇ 11ರಂದು ಬೆಳಗ್ಗೆ ಸೋಮಶೇಖರ್ ತನ್ನ ಎಕ್ಸೆಲ್ ಸೂಪರ್ ಬೈಕ್ (ಕೆಎ09 ಹೆಚ್‌ಟಿ9777)ನಲ್ಲಿ ತಂದೆ ಗೋವಿಂದಶೆಟ್ಟಿ ಅವರೊಂದಿಗೆ ಚುಂಚನಕಟ್ಟೆ ಸಂತೆಗೆ ಹೋಗಿ ಹಿಂದಿರುಗುತ್ತಿದ್ದಾಗ ಸುಮಾರು 9.30ರ ಸುಮಾರಿನಲ್ಲಿ ಚುಂಚನಕಟ್ಟೆ ಸೇತುವೆ ಮೇಲೆ ಎದುರಿಗೆ ಬಂದ ಕೆಎಸ್‌ಆರ್‌ಟಿಸಿ ಬಸ್ (ಕೆಎ13 ಎಫ್ 2180) ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಗೋವಿಂದ ಶೆಟ್ಟಿ ಅವರನ್ನು ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು ಚಿಕಿತ್ಸೆ ಫಲಕಾರಿಯಾಗದೆ ಅಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಅವರು ಮೃತಪಟ್ಟಿದ್ದಾರೆ. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಮತ್ತೊಂದು ಪ್ರಕರಣದಲ್ಲಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದು ಸವಾರ ಗಾಯಗೊಂಡಿರುವ ಘಟನೆ ಕೆ.ಆರ್.ನಗರ ತಾಲೂಕು ಮಾರ್ಚಳ್ಳಿ ಬಳಿ ಮೇ 5ರಂದು ಮಧ್ಯಾಹ್ನ ಸಂಭವಿಸಿದೆ. ಮೈಸೂರಿನ ಗಾರ್ಮೆಂಟ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿರುವ ಕೆ.ಆರ್.ನಗರ ತಾಲೂಕು ಚಂದಗಾಲು ಗ್ರಾಮದ ಸಿ.ಎನ್. ಲೋಕೇಶ್ (29) ಹೀರೊ ಹೋಂಡಾ ಫ್ಯಾಷನ್ ಬೈಕ್ (ಕೆಎ45 ಇಎ1355)ನಲ್ಲಿ ತೆರಳುತ್ತಿದ್ದಾಗ ಎದುರಿನಿಂದ ಬಂದ ಕಾರು (ಕೆಎ10 ಎ3155) ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಲೋಕೇಶ್ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರು ಮೈಸೂರಿನ ಖಾಸಗಿ ಆಸ್ಪತ್ರೆಯ ತುರ್ತು ನಿಗಾಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಕೆಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ನಿಂದ ಬಿದ್ದು ಹಿಂಬದಿ ಸವಾರ ಸಾವು

ಸರಗೂರು, ಮೇ 13– ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ಹಿಂಬದಿ ಸವಾರ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಸರಗೂರು ತಾಲೂಕು ಆಲನಹಳ್ಳಿ ಗ್ರಾಮದ ಅಣ್ಣಯ್ಯಪ್ಪ(75) ಸಾವನ್ನಪ್ಪಿದವರಾಗಿದ್ದು, ಇವರು ಕಳೆದ ಏಪ್ರಿಲ್ 26ರಂದು ತನ್ನ ಸಹೋದರ ಚಂದ್ರಪ್ಪ ಎಂಬುವರ ಬೈಕ್‌ನಲ್ಲಿ (ಕೆಎ 09–ಹೆಚ್‌ಎಫ್ 1465) ಹಿಂಬದಿ ಕುಳಿತಿದ್ದರು. ಹೊಸಕೋಟೆ ಸರ್ಕಲ್ ಬಳಿ ಬೈಕ್ ವೇಗವಾಗಿ ಚಲಿಸುತ್ತಿದ್ದಾಗ ಅಣ್ಣಯ್ಯಪ್ಪ ಆಯತಪ್ಪಿ ಬೈಕ್‌ನಿಂದ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೇ 5ರಂದು ಮಧ್ಯರಾತ್ರಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸರಗೂರು ಠಾಣೆ ಪೊಲೀಸರು ಬೈಕ್ ಚಾಲನೆ ಮಾಡುತ್ತಿದ್ದ ಚಂದ್ರಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಂದಕಕ್ಕೆ ಲಾರಿ ಬಿದ್ದು ಚಾಲಕ ಸಾವು

ಮಲೆ ಮಹದೇಶ್ವರಬೆಟ್ಟ, ಮೇ 13– ಕಂದಕಕ್ಕೆ ಲಾರಿ ಉರುಳಿ ಬಿದ್ದು ಚಾಲಕ ಸಾವನ್ನಪ್ಪಿದ ಘಟನೆ ಮಲೆ ಮಹದೇಶ್ವರಬೆಟ್ಟದ 7ನೇ ತಿರುವಿನಲ್ಲಿ ಮೇ 11ರಂದು ಬೆಳಗ್ಗೆ ಸಂಭವಿಸಿದೆ.

ತಮಿಳುನಾಡಿನ ಪುದುಕೋಟ್ಟೈ ಜಿಲ್ಲೆ ತಿರುಕಳಂಬೂರು ಗ್ರಾಮದ ರಾಜೇಶ್ ಕುಮಾರ್(34) ಅಪಘಾತದಲ್ಲಿ ಸಾವನ್ನಪ್ಪಿದ ಲಾರಿ ಚಾಲಕನಾಗಿದ್ದು, ಈತ ಅತೀ ವೇಗವಾಗಿ ಮಹದೇಶ್ವರಬೆಟ್ಟ ರಸ್ತೆಯಲ್ಲಿ ಲಾರಿಯನ್ನು ಚಾಲನೆ ಮಾಡುವಾಗ 7ನೇ ತಿರುವಿನಲ್ಲಿ ನಿಯಂತ್ರಣಕ್ಕೆ ಸಿಗದೇ ಲಾರಿ ಕಂದಕಕ್ಕೆ ಉರುಳಿದೆ ಎಂದು ಹೇಳಲಾಗಿದೆ. ಲಾರಿಯಲ್ಲಿದ್ದ ಮೂಟೆಗಳಡಿ ಚಾಲಕನ ಮೃತದೇಹ ಪತ್ತೆಯಾಗಿದೆ. ಲಾರಿ ಮಾಲೀಕ ಕೊಯಮ್ಮತ್ತೂರಿನ ಸೆಲ್ವಪುರಂ ನಿವಾಸಿ ಕನಿರಾಜು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಹದೇಶ್ವರಬೆಟ್ಟ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬಾಗಿಲು ಮುರಿದು 8.35 ಲಕ್ಷ ಮೌಲ್ಯದ ಆಭರಣ ಕಳವು

ಮಳವಳ್ಳಿ, ಮೇ 13– ಮನೆ ಬಾಗಿಲು ಮುರಿದು 8.35 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಪ್ರಕರಣ ಮಳವಳ್ಳಿ ತಾಲೂಕು ಗಟ್ಟಿಕೊಪ್ಪಲು ಗ್ರಾಮದಲ್ಲಿ ನಡೆದಿದೆ.


ಈ ಗ್ರಾಮದ ಜಿ.ಎಂ. ಬಾಲರಾಜು ಎಂಬುವರು ಮೆಡಿಕಲ್ ಶಾಪ್ ಆರಂಭಿಸುವ ಸಲುವಾಗಿ 4 ಲಕ್ಷ ರೂ.ಗಳನ್ನು ಮನೆಯಲ್ಲಿ ಇಟ್ಟಿದ್ದರು ಎನ್ನಲಾಗಿದೆ. ಮೇ 11ರಂದು ಇವರು ಮತ್ತು ತಾಯಿ ಸಂಬಂಧಿಕರ ಮನೆಗೆ ಹೋಗಿದ್ದ ವೇಳೆ ಖದೀಮರು ಮನೆ ಬಾಗಿಲು ಮುರಿದು 4 ಲಕ್ಷ ರೂ. ಹಾಗೂ 4.35 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ದೋಚಿದ್ದಾರೆ. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣದ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅರಣ್ಯ ವೀಕ್ಷಕನ ಮೇಲೆ ಗ್ರಾಮಸ್ಥರಿಂದ ಮಾರಣಾಂತಿಕ ಹಲ್ಲೆ


ಮಡಿಕೇರಿ, ಮೇ 13– ಅರಣ್ಯ ವೀಕ್ಷಕನೊಬ್ಬನ ಮೇಲೆ ಗ್ರಾಮಸ್ಥನೋರ್ವ ಮಚ್ಚಿನಿಂದ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ ಘಟನೆ ಇಲ್ಲಿಗೆ ಸಮೀಪದ ಗಾಳಿಬೀಡು ಗ್ರಾಮದ ಬಳಿ ಇರುವ ಕಾನಕಂಡಿ ನಡುತೋಪಿನಲ್ಲಿ ನಡೆದಿದೆ.

ಅರಣ್ಯ ವೀಕ್ಷಕ ಅಣ್ಣಪ್ಪ ರೈ(58) ಹಲ್ಲೆಗೊಳಗಾದವರಾಗಿದ್ದು, ಹಲ್ಲೆಯಿಂದ ಇವರ ಎಡಗೈನ 4 ಬೆರಳುಗಳು ತುಂಡಾಗಿವೆ. ಇವರು ಮೇ 11ರಂದು 10.30ರಲ್ಲಿ ನಡುತೋಪಿನಲ್ಲಿ ಗಸ್ತು ತಿರುಗುತ್ತಿದ್ದಾಗ ಅಲ್ಲಿಗೆ ಬಂದ ಗಾಳಿಬೀಡು ಗ್ರಾಮದ ತಿಮ್ಮಯ್ಯ ಅಲಿಯಾಸ್ ಅಣ್ಣಕ್ಕ ಎಂಬಾತ ಕಸ ವಿಲೇವಾರಿ ಮಾಡಲು ಗ್ರಾಮ ಪಂಚಾಯಿತಿಯವರಿಗೆ ನನ್ನ ಜಮೀನನ್ನು ಯಾಕೆ ತೋರಿಸಿದೆ ಎಂದು ಪ್ರಶ್ನಿಸಿ, ಮಚ್ಚಿನಿಂದ ಕತ್ತಿನ ಮೇಲೆ ಹಲ್ಲೆ ನಡೆಸಲು ಮುಂದಾದಾಗ ಅರಣ್ಯ ವೀಕ್ಷಕ ಅಣ್ಣಪ್ಪ ರೈ ಕೈಗಳಿಂದ ತಡೆದಿದ್ದಾನೆ. ಆಗ ಅವರ ಎಡಗೈನ 4 ಬೆರಳುಗಳು ತುಂಡಾಗಿವೆ. ಮತ್ತೆ ಹಲ್ಲೆ ನಡೆಸಲು ಮುಂದಾದಾಗ ಬಲಗೈನಿಂದ ತಡೆದ ವೇಳೆ ಅವರ ಮುಂಗೈಗೆ ಪೆಟ್ಟು ಬಿದ್ದಿದೆ. ಅದೇ ವೇಳೆ ಮತ್ತೊಬ್ಬ ಅರಣ್ಯ ವೀಕ್ಷ ಕೆ.ಸಿ. ಮೋಹನ್‌ಕುಮಾರ್ ಧಾವಿಸಿದಾಗ ಆರೋಪಿ ತಿಮ್ಮಯ್ಯ ಪರಾರಿಯಾಗಿದ್ದಾನೆ. ತೀವ್ರವಾಗಿ ಗಾಯಗೊಂಡಿರುವ ಅಣ್ಣಪ್ಪ ರೈ ಮಡಿಕೇರಿ ಜಿಲ್ಲಾಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಬೈಕ್‌ಗೆ ಬಸ್ ಡಿಕ್ಕಿ: ಮಹಿಳೆ ಸಾವು



ಯಳಂದೂರು, ಮೇ 13– ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಯಳಂದೂರು ಸರ್ಕಾರಿ ಆಸ್ಪತ್ರೆಯ ಆಯುರ್ವೇದ ವಿಭಾಗದ ಡಿ ಗ್ರೂಪ್ ಮಹಿಳಾ ಉದ್ಯೋಗಿ ಸಾವನ್ನಪ್ಪಿದ ಘಟನೆ ತಾಲೂಕಿನ ಚಂಗಚಹಳ್ಳಿ–ವೈ.ಕೆ.ಮೋಳೆ ರಸ್ತೆಯಲ್ಲಿ ಮೇ. 12ರಂದು ಬೆಳಗ್ಗೆ ಸಂಭವಿಸಿದೆ. ಡಿ ಗ್ರೂಪ್ ಉದ್ಯೋಗಿ ಕಮಲಮ್ಮ(40) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ತನ್ನ ಸ್ವಗ್ರಾಮ ಚಂಗಚಹಳ್ಳಿಯಿಂದ ಯಾರದೋ ಬೈಕ್‌ನಲ್ಲಿ ಯಳಂದೂರಿಗೆ ತೆರಳುತ್ತಿದ್ದಾಗ ಆಂಜನೇಯ ಖಾಸಗಿ ಬಸ್ (ಕೆಎ 48–0501) ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ಸಂದರ್ಭದಲ್ಲಿ ಕೆಳ ಬಿದ್ದ ಕಮಲಮ್ಮ ಅವರ ತಲೆಯ ಮೇಲೆ ಬಸ್‌ನ ಚಕ್ರ ಹರಿದು ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸಣ್ಣಪುಟ್ಟ ಗಾಯ ಗಳಾಗಿದ್ದ ಬೈಕ್ ಚಾಲಕ, ಅಪಘಾತವಾಗುತ್ತಿದ್ದಂತೆಯೇ ಬೈಕ್‌ನೊಂದಿಗೆ ಸ್ಥಳದಿಂದ ಕಾಲ್ಕಿತ್ತಿದ್ದು, ಆತ ಯಾರು ಎಂಬುದು ತಿಳಿದಿಲ್ಲ ಎಂದು ಕಮಲಮ್ಮ ಪುತ್ರ ಮಹೇಶ್ ಕುಮಾರ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಯಳಂದೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಮೂಲಭೂತ ಸೌಕರ್ಯ ಅಭಿವೃದ್ಧಿ ಖಾತೆ ಸಚಿವರಾದ ವಿ.ಸೋಮಣ್ಣನವರನ್ನು ಸಂಸದ ಪ್ರತಾಪ್ ಸಿಂಹ ಭೇಟಿಯಾಗಿ, ಮೈಸೂರು ವಿಮಾನ ನಿಲ್ದಾಣ ರನ್ ವೇ ವಿಸ್ತರಣೆಗೆ ಅಗತ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ಮನವಿ ಮಾಡಿಕೊಂಡರು. ಕೂಡಲೇ ಕಡತವನ್ನು ಹಣಕಾಸು ಇಲಾಖೆಗೆ ಕಳುಹಿಸುವಂತೆ ಸಚಿವರು ಸೂಚಿಸಿದ್ದಾಗಿ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತ

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರ ವಿಶ್ವಾಸ



ಮೈಸೂರು, ಮೇ 13– ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಪ್ರಜ್ಞಾವಂತ ಮತದಾರರ ಬೆಂಬಲದಿಂದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಖಚಿತವಾಗಿ ಗೆಲುವು ಸಾಧಿಸಲಿದ್ದಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಅರುಣ್ ಕುಮಾರ್ ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರ, ಹೂಟಗಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಕೆ.ಹೆಚ್.ಬಿ. ಕಾಲೋನಿಯ ಗಣಪತಿ ದೇವಸ್ಥಾನದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಪೂಜೆ ಸಲ್ಲಿಸಿದ ಬಳಿಕ, ಮನೆ ಮನೆಗೆ ಭೇಟಿ ನೀಡಿ, ಮೈ.ವಿ.ರವಿಶಂಕರ್ ಪರ ಮತಯಾಚಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಚುನಾವಣೆಯಲ್ಲಿ ಅತ್ಯಲ್ಪ ಮತಗಳಿಂದ ಪರಾಭವಗೊಂಡ ನಿಷ್ಠಾವಂತ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಪಕ್ಷ ಮತ್ತೆ ಅವಕಾಶ ನೀಡಿದೆ. ಇವರು ನಿರಂತರವಾಗಿ ಮತದಾರರ ಸಂಪರ್ಕದಲ್ಲಿದ್ದು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ತಾವೇ ಅಭ್ಯರ್ಥಿ ಎನ್ನುವ ರೀತಿಯಲ್ಲಿ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ಕೇಂದ್ರದಲ್ಲಿ ಪ್ರಧಾನಿ ಮೋದಿಯವರು ಹಾಗೂ ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ಅವರ ಜನಪರ ಆಡಳಿತ, ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪರವರ ನೇತೃತ್ವದ ಸಂಘಟನೆ ಪ್ರತಿಫಲವಾಗಿ ಬಿಜೆಪಿ ಮತ್ತಷ್ಟು ಬಲಗೊಳ್ಳುತ್ತಿದೆ. ಹಳೇ ಮೈಸೂರು ಭಾಗದಲ್ಲೂ ಕೂಡ ವಿಶೇಷ ಗಮನ ಹರಿಸಲಾಗಿದೆ. ಮತದಾರರು ಬಿಜೆಪಿ ಬೆಂಬಲಿಸಲಿದ್ದು, ದಕ್ಷಿಣ ಪದವೀಧರ ಚುನಾವಣೆ ಸೇರಿದಂತೆ ಮುಂಬರುವ ಎಲ್ಲಾ ಚುನಾವಣೆಗಳನ್ನೂ ನಮ್ಮ ಪಕ್ಷಕ್ಕೆ ಗೆಲುವು ದಾಖಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಪಕ್ಷದ ಕಾರ್ಯಕರ್ತರ ಶ್ರಮದ ಪ್ರತಿಫಲವಾಗಿ ಮೈ.ವಿ.ರವಿಶಂಕರ್ ಗೆಲುವು ಸಾಧಿಸಲಿದ್ದಾರೆ ಎಂದು ಆಶಿಸಿದರು. ಹಿರಿಯ ಮುಖಂಡರಾದ ಗೋಪಾಲರಾವ್, ಶ್ರೀನಿವಾಸ್, ಪೈಲ್ವಾನ್ ರವಿ, ಈರಪ್ಪ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಕೂರ್ಗಳ್ಳಿ, ರಾಜ್ಯ ಮಹಿಳಾ ಮೋರ್ಚಾ ಕಾರ್ಯಕಾರಿಣಿ ಸದಸ್ಯೆ ಭಾರತಿ ಪಶುಪತಿ, ರೈತ ಮೋರ್ಚಾದ ಹೂಟಗಳ್ಳಿ ದೇವರಾಜ್, ಭೂನ್ಯಾಯ ಮಂಡಳಿ ಸದಸ್ಯ ಗೋಪಾಲಗೌಡ, ಕೂರ್ಗಳ್ಳಿ ರೇವಣ್ಣ, ಬೆಳವಾಡಿ ಮಂಜು, ಸಂಧ್ಯಾರಾಣಿ, ಶಿವಣ್ಣ, ವೆಂಕಟೇಶ್ ಮತ್ತಿತರರು ಮೈ.ವಿ.ರವಿಶಂಕರ್ ಪರ ಬಿರುಸಿನ ಮತಯಾಚನೆ ನಡೆಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ವಂದಿತಾ ಶರ್ಮ ಆಯ್ಕೆ ಖಚಿತ

ಬೆಂಗಳೂರು,ಮೇ 13– ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯಾಗಿ, ಹಾಲಿ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರೂ ಆಗಿರುವ ವಂದಿತಾ ಶರ್ಮ ನೇಮಕವಾಗುವುದು ಬಹುತೇಕ ಖಚಿತವಾಗಿದೆ.



ಹಾಲಿ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರ ಅಧಿಕಾರ ಅವಧಿ ಈ ತಿಂಗಳ 31ಕ್ಕೆ ಅಂತ್ಯಗೊಳ್ಳಲಿದೆ. ತೆರವಾಗಲಿರುವ ಸ್ಥಾನಕ್ಕೆ ವಂದಿತಾ ಶರ್ಮ ಅವರನ್ನು ನೇಮಕ ಮಾಡಲು ಸರ್ಕಾರ ಮುಂದಾಗಿದೆ. ಮುಖ್ಯ ಕಾರ್ಯದರ್ಶಿ ನೇಮಕ ಮಾಡುವ ಅಧಿಕಾರವು ಮುಖ್ಯಮಂತ್ರಿಗೆ ಇರುತ್ತದೆ. ಸೇವಾ ಹಿರಿತನ ಆಧಾರದ ಮೇಲೆ ವಂದಿತಾ ಶರ್ಮ ಅವರನ್ನು ನೇಮಿಸಲು ಸ್ವತಃ ಸಿಎಂ ಬೊಮ್ಮಾಯಿ ಅವರೇ ಒಲವು ತೋರಿದ್ದಾರೆ ಎಂದು ತಿಳಿದುಬಂದಿದೆ. ಒಂದು ವೇಳೆ ವಂದಿತಾ ಶರ್ಮ ಮುಖ್ಯ ಕಾರ್ಯದರ್ಶಿಯಾದರೆ ಅವರು 2023 ನವೆಂಬರ್ ತಿಂಗಳಲ್ಲಿ ಸೇವೆಯಿಂದ ನಿವೃತ್ತಿಯಾಗಲಿದ್ದಾರೆ. ಮುಖ್ಯ ಕಾರ್ಯದರ್ಶಿ ಹುದ್ದೆಗೆ ಹಿರಿಯ 9 ಹಿರಿಯ ಐಎಎಸ್ ಅಧಿಕಾರಿಗಳ ಹೆಸರು ಕೇಳಿಬಂದಿದೆ.

ವಂದಿತಾ ಶರ್ಮ ಅವರಲ್ಲದೆ ಗೃಹ ಇಲಾಖೆ ಕಾರ್ಯದರ್ಶಿ ರಜನೀಶ್ ಗೋಯಲ್, ಹಣಕಾಸು ಇಲಾಖೆ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್, ಮಂಜುಳಾ, ಅಜಯ್ ಶೇಠ್ ಮತ್ತಿತರ ಹೆಸರುಗಳು ಕೇಳಿಬಂದಿವೆ. ಸೇವಾ ಹಿರಿತನವನ್ನು ಕಡೆಗಣಿಸಿ ನೇಮಿಸಿದರೆ ಅವಕಾಶ ವಂಚಿತರು ನ್ಯಾಯಾಲಯದ ಮೊರೆ ಹೋಗಬಹುದು ಎಂಬ ಆತಂಕವೂ ಇದೆ. ಜೊತೆಗೆ ವಂದಿತಾ ಶರ್ಮ ಅವರ ಮೇಲೆ ಯಾವುದೇ ರೀತಿಯ ಆರೋಪಗಳಿಲ್ಲ. ಆಡಳಿತ ಅನುಭವ ಇರುವುದರಿಂದ ಅವರನ್ನೇ ನೇಮಿಸಲು ಸರ್ಕಾರ ಮುಂದಾಗಿದೆ ಎಂದು ತಿಳಿದುಬಂದಿದೆ. ಆಂಧ್ರಪ್ರದೇಶದವರಾದ ವಂದಿತಾ ಶರ್ಮ ಹಾಲಿ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿರುವ ಐಎಸ್‌ಎನ್ ಪ್ರಸಾದ್ ಅವರ ಪತ್ನಿಯೂ ಹೌದು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೂರನೇ ಪುಟದಿಂದ

ಜೆಡಿಎಸ್ ಸ್ವತಂತ್ರ ಸರ್ಕಾರ ಸಂಕಲ್ಪ

ಕೊಡಲು ಸ್ವತಂತ್ರ ಅಧಿಕಾರ ಇರಲಿಲ್ಲ. ರೈತರ ಸಾಲ ಮನ್ನಾ ಮಾಡಲು ಮುಂದಾದಾಗ ನೋವು ಅನುಭವಿಸಿದ್ದು ನನಗೆ ಮಾತ್ರ ಗೊತ್ತು ಎಂದ ಅವರು, ಮೈತ್ರಿ ಸಹವಾಸ ಬೇಡ ಎಂದು ಹೇಳಿದರು. ಜೆಡಿಎಸ್‌ನಲ್ಲಿ ಟಿಕೆಟ್‌ಗೂ ಹಣ ಕೊಡಬೇಕು ಎಂದು ಒಬ್ಬರು ಆರೋಪ ಮಾಡಿದರು. ಆದರೆ ಮಳವಳ್ಳಿ ಅನ್ನದಾನಿ ಬಡವರಾದರೂ ಟಿಕೆಟ್ ಕೊಟ್ಟು ಚುನಾವಣಾ ಖರ್ಚನ್ನು ಪಕ್ಷ ಭರಿಸಿದೆ. ದೇವರು ನೋಡ್ತಾನೆ ಎಂಬ ಕನಿಷ್ಠ ತಿಳುವಳಿಕೆ ಬೇಕು ಎಂದು ಟೀಕಾಕಾರರ ಬಾಯಿ ಮುಚ್ಚಿಸಿದರು.

ಕೊರೊನಾದಿಂದ ಜೆಡಿಎಸ್ ನಾಯಕರು ಹೊರ ಬಂದಿಲ್ಲ ಎನ್ನುತ್ತಿದ್ದರು. ಅದಕ್ಕೆ ಕಾರಣ ಕೊರೊನಾದಿಂದ ಆದಂತಹ ಸಾವಿರಾರು ಜನರ ಸಾವು. ನಿಮಗೆ ತೊಂದರೆ ಆಗಬಾರದು ಅಂತ ಕಾರ್ಯಕ್ರಮ ಹಾಕಿಕೊಂಡಿರಲಿಲ್ಲ. ಬಿಜೆಪಿ, ಕಾಂಗ್ರೆಸ್ ನಾಯಕರಷ್ಟು ಅವಸರ ನಮಗೆ ಇರಲಿಲ್ಲ. ಕಳೆದ ತಿಂಗಳಿಂದ ಜಲಧಾರೆ ಕಾರ್ಯಕ್ರಮ ಆರಂಭ ಆಯ್ತು. ಅಂದಿನಿಂದ ಇಂದಿನವರೆಗೆ ನಮಗೆ ಸಾಥ್ ಕೊಟ್ಟಿದ್ದೀರಾ. ಮೈಸೂರಿನಲ್ಲಿ ಒಂದು ಸ್ಥಾನ ಬರಲ್ಲ ಎಂದು ಇಲ್ಲೇ ಬೆಳೆದು ಹೋದವರೇ ಹೇಳಿದರು ಎಂದು ಪರೋಕ್ಷವಾಗಿ ಸಿದ್ದರಾಮಯ್ಯರ ವಿಚಾರ ಪ್ರಸ್ತಾಪಿಸಿದ ಕುಮಾರಸ್ವಾಮಿ, ಆದರೆ ಇವತ್ತು ನೀವು ಜಲಧಾರೆ ಸಮಾವೇಶದ ಮೂಲಕ ತೋರಿಸಿದ್ದೀರಿ ಎಂದರು. ನನ್ನ ಕೊನೆಯ ಉಸಿರು ಇರುವವರೆಗೂ ನಿಮಗಾಗಿ ಜೀವನ ಇಟ್ಟಿರುತ್ತೇನೆ. ನಾನು ಈ ಮಣ್ಣಿಗೆ ಹೋಗುವುದರೊಳಗೆ ನಿಮ್ಮ ಹೃದಯದಲ್ಲಿ ನನಗೆ ಕೊಡುವ ಸ್ಥಾನ ಒಂದೇ ಎಂದು ಹೇಳಿದರು.

ಕುಡಿಯುವ ನೀರಿನ ವಿಚಾರವಾಗಿ ದೇವೇಗೌಡರು ಸಂಸತ್‌ನಲ್ಲಿ ಮಾತನಾಡಿದರೆ ಯಾರು ಮಾತನಾಡಲು ಬರುವುದಿಲ್ಲ ಎಂದ ಎಚ್‌ಡಿಕೆ, ನಾನು ಎರಡು ಬಾರಿ ಸಿಎಂ ಆಗಿದ್ದೇನೆ. ಅದೂ ಅನಿರೀಕ್ಷಿತ ರಾಜಕೀಯದ ಬೆಳವಣಿಗೆಯಲ್ಲಿ ಸಿಎಂ ಆದೆ. ಅನೇಕ ಒತ್ತಡಗಳ ನಡುವೆ ಅಧಿಕಾರ ಮಾಡಿದೆ. ರೈತರ ಸಾಲ ಮನ್ನಾ ಮಾಡುವಾಗಲೂ ಎಷ್ಟು ಕಷ್ಟಪಟ್ಟಿದ್ದೇನೆ ನಮಗೆ ಗೊತ್ತು ಎಂದರು. ಕೊರೊನಾದಿಂದ ಸಾವಿಗೀಡಾದ ಕುಟುಂಬಕ್ಕೆ ಐದು ಲಕ್ಷ ರೂ. ಕೊಡುತ್ತೇವೆ ಎಂದ ಸರ್ಕಾರ ಇನ್ನೂ ಕೊಟ್ಟಿಲ್ಲ. ಶಾಲೆ ಫೀಸ್ ಕಟ್ಟಲು, ಆಸ್ಪತ್ರೆಗಳಿಗೆ ಅಂತ ನಿತ್ಯ ಎಷ್ಟು ಕಷ್ಟ ಪಡ್ತಾ ಇದ್ದೀರಾ ಅಂತ ಗೊತ್ತಿದೆ. ನಿತ್ಯ ಸಾಕಷ್ಟು ಜನರನ್ನು ನೋಡ್ತಾ ಇದ್ದೇನೆ. ಪಂಚರತ್ನ ಯೋಜನೆ ಹುಡುಗಾಟಿಕೆಗೆ ಮಾಡಿದ್ದಲ್ಲ. ನಿಮ್ಮಗಳ ಕಷ್ಟಗಳನ್ನು ನೋಡಿಯೇ ಮಾಡಿರುವುದು ಎಂದು ಕುಮಾರಸ್ವಾಮಿ ಹೇಳಿದರು.

ಮುಡಾ ಅಲ್ಲ.. ಸಾರ್ವಜನಿಕರು ಬಡವಾದ್ರು...!!

ನಿವೇಶನ ಬಿಡುಗಡೆ ಮಾಡುವುದು, ಖಾತೆ ನೋಂದಣಿ, ಖಾತಾ ವರ್ಗಾವಣೆ, ತುಂಡು ಭೂಮಿ ಹಂಚಿಕೆ, ಬದಲಿ ನಿವೇಶನ ಮಂಜೂರು, ಕ್ರಯ ಪತ್ರ ನೀಡುವುದೂ ಸೇರಿದಂತೆ ಖಾಸಗಿ ಡೆವಲಪರ್‌ಗಳು, ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಅನುಕೂಲ ಮಾಡಿಕೊಡುವ ವಿಷಯಗಳೇ ಚರ್ಚೆಗೆ ಬರುತ್ತಿವೆಯೇ ಹೊರತು ಮುಡಾ ಅಭಿವೃದ್ಧಿ ಯೋಜನೆಗಳಾಗಲೀ, ಸಾರ್ವಜನಿಕರಿಗೆ ಪ್ರಯೋಜನವಾಗುವ ವಿಷಯಗಳು ಚರ್ಚೆಗೆ ಬರುತ್ತಿಲ್ಲ.

2021ರ ಆಗಸ್ಟ್ 27ರಂದು ನಡೆದ ಸಭೆಯಲ್ಲಿ ಒಂದೇ ದಿನ ಸುಮಾರು 600 ವಿಷಯಗಳನ್ನು ಮಂಡಿಸಲಾಗಿತ್ತು. ಆ ಪೈಕಿ ಶೇ. 80ರಷ್ಟು ವಿಷಯಗಳು ನಗರ ಯೋಜನಾ ಶಾಖೆ (**TPM**) ಗಳಿಗೆ ಸಂಬಂಧಿಸಿದ ಬಡಾವಣೆಗಳ ನಕ್ಷೆ ಅನುಮೋದನೆ, ನಿವೇಶನ ಬಿಡುಗಡೆ, ಖಾತಾ ವರ್ಗಾವಣೆಯಂತಹ ವಿಷಯಗಳಿಗೆ 9 ತಿಂಗಳ ಹಿಂದೆ ನಡೆದಂತಹ ಸಭೆಯಲ್ಲಿ ಅನುಮೋದನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

2022ರ ಮಾರ್ಚ್ 31ರಂದು ಪ್ರಸಕ್ತ ಸಾಲಿನ ಆಯವ್ಯಯ ಸಭೆ ನಡೆಸಿದ್ದನ್ನು ಹೊರತುಪಡಿಸಿದರೆ, ಈ ವರ್ಷ ಒಂದೇ ಒಂದು ಸಭೆಯನ್ನು ಮುಡಾ ಮಾಡಿಲ್ಲ. ಪರಿಣಾಮ ವಸಂತ ನಗರ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲ ಗೌಡ ನಗರ ಬಡಾವಣೆಗಳ 3000 ನಿವೇಶನಗಳಿಗೆ ಟೈಟಲ್ ಡೀಡ್ ಕೊಡುವ ಪ್ರಸ್ತಾವನೆ ನನೆಗುದಿಗೆ ಬಿದ್ದಿತ್ತಲ್ಲದೇ, ನಾಗರಿಕ ಸೌಲಭ್ಯ (ಸಿಎ) ನಿವೇಶನ ಹಂಚಿಕೆ ಗುಂಪು ಮನೆ ನಿರ್ಮಾಣ, ಒಂದೇ ಬಾರಿಗೆ ಕಾಮಗಾರಿ ಪೂರ್ಣಗೊಳಿಸುವುದು (ಒನ್ ಟೈಮ್ ಮೆಸರ್ಸ್) ಇಂತಹ ನೂರಾರು ಕೋಟಿ ರೂ.ಗಳ ಸಾರ್ವಜನಿಕ ಯೋಜನೆಗಳು ಮತ್ತಷ್ಟು ವಿಳಂಬವಾಗಲಿವೆ.

ಮುಡಾ ವ್ಯಾಪ್ತಿಯಲ್ಲಿರುವ ಮೂಲೆ ಮತ್ತು ಮಧ್ಯಂತರ ನಿವೇಶನ, ಮನೆಗಳನ್ನು ಹರಾಜು ಮೂಲಕ ಮಾರಾಟ ಮಾಡಿ ಅದರಿಂದ ಬರುವ ಹಣದಲ್ಲಿ ಪ್ರಾಧಿಕಾರದ ಖರ್ಚು– ವೆಚ್ಚ ನಿರ್ವಹಣೆ ಮಾಡಲಾಗುತ್ತಿದೆಯೇ ಹೊರತು ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ. ನಿವೇಶನಗಳೆಲ್ಲವೂ ಹರಾಜಿನಲ್ಲಿ ಮಾರಾಟವಾದರೆ ನಂತರ ಆದಾಯದ ಮೂಲ ಬಂದಾದರೆ, ಮುಡಾ ಮುಚ್ಚುವ ಪರಿಸ್ಥಿತಿ ಎದುರಾದರೂ ಅಚ್ಚರಿಯಿಲ್ಲ. ಹಾಗಾದಲ್ಲಿ ಮುಡಾ ಕೇವಲ ಯೋಜನಾ ಪ್ರಾಧಿಕಾರವಾಗಿ ಮಾತ್ರ ಉಳಿಯಬೇಕಾಗುತ್ತದೆ. ವಸತಿ, ಇಂಜಿನಿಯರಿಂಗ್, ಭೂ ಸ್ವಾಧೀನ, ಎಸ್ಟಾಬ್ಲಿಷ್‌ಮೆಂಟ್ ಸೆಕ್ಷನ್‌ಗಳು, ವಲಯ ಕಚೇರಿಗಳು, ವಿಶೇಷ ತಹಸೀಲ್ದಾರರ ಕಚೇರಿಗಳಿಗೆ ಕೆಲಸವೇ ಇಲ್ಲದಂತಾಗಬಹುದು ಎಂಬುದು ಇಲ್ಲಿನ ಸಿಬ್ಬಂದಿಯ ಆತಂಕ.

ಆಸಿಡ್ ದಾಳಿ ಆರೋಪಿ ನಾಗೇಶ್ ಬಂಧನ

ಪ್ರತೀ ಸೋಮವಾರ ಮತ್ತು ಶುಕ್ರವಾರ ತಪ್ಪದೇ ದೇವಸ್ಥಾನಗಳಿಗೆ ಹೋಗುತ್ತಿದ್ದ ಎಂಬ ಮಾಹಿತಿ ಆತನ ಕುಟುಂಬದವರಿಂದ ಪೊಲೀಸರಿಗೆ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ತಮಿಳುನಾಡು, ಆಂಧ್ರ ಕೇರಳ ಹಾಗೂ ಉತ್ತರ ಭಾರತದ ಕೆಲ ಧಾರ್ಮಿಕ ಕೇಂದ್ರಗಳಿಗೂ ಭೇಟಿ ನೀಡಿದ್ದರು. ಕೊನೆಗೆ ತಿರುವಣ್ಣಾಮಲೈ ಪ್ರದೇಶದಲ್ಲಿ ಈತ ಇರುಹುದು ಎಂಬ ಸುಳಿವು ದೊರೆತು ಅಲ್ಲಿಗೆ ತೆರಳಿದ್ದ ಪೊಲೀಸರಿಗೆ ರಮಣ ಆಶ್ರಮದಲ್ಲಿ ಹೊಸದಾಗಿ ಸ್ವಾಮೀಜಿಯೊಬ್ಬರು ಬಂದಿದ್ದಾರೆ ಎಂಬ ಮಾಹಿತಿ ದೊರೆತು ಆಶ್ರಮಕ್ಕೆ ಏಕಾಏಕಿ ನುಗ್ಗಲು ಸಾಧ್ಯವಿಲ್ಲ. ಮಫ್ತಿಯಲ್ಲಿದ್ದರೂ ಕೂಡ ಹೆಚ್ಚಿನ ಸಮಯ ಅಲ್ಲಿರುವುದು ಅಸಾಧ್ಯ ಎಂದು ಭಾವಿಸಿದ ಪೊಲೀಸರು ತಾವೂ ಕೂಡ ಸ್ವಾಮೀಜಿಗಳಂತೆ ಖಾವಿ ತೊಟ್ಟು ಆಶ್ರಮ ಪ್ರವೇಶಿಸಿ ಅಲ್ಲಿದ್ದವರ ಬಗ್ಗೆ ನಿಗಾ ವಹಿಸಿದ್ದರು. ಕೊನೆಗೂ ಆಸಿಡ್ ನಾಗೇಶನನ್ನು ಗುರುತಿಸಿದ ಪೊಲೀಸರು ಆತನನ್ನು ಬಂಧಿಸಿ, ಬೆಂಗಳೂರಿಗೆ ಕರೆತಂದಿದ್ದಾರೆ.

ಶಬ್ಬಾ ಷರೀಫ್ ಕೇರಳದಲ್ಲಿ ಭೀಕರ ಹತ್ಯೆ

ಅವರನ್ನು ಅಪಹರಿಸಿ, ಗೃಹ ಬಂಧನದಲ್ಲಿಟ್ಟು ಚಿತ್ರಹಿಂಸೆ ನೀಡಲಾಗಿದೆ. ಆದರೆ ತಮ್ಮ ಪ್ರಯತ್ನ ಫಲಿಸದಿದ್ದಾಗ 2020ರ ಅಕ್ಟೋಬರ್‌ನಲ್ಲಿ ಹತ್ಯೆ ಮಾಡಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ರೋಚಕ–ಭಯಾನಕ: ಕೇರಳದ ಭಾರೀ ಉದ್ಯಮಿ ಶಬೀನ್ ಆಶ್ರಫ್ ಮನೆಯಲ್ಲಿ ಕಳೆದ ಏಪ್ರಿಲ್ 24ರಂದು 7 ಲಕ್ಷ ರೂ. ದರೋಡೆ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆಶ್ರಫ್ ಸ್ನೇಹಿತ ತಂಗಳಕಟ್ಟು ಎಂಬಾತನನ್ನು ಬಂಧಿಸಿದ್ದರು. ಇದರಿಂದ ಕೋಪಗೊಂಡ ಈತನ ಮೂವರು ಸ್ನೇಹಿತರು ಕೇರಳ ಸಚಿವಾಲಯದ ಮುಂದೆ ಹೈಡ್ರಾಮಾ ಸೃಷ್ಟಿಸಿದ್ದರು. ತಮ್ಮ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದರು. ಅವರನ್ನು ಪೊಲೀಸರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದರು.

ಹೈಡ್ರಾಮಾ ಸಂದರ್ಭದಲ್ಲಿ ತಳ್ಳಾಟ–ನೂಕಾಟವಾಗಿ ನೆಲದಲ್ಲಿ ಬಿದಿದ್ದ ಪೆನ್‌ಡ್ರೈವ್ ಪೊಲೀಸರ ಕೈಗೆ ಸಿಕ್ಕಿತ್ತು. ಆತ್ಮಹತ್ಯೆಗೆ ಯತ್ನಿಸಿದ್ದವರನ್ನು ವಿಚಾರಣೆಗೆ ಒಳಪಡಿಸಿ, ಪೆನ್‌ಡ್ರೈವ್ ನಲ್ಲಿದ್ದ ವಿಡಿಯೋಗಳ ಬಗ್ಗೆ ಕೇಳಿದಾಗ ನಾಟಿ ವೈದ್ಯ ಶಬ್ಬಾ ಷರೀಫ್ ಹತ್ಯೆ ಪ್ರಕರಣ ಬಯಲಾಗಿದೆ. ಶಬೀನ್ ಆಶ್ರಫ್ ಮೈಸೂರಿನಿಂದ ನಾಟಿವೈದ್ಯ ಷರೀಫ್ ಅವರನ್ನು ಅಪಹರಣ ಮಾಡಿ, ಒಂದು ವರ್ಷಗಳ ಕಾಲ ತನ್ನ ಮನೆಯಲ್ಲೇ ಗೃಹ ಬಂಧನದಲ್ಲಿಟ್ಟಿದ್ದ. ಅವರಿಗೆ ನಿತ್ಯ ಚಿತ್ರಹಿಂಸೆ ನೀಡಿ, ಕೊಲೆ ಮಾಡಿ ನಂತರ ಸಿಕ್ಕಿಹಾಕಿಕೊಳ್ಳಬಾರದು ಎಂಬ ಕಾರಣಕ್ಕೆ ಮೃತದೇಹವನ್ನು ತುಂಡು ತುಂಡು ಮಾಡಿ, ಅವುಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ, ಚಳಿಯಾರ್ ನದಿಯಲ್ಲಿ ಎಸೆಯಲಾಗಿದೆ. ಆದರೆ ಆಶ್ರಫ್ ನಮಗೆ ನೀಡಬೇಕಿದ್ದ ಹಣ ನೀಡದೆ ಮೋಸ ಮಾಡಿದ್ದರಿಂದ ಆತನ ಮನೆಯಲ್ಲಿ ದರೋಡೆ ಮಾಡಿದೆವು. ನಾಟಿ ವೈದ್ಯ ಶಬ್ಬಾ ಷರೀಫ್‌ಗೆ ಚಿತ್ರಹಿಂಸೆ ನೀಡಿದ ವಿಡಿಯೋಗಳು ಪೆನ್‌ಡ್ರೈವ್‌ನಲ್ಲಿವೆ ಎಂದು ತಿಳಿಸಿದ್ದರು.

ಶಬ್ಬಾ ಷರೀಫ್ ಅವರ ಪತ್ನಿ ಹಾಗೂ ಮಕ್ಕಳು, ಪೆನ್‌ಡ್ರೈವ್‌ನಲ್ಲಿರುವ ವಿಡಿಯೋ ನೋಡಿ ಅದರಲ್ಲಿರುವುದು ಷರೀಫ್ ಅವರೇ ಎನ್ನುವುದನ್ನು ಗುರುತಿಸಿದ್ದಾರೆ. ಈ ಸಂಬಂಧ ಅಲ್ಲಿನ ಪೊಲೀಸರು ಕಳೆದ ಮಂಗಳವಾರ ಹತ್ಯೆ ಪ್ರಕರಣ ದಾಖಲಿಸಿಕೊಂಡು, ಪ್ರಮುಖ ಆರೋಪಿ ಶಬೀನ್ ಆಶ್ರಫ್ ಸೇರಿದಂತೆ ನಾಲ್ವರು ಆರೋಪಿಗಳನ್ನು ಗುರುವಾರ ಬಂಧಿಸಿದ್ದಾರೆ. ಪ್ರಕರಣದ ತನಿಖೆಗೆ ಮೈಸೂರಿನ ಪೊಲೀಸರೂ ಸಹಕಾರ ನೀಡಿದ್ದಾರೆ.

ಬರಬಹುದಾದ ಚುನಾವಣೆಗೆ ಸಜ್ಜಾಗಿ...

ಉಳಿದ ನಾಯಕರು ಬಹಿರಂಗವಾಗಿ ಗುದ್ದಾಡತೊಡಗುತ್ತಾರೆ. ಇದರ ಲಾಭ ಆಡಳಿತಾರೂಢ ಬಿಜೆಪಿಗೆ ದೊರೆಯಲಿದೆ ಎಂದು ವರಿಷ್ಠರು ಈ ನಾಯಕರಿಗೆ ಎಚ್ಚರಿಸಿದ್ದಾರೆ. ಈ ಮಧ್ಯೆ ಕೆಪಿಸಿಸಿ ಅಧ್ಯಕ್ಷರು ಕೇವಲ ತಮಗಾಗದ ಬಿಜೆಪಿ ನಾಯಕರ ವಿರುದ್ಧ ಹೋರಾಟ ಮಾಡುತ್ತಾರೆ. ರಮೇಶ್ ಜಾರಕಿಹೊಳಿ, ಕೆ.ಎಸ್.ಈಶ್ವರಪ್ಪ ಮತ್ತು ಈಗ ಡಾ.ಅಶ್ವತ್ಥ ನಾರಾಯಣ್ ಅವರ ವಿರುದ್ಧ ವೈಯಕ್ತಿಕ ಕಾರಣಗಳ ಮುಂದಿಟ್ಟುಕೊಂಡು ದಾಳಿ ಮಾಡುತ್ತಿರುವ ಅವರು ಸರ್ಕಾರದ ಉಳಿದ ಮಂತ್ರಿಗಳ ಬಗ್ಗೆ ಚಕಾರ ಎತ್ತುತ್ತಿಲ್ಲ.

ನಲವತ್ತು ಪರ್ಸೆಂಟ್ ಕಮೀಷನ್ನಿನ ಆರೋಪ ಸರ್ಕಾರದ ವಿರುದ್ಧ ಕೇಳಿ ಬಂದಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆ ಕೇಳುವ ಕೆಲಸವಾಗ ಬೇಕಿತ್ತು. ಇದೇ ರೀತಿ ಸರ್ಕಾರದ ಹಲವು ಸಚಿವರ ವಿರುದ್ಧ ಆರೋಪಗಳಿವೆ. ಆದರೆ ಇಂತಹವರ ವಿರುದ್ಧ ಅಧ್ಯಕ್ಷರು ಪರಿಣಾಮಕಾರಿಯಾಗಿ ಹೋರಾಟ ನಡೆಸುತ್ತಿಲ್ಲ ಎಂಬ ದೂರುಗಳು ಬಂದಿದ್ದು ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ ಎಂದು ವರಿಷ್ಠರು ರಾಜ್ಯ ಅಧ್ಯಕ್ಷರಿಗೆ ಸೂಚಿಸಿದ್ದಾರೆ. ಕಾರ್ಯತಂತ್ರ ರೂಪಿಸಿ, ಪಕ್ಷದ ಕಾರ್ಯಕರ್ತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿ ಎಂದು ವರಿಷ್ಠರು ಸಲಹೆ ಮಾಡಿದ್ದಾರೆ.

ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದೆ

ಯಾತ್ರೆ ಆರಂಭವಾದ ದಿನದಿಂದ ಈವರೆಗೆ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಇದು ಶುಭಸೂಚಕ. ಜನತಾ ಜಲಧಾರೆ ವಾಹನದ ಮೂಲಕ ರಾಜ್ಯ ನೀರಾವರಿ ಯೋಜನೆಗಳನ್ನು ಅನುಷ್ಠಾನಮಾಡುವ ಜೆಡಿಎಸ್ ಪಕ್ಷದ ಸಂಕಲ್ಪವನ್ನು ನಾಡಿನ ಜನರಿಗೆ ತಿಳಿಸಲಾಗಿದೆ. ಆ ಮೂಲಕ ರೈತರ, ಬಡವರ, ಅಭಿವೃದ್ಧಿಯ ಕನಸು ಕಂಡಿರುವ ಪಕ್ಷದ ಬದ್ಧತೆಯನ್ನು ಜನರು ಅರಿತಿದ್ದಾರೆ. ನಾನೂ ಸಹ ನಾಡಿಗೆ ಒಳಿತಾಗಲಿ ಎಂದು ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ ಎಂದರು. ಮುಂಬರುವ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಅಧಿಕೃತವಾಗಿ ಪ್ರಕಟಿಸಬೇಕಷ್ಟೆ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರೊಂದಿಗೆ ಚರ್ಚಿಸಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ತಾಳೆಗರಿ, ಹಸ್ತ ಪ್ರತಿಗಳ ಸಂರಕ್ಷಣಾ ಕಾರ್ಯ ಆರಂಭ

ಬೆಂಗಳೂರಿನ ದಿ ಮಿಥಿಕ್ ಸೊಸೈಟಿ ಮೂಲಕ ಸಂರಕ್ಷಣೆ





ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿನ ತಾಳೆಗರಿಗಳ ಆಧರಿಸಿ ಸಂಶೋಧನೆಗಾಗಿ ದೇಶ, ವಿದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸಿ, ಇಲ್ಲಿ ಬೇಕಾಗುವ ಮಾಹಿತಿಗಳನ್ನು ಪಡೆದುಕೊಂಡು ಹೋಗುತ್ತಾರೆ. ಆದರೆ ಡಿಜಿಟಲೀಕರಣವಾದ ನಂತರ ಅವರು ನೇರವಾಗಿ ವೆಬ್‌ಸೈಟ್ ಮೂಲಕವೇ ತಾವಿದ್ದಲ್ಲೇ ಬೇಕಿರುವ ತಾಳೆಗರಿಗಳು ಮತ್ತು ವಿಷಯಗಳನ್ನು ಪಡೆಯಬಹುದಾಗಿದೆ.
-ಡಾ.ರಾಮಪ್ರಿಯ, ನಿರ್ದೇಶಕ, ಪ್ರಾಚ್ಯ ವಿದ್ಯಾ ಸಂಶೋಧನಾಲಯ

ಕರ್ನಾಟಕದಲ್ಲೇ ಅತೀ ಹೆಚ್ಚಿನ ತಾಳೆಗರಿ ಹಾಗೂ ಹಸ್ತಪ್ರತಿ ಸಂಗ್ರಹ ಇಲ್ಲಿದೆ. ಸದ್ಯ ಈಗ ದಿ ಮಿಥಿಕ್ ಸೊಸೈಟಿ ಸಹಯೋಗದೊಂದಿಗೆ ಡಿಜಿಟಲೀಕರಣಕ್ಕೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅವರು ಸಂರಕ್ಷಣೆಯ ಮೊದಲ ಹಂತ ಆರಂಭಿಸಿದ್ದಾರೆ. ಅಧಿಕೃತವಾಗಿ ಈ ತಿಂಗಳ ಅಂತ್ಯದಲ್ಲಿ ರಾಜ್ಯ ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್. ಅಶ್ವತ್ಥ ನಾರಾಯಣ್ ಅವರ ಮೂಲಕ ಈ ಕಾರ್ಯಕ್ಕೆ ಚಾಲನೆ ನೀಡುವ ಉದ್ದೇಶವಿತ್ತು. ಆದರೆ ಪದವೀಧರ ಕ್ಷೇತ್ರದ ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಅದನ್ನು ಮುಂದಿನ ತಿಂಗಳಿಗೆ ಮುಂದೂಡಲಾಗಿದೆ. ಡಿಜಿಟಲೀಕರಣದಿಂದ ಹಲವಾರು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದೆ. ಸದ್ಯ ಇಲ್ಲಿನ ತಾಳೆಗರಿ ಹಾಗೂ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡಲಾಗುತ್ತದೆ ನಂತರ ವಿವಿಯ ಕನ್ನಡ ಸಂಶೋಧನೆ ವಿಭಾಗದಲ್ಲಿ ಸಂರಕ್ಷಣೆ ಮಾಡಲಾಗುತ್ತದೆ.
–ಪ್ರೊ.ಜಿ.ಹೇಮಂತ್ ಕುಮಾರ್, ಕುಲಪತಿ, ಮೈಸೂರು ವಿಶ್ವವಿದ್ಯಾಲಯ

ಮೈಸೂರು, ಮೇ 13(ಜಿಎ)– ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯ ಮೊದಲನೇ ಹಂತದ ಪ್ರಕ್ರಿಯೆ ಆರಂಭವಾಗಿದೆ.

ಇಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣದ ಉದ್ದೇಶ ದಿಂದ ಮೈಸೂರು ವಿಶ್ವವಿದ್ಯಾಲಯವು ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ಅದರಂತೆ ಈ ಸಂಸ್ಥೆಯು ಮೊದಲ ಹಂತವಾಗಿ ಸಂಸ್ಥೆಯ ಗೌರವ ಕಾರ್ಯದರ್ಶಿ ವಿ. ನಾಗರಾಜ್ ನೇತೃತ್ವದಲ್ಲಿ ಸಂರಕ್ಷಣಾ ಕಾರ್ಯ ಆರಂಭಿಸಿದೆ.

ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯು 112 ವರ್ಷಗಳಷ್ಟು ಹಳೆಯ ಸಂಸ್ಥೆಯಾಗಿದ್ದು, ಈಗಾಗಲೇ ಅನೇಕ ರೀತಿಯ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯನ್ನು ಮಾಡಿ ನೈಪುಣ್ಯತೆ ಹೊಂದಿದ್ದು, ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ತಾಳೆಗರಿಗಳನ್ನು ಕೋಟಿ ರೂ. ವೆಚ್ಚದಲ್ಲಿ ಸಂರಕ್ಷಿಸುತ್ತಿದೆ.

ಮೊದಲ ಹಂತ : ಭಾರತದಲ್ಲಿಯೇ ಅತೀ ಹೆಚ್ಚು ತಾಳೆಗರಿ ಮತ್ತು ಹಸ್ತ ಪ್ರತಿಗಳನ್ನು ಒಳಗೊಂಡಿರುವ ಸಂಸ್ಥೆಗಳಲ್ಲಿ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲ ಎರಡನೇಯ ಸ್ಥಾನದಲ್ಲಿದ್ದು, ಇಲ್ಲಿ 650 ರಿಂದ 700 ವರ್ಷಗಳ ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಸೇರಿದಂತೆ ವಿವಿಧ ಭಾಷೆಯ ಹಸ್ತ ಪ್ರತಿಗಳಿವೆ. ಇವುಗಳ ಸಂರಕ್ಷಣೆಗೆ ಮೈಸೂರು ಮಹಾರಾಜ ಕಾಲೇಜಿನ ಪ್ರೊ. ರೋಹಿತ್ ಈಶ್ವರ್ ಅವರ ನೇತೃತ್ವದ 20 ವಿದ್ಯಾರ್ಥಿಗಳು ಮತ್ತು ಇನ್ನಿತರ ಕೆಲ ಮಂದಿಯನ್ನು ನೇಮಿಸಿಕೊಂಡು ಸಂಶೋಧನಾ ಸಂಯೋಜಕರಾದ ಡಾ. ಜಯಸಿಂಹರ ಮೂಲಕ ಸಂರಕ್ಷಣೆ ಆರಂಭಿಸಿರುವ ದಿ ಮಿಥಿಕ್ ಸೊಸೈಟಿಯು ಮೊದಲ ಹಂತವಾಗಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ದಾಖಲಾತಿಗಳನ್ನು ಆಯ್ಕೆ ಮಾಡಿಕೊಂಡಿದೆ.

ಫ್ಯೂಮಿಗೇಷನ್ ತಂತ್ರಜ್ಞಾನ : ನಂತರ ತಾಳೆಗರಿಗಳನ್ನು ಬ್ರೆಷ್ ಮೂಲಕ ಸ್ವಚ್ಛಗೊಳಿಸಿಕೊಳಿಸುತ್ತಾರೆ. 80, 90ರ ದಶಕದ ನಂತರ ಇಲ್ಲಿರುವ ತಾಳೆಗರಿಗಳು ಬೂಸ್ಟ್ ಅಥವಾ ಹುಳುಗಳು ತಿಂದಿರುವ ಸಾಧ್ಯತೆ ಇದ್ದು, ಅದಕ್ಕಾಗಿ ಫ್ಯೂಮಿಗೇಷನ್‌ನ ಕೊಠಡಿಯೊಳಗೆ ಇರಿಸಿ ಬೂಸ್ಟ್ ಇದ್ದರೆ ಟ್ರೈಮಾಲ್, ಹುಳು ಮತ್ತು ಅವುಗಳ ಮೊಟ್ಟೆ ಕಂಡುಬಂದರೆ ಪ್ಯಾರಡೈಮಾಲ್ ಕ್ಲೋರ್ ರಾಸಾಯನಿಕಗಳ ಹೊಗೆಯಲ್ಲಿ ಸಂಸ್ಕರಣೆ ಮಾಡುತ್ತಾರೆ.

ಮಜ್ಜಿಗೆ ಹುಲ್ಲಿನ ಎಣ್ಣೆ : ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಸುಮಾರು 650 ರಿಂದ 700 ವರ್ಷಗಳ ಹಳೆಯದಾಗಿದ್ದು, ಅವುಗಳನ್ನು ದೀರ್ಘ ಕಾಲ ಸಂರಕ್ಷಿಸುವ ಉದ್ದೇಶದಿಂದ ಮಜ್ಜಿಗೆ ಹುಲ್ಲಿನ ಎಣ್ಣೆ ಹಚ್ಚಿ ಕೆಲ ಕಾಲ ಒಣಗಿಸಲಾಗುತ್ತದೆ. ಮಜ್ಜಿಗೆ ಹುಲ್ಲಿನ ಎಣ್ಣೆಯಲ್ಲಿ ಯಾವುದೇ ಜಿಡ್ಡಿನ ಅಂಶವಿರುವುದಿಲ್ಲ ಮತ್ತು ಅದರ ವಾಸನೆಗೆ ಮತ್ತೆ ಯಾವುದೇ ಹುಳಗಳು ತಾಳೆಗರಿ ಸೇರುವುದಿಲ್ಲ ಹಾಗೂ ಗರಿಗಳು ಮತ್ತಷ್ಟು ಮೃದುವಾಗುತ್ತವೆ. ಈ ಪ್ರಕ್ರಿಯೆಯಿಂದ ತಾಳೆಗರಿಗಳು ಮತ್ತಷ್ಟು ವರ್ಷಗಳು ಬಳಕೆ ಬರುತ್ತವೆ.

ಡಿಜಿಟಲೀಕರಣ : ಮಜ್ಜಿಗೆ ಹುಲ್ಲಿನ ಎಣ್ಣೆಯಲ್ಲಿ ಒಣಗಿದ ನಂತರ ಅದಕ್ಕೆ ಒಂದು ಕೆಂಪು ಕಾಟನ್ ಬಟ್ಟೆ ಸುತ್ತಲಾಗುತ್ತದೆ. ಅದಕ್ಕೂ ಮೊದಲು ಕಾಟನ್ ಬಟ್ಟೆಯಲ್ಲಿರುವ ಗಂಜಿಯನ್ನು ಸಂಪೂರ್ಣವಾಗಿ ತೆಗೆಯಲಾಗುತ್ತದೆ. ಕೆಂಪು ಕಾಟನ್ ಬಟ್ಟೆ ಬಳಕೆಯಿಂದ ತಾಳೆಗರಿಗಳು ಸುರಕ್ಷಿತವಾಗಿರಲಿವೆ. ಈ ಎಲ್ಲಾ ಹಂತದ ಪ್ರಕ್ರಿಯೆ ಮುಗಿದ ನಂತರ ಡಿಜಿಟಲೀಕರಣ ಆರಂಭವಾಗಲಿದೆ. ಡಿಜಿಟಲೀ ಕರಣಕ್ಕೆ ಯಾವುದೇ ಜೆರಾಕ್ಸ್ ಮೆಷಿನ್ ಬಳಸದೇ ಫ್ಲಾಟ್ಬೆಡ್ ಸ್ಕ್ಯಾನರ್ ಅನ್ನು ಬಳಸಲಾಗುತ್ತದೆ. ಏಕೆಂದರೆ ಇದರಿಂದ ತಾಳೆಗರಿಗಳಿಗೆ ಹಾನಿಯಿಲ್ಲ. ಫ್ಲಾಟ್ಬೆಡ್ ಸ್ಕ್ಯಾನರ್ ಮೂಲಕ ಪಿಡಿಎಫ್, ಜೆಪಿಜಿ, ಪಿಎನ್‌ಜಿ ಸೇರಿದಂತೆ ಅನೇಕ ವಿಧಾನ ಅನುಸರಿಸಿ, ಅಂತಿಮವಾಗಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುವುದು. ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯ ದಲ್ಲಿರುವ ತಾಳೆಗರಿಗಳು, ಹಸ್ತಪ್ರತಿಗಳ ಸಂರಕ್ಷಣೆಯ ಪ್ರಕ್ರಿಯೆ ಮುಗಿಸಲು ಸರಿ ಸುಮಾರು ಎರಡು ವರ್ಷಗಳು ಬೇಕಾಗಿದೆ ಎನ್ನಲಾಗುತ್ತಿದೆ.

ಸರಿಯಾಗಿ ಹಂಚಿಕೆಯಾಗದ ರೈತರ ಸೌಲಭ್ಯಗಳು

ಅಖಂಡ ಕರ್ನಾಟಕ ರೈತಸಂಘದ ರಾಜ್ಯ ಘಟಕ ಆರೋಪ; ಪ್ರತಿಭಟನೆ ಎಚ್ಚರಿಕೆ



ಮೈಸೂರು, ಮೇ 13(ಆರ್‌ಕೆಬಿ)– ಮೈಸೂರು ಜಿಲ್ಲೆಯ ಕೃಷಿ ಇಲಾಖೆ ಕಚೇರಿಗಳಲ್ಲಿ ರೈತರಿಗೆ ಸರ್ಕಾರದಿಂದ ಬಂದಿರುವ ಸೌಲಭ್ಯಗಳು ಸೂಕ್ತ ರೀತಿಯಲ್ಲಿ ಹಂಚಿಕೆಯಾಗುತ್ತಿಲ್ಲ ಎಂದು ಅಖಂಡ ಕರ್ನಾಟಕ ರೈತಸಂಘದ ರಾಜ್ಯ ಘಟಕ ಆರೋಪಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಸುಧೀರ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ರಸಗೊಬ್ಬರದ ಅಂಗಡಿಗಳಲ್ಲಿ ರಸಗೊಬ್ಬರ ಹಾಗೂ ಔಷಧಿಗಳ ದರಪಟ್ಟಿ ಹಾಕುತ್ತಿಲ್ಲ. ಅದರಲ್ಲೂ ಹುಣಸೂರು ತಾಲೂಕಿನಲ್ಲಿ ಕೃಷಿ ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಸರ್ಕಾರದ ಸೌಲಭ್ಯಗಳು ನಿಜವಾದ ರೈತನಿಗೆ ತಲುಪುತ್ತಿಲ್ಲ ಎಂದು ದೂರಿದರು.

ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿ ಹುಲ್ಲೇನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಂಘದಲ್ಲಿ ಕಾರ್ಯದರ್ಶಿ ಅವ್ಯವಹಾರದಲ್ಲಿ ಭಾಗಿಯಾಗಿದ್ದು, ಈ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿದ್ದರೂ ಹಿರಿಯ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಇದರ ವಿರುದ್ಧ ಸಂಘವು ಉಗ್ರ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು.

ಜಿಲ್ಲೆಯಾದ್ಯಂತ ಅಕಾಲಿಕ ಮಳೆಯಿಂದ ಬೆಳೆ ಹಾಗೂ ಮನೆಗಳಿಗೆ ಹಾನಿಯಾಗಿದ್ದು, ಸರ್ಕಾರದಿಂದ ಸಂತ್ರಸ್ತರಿಗೆ ಪರಿಹಾರ ನೀಡಬೇಕು. ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳಿಂದ ಬೆಳೆ ಹಾನಿಯಾಗುವುದನ್ನು ತಪ್ಪಿಸಬೇಕು. ಪಿರಿಯಾಪಟ್ಟಣ ತಾಲೂಕು ಕಂಪಲಾಪುರ ಗ್ರಾಪಂ ವ್ಯಾಪ್ತಿಯಲ್ಲಿ ಖಾಲಿ ಜಾಗವನ್ನು ನಿವೇಶನರಹಿತರಿಗೆ ಹಂಚಿಕೆ ಮಾಡಬೇಕು. ಬಿಳಿಕೆರೆ ಗ್ರಾಪಂ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಈ ಎಲ್ಲಾ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸದಿದ್ದರೆ ಪ್ರತಿಭಟನೆ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಅಖಂಡ ಕರ್ನಾಟಕ ರೈತ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಕೆ.ಆರ್.ಕುಮಾರ್ ಬೋವಿ, ಹುಣಸೂರು ತಾಲೂಕು ಅಧ್ಯಕ್ಷ ಜಯರಾಮ್ ಹೊಸಳ್ಳಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಮಹದೇವಮ್ಮ, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಜೆ.ಎಸ್.ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಪಾಲಿಕೆ ಗುಮಾಸ್ತನ ಮನೆಯಲ್ಲಿ 17 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು!

ಮೈಸೂರು, ಮೇ 13– ಮೈಸೂರು ನಗರಪಾಲಿಕೆಯ ದ್ವಿತೀಯ ದರ್ಜೆ ಸಹಾಯಕರ ಮನೆಯಲ್ಲಿ 17 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವಾಗಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಜಯಲಕ್ಷ್ಮೀಪುರಂ 3ನೇ ಹಂತ 7ನೇ ಮುಖ್ಯರಸ್ತೆಯಲ್ಲಿ ವಾಸವಿರುವ ಪಾಲಿಕೆ ದ್ವಿತೀಯ ದರ್ಜೆ ಸಹಾಯಕ ಎಸ್. ಯಶೋಧರ ಅವರ ಕುಟುಂಬದವರು ಮೇ 11ರಂದು ಸಂಜೆ 7.10ರ ಸುಮಾರಿನಲ್ಲಿ ವಿವಿ ಮೊಹಲ್ಲಾದಲ್ಲಿರುವ ಅವರ ಸ್ನೇಹಿತರ ಮನೆಗೆ ತೆರಳಿ ರಾತ್ರಿ 10.50ಕ್ಕೆ ಹಿಂದಿರುಗಿದಾಗ ಮನೆಯ ಬಾಗಿಲು ಅರ್ಧ ತೆರೆದಿತ್ತು. ಒಳಗೆ ಹೋಗಿ ನೋಡಿದಾಗ ಒಂದು ಕೊಠಡಿಯಲ್ಲಿ ಬಟ್ಟೆಬರೆಗಳನ್ನು ಚೆಲ್ಲಾಪಿಲ್ಲಿ ಮಾಡಿ ಹುಡುಕಾಡಿರುವ ಕುರುಹುಗಳು ಕಂಡುಬಂದಿವೆ. ಮತ್ತೊಂದು ಕೊಠಡಿಯಲ್ಲಿರುವ ಬೀರುವಿನ 4 ಡ್ರಾಯರ್‌ಗಳನ್ನು ಮೀಟಿ ಅದರಲ್ಲಿದ್ದ 80 ಗ್ರಾಂನ ಚಿನ್ನದ ಸರ, 45 ಗ್ರಾಂನ ಬ್ರೇಸ್‌ಲೈಟ್, 28 ಗ್ರಾಂನ ಚಿನ್ನದ ಕಡಗ, 50 ಗ್ರಾಂನ ಲಾಂಗ್‌ಚೈನ್, 40 ಗ್ರಾಂನ ನೆಕ್ಲೆಸ್, 15 ಗ್ರಾಂನ ಚಿನ್ನದ ಓಲೆ, 10 ಗ್ರಾಂನ ಜುಮ್ಕಿ, 20 ಗ್ರಾಂ ಚಿನ್ನದ ಓಲೆ, 30 ಗ್ರಾಂನ ಚಿನ್ನದ ಬಳೆ, 80 ಗ್ರಾಂನ 10 ಚಿನ್ನದ ಉಂಗುರಗಳು ಸೇರಿದಂತೆ ಒಟ್ಟು 17 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಕಳವು ಮಾಡಲಾಗಿದೆ ಎಂದು ಅವರು ಜಯಲಕ್ಷ್ಮೀಪುರಂ ಠಾಣೆಗೆ ದೂರು ಸಲ್ಲಿಸಿದ್ದಾರೆ.

ತಾವು ಸ್ನೇಹಿತನ ಮನೆಗೆ ಹೋಗುವಾಗ ತಮ್ಮ ಮನೆ ಬೀಗ ಹಾಕುವುದನ್ನು ಮರೆತು ಹೋಗಿರಬಹುದು. ಇದನ್ನು ಗಮನಿಸಿದ ಖದೀಮರು ಮನೆಯೊಳಗೆ ನುಗ್ಗಿ ಕಳವು ಮಾಡಿರಬಹುದು ಎಂದು ಯಶೋಧರ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ಮೇ 16ರಂದು ರಾಷ್ಟ್ರೀಯ ಡೆಂಗೀ ದಿನ

ಮೈಸೂರು, ಮೇ 13– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ವತಿಯಿಂದ ರಾಷ್ಟ್ರೀಯ ಡೇಂಗಿ ದಿನ ಆಚರಣೆ ಪ್ರಯುಕ್ತ ಮೇ 16ರಂದು ಬೆಳಗ್ಗೆ 10 ಗಂಟೆಗೆ ನಗರದ ಕೃಷ್ಣಮೂರ್ತಿಪುರಂನ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ (ಬುದ್ಧ ವಿಹಾರ್ ಆವರಣ, ಬಲ್ಲಾಳ್ ವೃತ್ತ-ಆರ್‌ಟಿಒ ಕಛೇರಿ ನಡುವೆ) ಸಭೆ ಮತ್ತು ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿ ಬ್ರಿಗೇಡ್ ಅಸ್ತಿತ್ವಕ್ಕೆ

ಅರಸು ನಂತರ ಉತ್ತಮ ಆಡಳಿತ ನೀಡಿದವರು ಸಿದ್ದರಾಮಯ್ಯ



ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಅನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಉದ್ಘಾಟಿಸಿ, ನೇಮಕಾತಿ ಪತ್ರಗಳನ್ನು ವಿತರಿಸಿದರು. ಚಿತ್ರದಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಬ್ರಿಗೇಡ್ ರಾಜ್ಯ ಗೌರವಾಧ್ಯಕ್ಷ ಕೆ.ಮಾರುತಿ, ರಾಜ್ಯಾಧ್ಯಕ್ಷ ಹಿನಕಲ್ ಉದಯ್ ಇನ್ನಿತರರನ್ನು ಕಾಣಬಹುದು.

ಮೈಸೂರು, ಮೇ 13(ಆರ್‌ಕೆಬಿ)– ಉತ್ತಮ ಆಡಳಿತ ನೀಡಿದ ಹಿಂದುಳಿದ ವರ್ಗಗಳ ನೇತಾರ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ನಂತರ ಐದು ವರ್ಷಗಳ ಕಾಲ ಉತ್ತಮ ಜನಪರ ಆಡಳಿತ ನೀಡಿದವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬರೇ. ಅಂಥಹ ನಾಯಕರ ಹೆಸರಿನಲ್ಲಿ ಅಭಿಮಾನಿಗಳ ಬ್ರಿಗೇಡ್ ಸ್ಥಾಪನೆಯಾಗಿರುವುದು ಉತ್ತಮ ಪ್ರಯತ್ನ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್‌ನ ಉದ್ಘಾಟನೆ ನೆರವೇರಿಸಿ, ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ರಾಜಕೀಯದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಸಿಕ್ಕಿದ ಆಡಳಿತದ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಜನಪರ ಯೋಜನೆಗಳನ್ನು ಜನರಿಗೆ ನೀಡುವ ಮೂಲಕ ಜನಾನುರಾಗಿಯಾದರು ಎಂದರು.

ತಾಲೂಕು ಬೋರ್ಡ್ ಸದಸ್ಯರಾಗಿ, ಶಾಸಕ, ಸಚಿವ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ, ವಿರೋಧಪಕ್ಷದ ನಾಯಕ ಹೀಗೆ ಹಲವಾರು ಹುದ್ದೆಗಳಲ್ಲಿ ಉತ್ತಮ ಕೆಲಸ ನಿರ್ವಹಿಸುವ ಮೂಲಕ ಆ ಹುದ್ದೆಗಳಿಗೆ ಘನತೆ, ಗೌರವ ತರುವ ಮೂಲಕ ಸಮರ್ಥ ನಾಯಕರಾಗಿದ್ದಾರೆ. ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಸರಿ ಪಡಿಸಿದ್ದಾರೆ. ವರುಣಾ ನಾಲೆ ಮಾಡಿದರು. ವಿಪಕ್ಷ ನಾಯಕರಾಗಿ ಆಡಳಿತ ಪಕ್ಷದ ವೈಫಲ್ಯಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಿದ್ದಾರೆ. ಅವರ ಐದು ವರ್ಷಗಳ ಆಡಳಿತ ಅವಧಿಯಲ್ಲಿ ರಾಜ್ಯದಲ್ಲಿ ಯಾವುದೇ ಗಲಭೆ, ಕೋಮು ಜಾತಿ ಗಲಭೆಗಳಿಗೆ ಅವಕಾಶ ನೀಡದೆ ಶಾಂತಿ ಕಾಪಾಡಿಕೊಂಡು ಬಂದಿದ್ದಾರೆ. ಒಂದೇ ಒಂದು ಭ್ರಷ್ಟಾಚಾರದ ಆರೋಪ ಅವರ ಮೇಲಿಲ್ಲ. ಇಂದೂ ಕೂಡ ವಿಪಕ್ಷ ನಾಯಕರಾಗಿದ್ದರೂ ಪಕ್ಷಾತೀತವಾಗಿ ವಿಷಯ ಮಂಡಿಸುವ ಚಾಣಾಕ್ಷ್ಯ ರಾಜಕಾರಣಿ ಎನಿಸಿದ್ದಾರೆ. ಎಲ್ಲಾ ಸಮಾಜದವರಿಗೂ ಅವರ ಸಚಿವ ಸಂಪುಟದಲ್ಲಿ ಹಾಗೂ ಸೂಕ್ತ ಸ್ಥಾನಮಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಿಕೊಟ್ಟಿರುವ ಏಕೈಕ ನಾಯಕ ಎಂದು ಹೇಳಿದರು.

ಅವರ ಹೆಸರಿನಲ್ಲಿ ಸ್ಥಾಪನೆಯಾಗಿರುವ ಬ್ರಿಗೇಡ್‌ನ ಕಾರ್ಯಕರ್ತರು ಜನರಲ್ಲಿರುವ ಮೌಢ್ಯತೆ, ಕೋವಿಡ್ ಇನ್ನಿತರ ಸಮಸ್ಯೆಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸ ಮಾಡಲಿ, ಸಾಮಾಜಿಕ ಯಾತ್ರೆ ಕೈಗೊಳ್ಳಲಿ, ಅಶಾಂತಿಯನ್ನು ತಲೆ ಎತ್ತದಂತೆ ಮಾಡಲು ಯತ್ನಿಸಲಿ ಎಂದು ಕರೆ ನೀಡಿದರು.

ವರುಣಾ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಿದ್ದರಾಮಯ್ಯನವರು ಸಂವಿಧಾನದ ಆಶಯಗಳ ಜಾರಿಗೊಳಿಸುವ ಉದ್ದೇಶದೊಂದಿಗೆ ಕಳೆದ 44 ವರ್ಷಗಳ ರಾಜಕೀಯ ಹೋರಾಟ ನಡೆಸಿದ್ದಾರೆ. ಸಾಮಾಜಿಕ ನ್ಯಾಯದ ಮೇಲೆ ನಂಬಿಕೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ಶೋಷಿತ ಹಾಗೂ ಹಿಂದುಳಿದ ವರ್ಗಗಳಿಗೆ ಅನೇಕಾರು ಕಾರ್ಯಕ್ರಮಗಳನ್ನು ನೀಡುವ ಮೂಲಕ ಜನನಾಯಕರಾಗಿದ್ದಾರೆ. ಅವರು ನಂಬಿರುವ ತತ್ವ ಸಿದ್ಧಾಂತಗಳ ಅಡಿಯಲ್ಲೇ ಕೆಲಸ ನಿರ್ವಹಿಸುವ ಅವರು ಹೆಸರಿನಲ್ಲಿ ರಚನೆಯಾಗಿರುವ ಬ್ರಿಗೇಡ್ ಅವರದೇ ಹಾದಿಯಲ್ಲಿ ನಡೆಯಬೇಕು. ಅವರ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸಬೇಕು ಎಂದು ಬ್ರಿಗೇಡ್‌ನ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ಗೌರವಾಧ್ಯಕ್ಷ ಕೆ.ಮಾರುತಿ, ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಉಪಾಧ್ಯಕ್ಷ ಕುಂಬ್ರಳ್ಳಿ ಮಹದೇವು, ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್, ಸಹ ಕಾರ್ಯದರ್ಶಿ ಮಾಕನಹುಂಡಿ ಶಿವು, ಸಚಿನ್ ದೊಡ್ಡೇಗೌಡ, ಸಂಘಟನಾ ಕಾರ್ಯದರ್ಶಿ ಬಿ.ಧನಪಾಲ್, ಕಾರ್ಯಕಾರಿ ಸದಸ್ಯರಾದ ಹರೀಶ್ ಆಚಾರ್, ಹೆಚ್.ಸಿ.ಮಹೇಶ್, ಬಿ.ಕೆ.ರಘು, ಭೋಜರಾಜ್ ಇನ್ನಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್ ಚುನಾವಣೆ; ಸಚಿವರಿಂದ ಬಿರುಸಿನ ಪ್ರಚಾರ

ಹುಣಸೂರು, ಮೇ 13–ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮೈ.ವಿ.ರವಿಶಂಕರ್ ಪರ ಶುಕ್ರವಾರ ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಬಿರುಸಿನ ಪ್ರಚಾರ ನಡೆಸಿದರು.



ಪಟ್ಟಣದ ನಾನಾ ಭಾಗಗಳಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಿದ ಸಚಿವರು, ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯ ಮತಗಳನ್ನು ನೀಡಿ ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕೆಂದು ಪದವೀಧರರು, ವಕೀಲರು, ಶಿಕ್ಷಕರು, ಗಣ್ಯರು, ಮುಖಂಡರಲ್ಲಿ ಮನವಿ ಮಾಡಿದರು.

ರವಿಶಂಕರ್ ಅವರು ಉತ್ತಮ ಸಂಘಟಕರು. ಸಮಾಜದ ಕಟ್ಟಕಡೆಯ, ವಿವಿಧ ಸ್ತರದ ವ್ಯಕ್ತಿಯೊಂದಿಗೂ ಜ್ಯಾತ್ಯಾತೀತವಾಗಿ ಬೆರೆತು ಕಷ್ಟ–ಸುಖಗಳನ್ನು ಆಲಿಸುವ ವ್ಯಕ್ತಿ. ಕಳೆದ ಬಾರಿ ಕಡಿಮೆ ಅಂತರದಿಂದ ಸೋತರೂ, ಸತತ 6 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡು ಅವರ ಸಮಸ್ಯೆಗಳನ್ನು ಆಲಿಸುತ್ತಾ ಬಂದಿದ್ದಾರೆ ಎಂದರು.

ಸರ್ಕಾರದ ಕಾರ್ಯಕ್ರಮವನ್ನು ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ರವಿಶಂಕರ್ ಮಾಡುತ್ತಾ ಬಂದಿದ್ದಾರೆ. ಸಚಿವರು, ಸಂಸದರು ಸೇರಿದಂತೆ ಸರ್ಕಾರದೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದಾರೆ. ಪದವೀಧರ ಕ್ಷೇತ್ರದಲ್ಲಿನ ಸಮಸ್ಯೆಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ದನಿ ಎತ್ತುವ ಗುಣ ಅವರಿಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಲಿದ್ದಾರೆ ಎಂದು ಹೇಳಿದರು. ರಾಜ್ಯದಲ್ಲಿ ಬಿಜೆಪಿ ಪರ ಅಲೆಯಿದ್ದು, ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯೇ ಗೆಲುವು ಸಾಧಿಸಲಿದ್ದಾರೆ. ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನವನ್ನು ರವಿಶಂಕರ್ ಮಾಡಲಿದ್ದಾರೆ. ಹೀಗಾಗಿ ಅವರಿಗೆ ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಪದವೀಧರರು ವಿವಿಧ ಸಮಸ್ಯೆಗಳನ್ನು ಸಚಿವರ ಸಚಿವರ ಗಮನಕ್ಕೆ ತಂದು ಮನವಿ ಪತ್ರ ನೀಡಿದರು.

ಮೇ 16, ಹೆಚ್.ವಿಶ್ವನಾಥ್ ಹುಟ್ಟುಹಬ್ಬ ಆಚರಣೆ



ಹುಣಸೂರು, ಮೇ 13(ಕೆಕೆ)–ತಾಲೂಕು ಕುರುಬರ ಸಂಘ ಹಾಗೂ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಸಮಾಜದ ಹಿರಿಯ ನೇತಾರ, ಶಾಸಕ ಅಡಗೂರು ಹೆಚ್.ವಿಶ್ವನಾಥ್ ಅವರ 75ನೇ ಹುಟ್ಟು ಹಬ್ಬವನ್ನು ಮೇ 16ರಂದು ನಗರದ ಅಂಬೇಡ್ಕರ್ ಭವನದಲ್ಲಿ ಆಚರಿಸಲಾಗುವುದು ಎಂದು ಕುರುಬರ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೆಗೌಡ ತಿಳಿಸಿದ್ದಾರೆ.

ನಗರದ ಪತ್ರಿಕಾ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಪಕ್ಷಾತೀತ, ಜಾತ್ಯತೀತವಾಗಿ ಎಲ್ಲಾ ಸಮುದಾಯದವರು ಸೇರಿ ಹಿರಿಯ ರಾಜಕೀಯ ಮುತ್ಸದ್ಧಿ ಲೇಖಕ ರಾಜಕೀಯ ಚಿಂತಕ ಅಡಗೂರು ಹೆಚ್.ವಿಶ್ವನಾಥ್ ಅವರನ್ನು ಅದ್ದೂರಿಯಾಗಿ ಸನ್ಮಾನಿಸಲಾಗುವುದು ಎಂದರು.

ಅಂದು ಬೆಳಗ್ಗೆ ದೇವರಾಜ ಅರಸು ಪ್ರತಿಮೆ ಬಳಿ ತೆರಳಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ಅಲ್ಲಿಂದ ಹೊರಟು ಕಲ್ಪತರು ವೃತ್ತದಿಂದ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಅಂಬೇಡ್ಕರ್ ಭವನಕ್ಕೆ ಸಾಗಿ ಅಲ್ಲಿ ವೇದಿಕೆ ಕಾರ್ಯಕ್ರಮ ಮಾಡಲಾಗುವುದು.

ಕಾರ್ಯಕ್ರಮದಲ್ಲಿ ಅದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥ ಸ್ವಾಮೀಜಿ, ಕನಕ ಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಜೇವಿಯರ್ ಚರ್ಚ್‌ನ ಜಾರ್ಜ್ ಮಾರ್ಟಿನ್, ಮೌಲ್ವಿಗಳಾದ ಖಯಾಮುದ್ದೀನ್ ಅಗಮಿಸಲಿದ್ದು, ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಹೆಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ಡಾ.ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ನಗರಸಭಾ ಅಧ್ಯಕ್ಷ ಸಮೀನಾ ಪರ್ವಿನ್, ಹುಡಾ ಅಧ್ಯಕ್ಷ ಗಣೇಶ್‌ಕುಮಾರಸ್ವಾಮಿ, ಬಿಜೆಪಿ ತಾಲೂಕು ಅಧ್ಯಕ್ಷ ದೇವರಳ್ಳಿ ಸೋಮಶೇಖರ್, ಬಿಜೆಪಿ ಅಧ್ಯಕ್ಷ ನಾಗಣ್ಣಗೌಡ, ಕಾಂಗ್ರೆಸ್ ಅಧ್ಯಕ್ಷ ಕಲ್ಕುಣಿಕೆ ರಮೇಶ್ ಮತ್ತಿತರರು ಭಾಗವಹಿಸುವರು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ನಾಗರಾಜ್ ಮಲ್ಲಾಡಿ, ಹೆಚ್.ಎಂ. ಫಜಲುಲ್ಲಾ, ಮಾಜಿ ನಗರಸಭೆ ಮಾಜಿ ಅಧ್ಯಕ್ಷ ಶಿವಕುಮಾರ್ ಯುವ ಮುಖಂಡ ಲೋಕೇಶ್ ಉಪಸ್ಥಿತರಿದ್ದರು.

ಗಂಧನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಜಿ.ಕೆ. ಕುಮಾರ್

ಭೇರ್ಯ, ಮೇ 13–ಗಂಧನಹಳ್ಳಿ ಗ್ರಾಪಂ ಉಪಾಧ್ಯಕ್ಷ ಜಿ.ಕೆ.ಕುಮಾರ್ ಅವಿರೋಧವಾಗಿ ಆಯ್ಕೆಯಾದರು. ಈ ಹಿಂದೆ ಉಪಾಧ್ಯಕ್ಷರಾಗಿದ್ದ ಜಯರಾಮೇಗೌಡ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಿ.ಕೆ. ಕುಮಾರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಪೂರ್ಣಿಮಾ ಘೋಷಿಸಿದರು.



ನೂತನ ಉಪಾಧ್ಯಕ್ಷ ಜಿ.ಕೆ.ಕುಮಾರ್ ಅವರನ್ನು ಗ್ರಾಪಂ ಅಧ್ಯಕ್ಷೆ ರಾಜಮ್ಮ, ಪಿಡಿಓ ಚಂದ್ರಶೇಖರ್, ಸದಸ್ಯರಾದ ಭಾಗ್ಯ ಜ್ಯೋತಿ, ಜಿ.ಸಿ.ಸತೀಶ, ಅನಂತ್ ಕುಮಾರ್, ರುಕ್ಮಿಣಿ, ಮಾದೇವಿ ಲೋಕೇಶ್, ಸುಲೋಚನಮ್ಮ.ಜಿ.ಪಿ, ಜಿ.ಎಸ್. ಸಣ್ಣ ದೊಡ್ಡೇಗೌಡ, ಜಿ.ಎಸ್.ರಾಜೇಗೌಡ, ತಾರಾ, ಜಯರಾಮೇಗೌಡ, ಗಂಧನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಗಾಂಧಿಶಿವಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಫೋಟೋ ಓರೋಗೇಶ್, ಸಹಕಾರ ಸಂಘದ ನಿರ್ದೇಶಕರಾದ ಕೆಂಪೇಗೌಡ, ಹರೀಶ್, ಮಂಜು, ಗ್ರಂಥಾಲಯ ಮೇಲ್ವಿಚಾರಕ ಮಾದೇವ, ಸೇರಿದಂತೆ ಅನೇಕರು ಹಾರಹಾಕಿ ಅಭಿನಂದಿಸಿದರು.

15 ರಂದು ಗಟ್ಟವಾಡಿಯಲ್ಲಿ ಸುಬ್ರಹ್ಮಣ್ಯಸ್ವಾಮಿ ಮೂರ್ತಿ ಪ್ರತಿಷ್ಠಾಪನೆ

ನಂಜನಗೂಡು, ಮೇ 13–ದೇಶದಲ್ಲಿಯೇ ಅತಿ ಎತ್ತರದ ಸುಬ್ರಹ್ಮಣ್ಯಸ್ವಾಮಿಯ ಬೃಹತ್ ಏಕಶಿಲಾ ಮೂರ್ತಿ ತಾಲೂಕಿನ ಗಟ್ಟವಾಡಿ ಗ್ರಾಮದಲ್ಲಿ ಮೇ 15ರಂದು ಪ್ರತಿಷ್ಠಾಪನೆಗೊಳ್ಳಲಿದೆ ಎಂದು ತಪೋಭೂಮಿ ಟ್ರಸ್ಟ್ ಧರ್ಮಾಧಿಕಾರಿ ಸುಬ್ರಹ್ಮಣ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಸುಬ್ರಹ್ಮಣ್ಯೇಶ್ವರ ಕ್ಷೇತ್ರದಲ್ಲಿ ತಪೋಭೂಮಿ ಟ್ರಸ್ಟ್‌ನಿಂದ ನಿರ್ಮಾಣ ಕಾರ್ಯ ನಡೆಯುತ್ತಿದ್ದು, 18 ಅಡಿ ಎತ್ತರದ ಏಕಶಿಲಾ ಮೂರ್ತಿಯನ್ನು 36 ಅಡಿ ಎತ್ತರದಲ್ಲಿ ಪ್ರತಿಷ್ಠಾಪಿ ಸಲ್ಪಡುತ್ತಿದ್ದು, ಶ್ರೀ ಸ್ವಾಮಿಯ ಪರಿವಾರ ದೇವತೆಗಳಿಗಾಗಿ ಶ್ರೀ ಮೇರು ಸಹಿತ ರಾಜರಾಜೇಶ್ವರಿ, ಶ್ರೀ ಲಕ್ಷ್ಮಿನರಸಿಂಹ, ಪಂಚಮುಖಿ ಆಂಜನೇಯ ಹಾಗೂ ಏಕಾದಶ ಮುಖಗಳ ಈಶ್ವರನ ಸಾನ್ನಿಧ್ಯ ಒಳಗೊಂಡಿರಲಿದೆ ಎಂದರು. ಮೇ 13 ರಂದು ಶ್ರೀಮೇರು ಸಹಿತ ಶ್ರೀ ರಾಜರಾಜೇಶ್ವರಿ ಪ್ರತಿಷ್ಠಾಪನೆ, ಮೇ 15ರಂದು 18 ಅಡಿ ಎತ್ತರದ ಏಕಶಿಲಾ ವಿಗ್ರಹ ಪ್ರತಿಷ್ಠಾಪನೆ, ಮುಂಜಾನೆ 4 ರಿಂದ ಪೂಜೆ, ಹೋಮ ವಿಧಿವಿಧಾನಗಳು, ಬೆಳಗ್ಗೆ 8.30 ಕ್ಕೆ ಸಾರ್ವಜನಿಕರಿಂದ ದೇವರಿಗೆ ಪ್ರಥಮ ಕುಂಭಾಭಿಷೇಕ, ಬೆಳಗ್ಗೆ 9.30ಕ್ಕೆ ಶ್ರೀ ಸುಬ್ರಹ್ಮಣ್ಯ ಸಹಸ್ರಹೋಮ, 12.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ ಮತ್ತು ಮಹಾಪ್ರಸಾದ ವಿನಿಯೋಗ ಇರಲಿದೆ

ವೇದಾಧ್ಯಯನಕ್ಕೂ ಯೋಜನೆ

ಪ್ರಾಚೀನ ಸಾಹಿತ್ಯ, ಸಾಂಸ್ಕೃತಿಕ ಉಳಿವಿಗಾಗಿ ಸ್ಕಂದಾಶ್ರಮದಲ್ಲಿ ವೇದಾಧ್ಯಯನ, ಸಂಸ್ಕೃತ ಪಾಠಶಾಲೆ ಹಾಗೂ ಯೋಗ ಶಾಲೆ ಪ್ರಾರಂಭಿಸುವ ಸಂಕಲ್ಪವನ್ನು ಟ್ರಸ್ಟ್ ಹೊಂದಿದೆ. ಮುಂದೆ ಛತ್ರ ಸಂಕಲ್ಪಗಳ ಪರಿಹಾರಕ್ಕಾಗಿ ನಾಗ ಪ್ರತಿಷ್ಠಾಪನೆ, ಆಶ್ಲೇಷಬಲಿ ಪೂಜೆ, ಸರ್ಪ ಸಂಸ್ಕಾರ, ಸರ್ಪ ಹೋಮ, ಗ್ರಹ ಶಾಂತಿ, ನವಗ್ರಹ ಹೋಮ ನಡೆಯಲಿದೆ.

ಸುಮಾರು 8 ಎಕರೆಯಲ್ಲಿ 108x108 ಅಡಿ ವಿಸ್ತೀರ್ಣದ ದೇಗುಲ, ಕಲ್ಯಾಣಿ, ಗೋಶಾಲೆ, ದಾಸೋಹ ಭವನ ಇರಲಿದೆ. ವಿಶಾಲವಾದ ಕಲ್ಯಾಣಿ, ಸ್ಕಂದ ಗೋಶಾಲೆ ಪ್ರಾರಂಭಿಸಿ ಇಲ್ಲಿರುವ ಗೋವುಗಳಿಂದ ನಿತ್ಯ ಹಾಲು ಅಭಿಷೇಕಕ್ಕೆ ಬಳಸಲಾಗುವುದು. ಅಲ್ಲದೆ, ಷಷ್ಠಿಯಂದು ಸ್ಥಳೀಯ ಹಾಗೂ ಸುತ್ತಮುತ್ತಲ ಹಳ್ಳಿಗಳಿಂದ ಆಗಮಿಸುವ ಭಕ್ತರು, ಸಾರ್ವಜನಿಕರಿಗೆ ಉಚಿತವಾಗಿ ವೈದ್ಯ ಸೇವೆ ಒದಗಿಸುವ ಉದ್ದೇಶವನ್ನು ಟ್ರಸ್ಟ್ ಹೊಂದಿದ್ದು, ಇದಕ್ಕಾಗಿ ಸ್ಕಂದ ಚಿಕಿತ್ಸಾಲಯ ಪ್ರಾರಂಭಿಸಲಾಗಿದೆ. ಪ್ರತಿ ಮಂಗಳವಾರ ಹಾಗೂ ಪ್ರತಿ ಮಾಸದ ಶುದ್ಧ ಷಷ್ಠಿಯಂದು ಉಚಿತ ವೈದ್ಯ ತಪಾಸಣೆ ಆಯೋಜಿಸಲಾಗಿದೆ ಎಂದು ಸುಬ್ರಹ್ಮಣ್ಯ ಹೇಳಿದರು. ಟ್ರಸ್ಟ್ ಅಧ್ಯಕ್ಷೆ ರೂಪಾ ಸುಬ್ರಹ್ಮಣ್ಯ, ಉಪಾಧ್ಯಕ್ಷ ಹೆಸರಾಂತ ವೈದ್ಯರು, ಸಮಾಜಸೇವಕ ಡಾ.ಶ್ರೀಕಾಂತ್ ಇದ್ದರು.

ಶ್ರೀ ಲಕ್ಷ್ಮೀ ವರದರಾಜ ಸ್ವಾಮಿ ರಥೋತ್ಸವ



ಹೆಚ್.ಡಿ.ಕೋಟೆ, ಮೇ 13(ಮಂಜು)–ಪಟ್ಟಣದ ಪ್ರಸಿದ್ಧ ಶ್ರೀ ಲಕ್ಷ್ಮೀ ವರದರಾಜ ಸ್ವಾಮಿಯ 10ನೇ ವರ್ಷದ ಬ್ರಹ್ಮರಥೋತ್ಸವ ಸಂಭ್ರಮದಿಂದ ನಡೆಯಿತು.

ದೇವಸ್ಥಾನದ ರಾಜಗೋಪುರ ನಿರ್ಮಾಣದ ನಂತರ ಪ್ರಥಮವಾಗಿ ಜರುಗಿದ ಮಹಾರಥೋತ್ಸವವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಹೂ ಮತ್ತು ವಿವಿಧ ಬಣ್ಣ ಬಣ್ಣದ ಅಲಂಕೃತ ಬಟ್ಟೆಗಳು, ತಳಿರು ತೋರಣಗಳಿಂದ ಸಿಂಗರಿಸಿದ್ದ ರಥದ ಮಂಟಪದ ಮೇಲೆ ಶ್ರೀ ಲಕ್ಷ್ಮೀ ವರದರಾಜ ಸ್ವಾಮಿ, ಶ್ರೀದೇವಿ, ಭೂದೇವಿ ಉತ್ಸವ ಮೂರ್ತಿಗಳನ್ನು ಬುಧ ವಾರ ಬೆಳಗ್ಗೆ ಸಲ್ಲುವ ವೃಷಭ ಲಗ್ನದಲ್ಲಿ ಬೆಳಿಗ್ಗೆ 7.15ರಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ 10 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಪಟ್ಟಣದ ಮೊದಲ ಮುಖ್ಯ ರಸ್ತೆಯಿಂದ ಮಹಾತ್ಮಾ ಗಾಂಧಿ ವೃತ್ತದ ಮೂಲಕ 2ನೇ ಮುಖ್ಯ ರಸ್ತೆಯಲ್ಲಿ ಹಾದು ಮಧ್ಯಾಹ್ನ 1 ಗಂಟೆಗೆ ಬಂದು ಸ್ವಸ್ಥಾನ ಸೇರಿತು. ನಂತರ 2 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ರಥೋತ್ಸವದ ಅಂಗವಾಗಿ ಪಟ್ಟಣದ ವಿವಿಧ ಸಮಾಜಗಳಿಂದ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ವಿಶೇಷ ಪೂಜೆಗಳಾದ ಭೇರಿ ತಾಡನ, ತಿರುಪ್ಪಾವೈ, ಹಂಸವಾಹನೋತ್ಸವ, ಆದಿಶೇಷವಾಹನೋತ್ಸವ, ಸೂರ್ಯ ಮಂಡಲೋತ್ಸವ, ಚಂದ್ರಮಂಡಲೋತ್ಸವ, ತಿರುವೀದಿ ಉತ್ಸವ, ಪುಷ್ಪಮಂಟಪಾರೋಹಣ, ಗರುಡೋತ್ಸವ, ಪ್ರಹ್ಲಾದ ಪರಿಪಾಲನೆ, ಗಜವಾಹನೋತ್ಸವ, ಕಲ್ಯಾಣೋತ್ಸವಗಳನ್ನು ನೆರವೇರಿಸಲಾಯಿತು.

ರಥೋತ್ಸವದಲ್ಲಿ ಮುಖಂಡರಾದ ತಿರುಮಲಾಚಾರ್, ದೇವರಾಜು, ಗೀತಾ ರಾಮಕೃಷ್ಣ, ಬಿ.ಎಸ್.ಪಾರ್ಥಸಾರಥಿ, ವೆಂಕಟೇಶ್ ಪ್ರಸಾದ್, ವೈ.ಟಿ.ಮಹೇಶ್, ಸಿಎನ್. ನಾಗಣ್ಣ, ವೀರಪ್ಪ, ಪ.ನಾಗರಾಜ್, ಜಯಪ್ರಕಾಶ್ ಚಿಕ್ಕಣ್ಣ, ಹೆಚ್.ಸಿ.ಗುರುಸ್ವಾಮಿ, ಹೆಚ್.ಸಿ. ಮಂಜುನಾಥ್, ಪೂರ್ಣೇಶ್, ಜಯಂತ್, ಸತೀಶ್ ಬಿ.ಆರಾಧ್ಯ, ಶ್ರೀಕಾಂತ್, ಕನ್ನಡಪ್ರಮೋದ್, ವಿನಯ್ ಭಜರಂಗಿ, ಹೆಚ್.ಕೆ.ಪ್ರಕಾಶ್, ಇತರರು ಹಾಜರಿದ್ದರು.

ಬಿಜೆಪಿ ಬಲಗೊಳಿಸಲು ಮೈ.ವಿ.ರವಿಶಂಕರ್ ಬೆಂಬಲಿಸಿ



ತಿ. ನರಸೀಪುರ, ಏ 13(ಎಸ್‌ಕೆ)–ಭಾರತವನ್ನು ಸಶಕ್ತವಾಗಿ ಕಟ್ಟಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಾಪಿಸಿ, ಯುವಜನರಿಗೆ ಉಜ್ವಲ ಅವಕಾಶಗಳನ್ನು ಒದಗಿಸಿ ಕೊಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಮತ್ತಷ್ಟು ಬಲಿಷ್ಠಗೊಳಿಸಲು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಬೆಂಬಲಿಸುವಂತೆ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರುಹಟ್ಟಿ ಮಹಾದೇವಯ್ಯ ಮನವಿ ಮಾಡಿದರು.

ತಾಲೂಕಿನ ಮೂಗೂರು ಮಹಾಶಕ್ತಿ ಕೇಂದ್ರದ ವಾಟಾಳು ಗ್ರಾಪಂ ವ್ಯಾಪ್ತಿಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರವಿಶಂಕರ್ ಪರ ಬಿಜೆಪಿ ಕ್ಷೇತ್ರಾಧ್ಯಕ್ಷ ಡಾ.ಕೆ.ಸಿ.ಲೋಕೇಶ್ ಚಿಕ್ಕಮಾದನಾಯಕ ಅವರ ಸಮ್ಮುಖದಲ್ಲಿ ಗ್ರಾಮದ ಪದವೀಧರ ಮತದಾರರಲ್ಲಿ ಮತಯಾಚಿಸಿ ಮಾತನಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲೆಂದು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲಾಗಿದೆ. ಇದರಲ್ಲಿ ಭಾರತೀಯ ಸಂಸ್ಕೃತಿಯು ಅಡಕವಾಗಿದೆ. ಶೈಕ್ಷಣಿಕ ಕ್ರಾಂತಿಯಲ್ಲಿ ಪ್ರಾದೇಶಿಕ ಭಾಷೆಗಳಿಗೆ ಮಹತ್ವದ ಸ್ಥಾನವನ್ನು ನೀಡಲಾಗಿದೆ. ದಕ್ಷ ನೀತಿಗಳ ಮೂಲಕ ದೇಶವನ್ನು ಜಾಗತಿಕ ಉತ್ಪಾದನಾ ವಲಯವಾಗಿ ಪ್ರಧಾನಿ ಮೋದಿ ಅಭಿವೃದ್ಧಿಪಡಿಸುತ್ತಿದ್ದಾರೆ. ಅವರ ಅಭಿವೃದ್ಧಿ ಬೆಂಬಲಿಸಿ ಮತ್ತಷ್ಟು ಭಾರತವನ್ನು ಬಲಿಷ್ಠವಾಗಿಸಲು ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಮತದಾರರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಮಹದೇವಯ, ಮೂಗೂರು ಮಹಾಶಕ್ತಿಕೇಂದ್ರ ಅಧ್ಯಕ್ಷ ಅರವಿಂದ್, ಬಗರ್‌ಹುಕುಂ ಸಮಿತಿ ಸದಸ್ಯರಾದ ಕಾರ್ಯದರ್ಶಿ ಪ್ರದೀಪ್, ಬನ್ನಳ್ಳಿಹುಂಡಿ ಪ್ರಕಾಶ್, ಹಕ್ಕೂರು ಸಿದ್ದನಾಯಕ, ವಾಟಾಳು ನಾಗೇಶ್, ಮಹದೇವನಾಯಕ, ತಿರುಮಕೂಡಲು ವಾಸು ಇದ್ದರು.



ತಿ.ನರಸೀಪುರ ತಾಲೂಕಿನ ಬನ್ನೂರಿನಲ್ಲಿ ವೀರಶೈವ ಲಿಂಗಾಯತ ಸೇವಾ ಸಮಿತಿಯಿಂದ ವಿಶ್ವಗುರು ಬಸವಣ್ಣನವರ 889ನೇ ಜಯಂತಿ ಅಂಗವಾಗಿ ಅದ್ದೂರಿಯಾಗಿ ಬಸವಣ್ಣನವರ ಪ್ರತಿಮೆ ಮೆರವಣಿಗೆ ಮಾಡಲಾಯಿತು. ವೀರಶೈವ ಲಿಂಗಾಯತ ಸೇವಾ ಸಮಿತಿ ಅಧ್ಯಕ್ಷ ಎಂ.ಗುರುಸ್ವಾಮಿ, ಉಪಾಧ್ಯಕ್ಷ ಮಹದೇವಪ್ಪ, ಕಾರ್ಯದರ್ಶಿ ಶಿವಣ್ಣ, ಚಂದ್ರಶೇಖರ್, ಕುಮಾರ್, ಮಂಜು, ಮಹೇಶ್, ಮಾದಪ್ಪ, ರಾಘು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಳೆಹಾನಿ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಭೇಟಿ

ಹನಗೋಡು, ಮೇ 13(ಮಹೇಶ್)–ಹುಣಸೂರು ತಾಲೂಕಿನ ಕರ್ಣಕುಪ್ಪೆ ಹೆಮ್ಮಿಗೆ, ಹೆಮ್ಮಿಗೆ ಕಾಲೋನಿ, ದೇವರಾಜ್ ಕಾಲೋನಿಯ ಗ್ರಾಮದಲ್ಲಿ ಮಳೆಯಿಂದಾದ ಹಾನಿಯ ಪ್ರದೇಶಕ್ಕೆ ಶುಕ್ರವಾರ ಜಿಲ್ಲಾಧಿಕಾರಿ ಬಗಾದಿ ಗೌತಮ್ ಭೇಟಿ ನೀಡಿ, ಪರಿಶೀಲಿಸಿದರು



ಕರ್ಣಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಹಾನಿಗೊಳಗಾದ ಪ್ರದೇಶ ಗಳಿಗೆ ಶುಕ್ರವಾರ ಜಿಲ್ಲಾಧಿಕಾರಿ ಭೇಟಿ ನೀಡಿದರಲ್ಲದೆ, ಸಿಡಿಲಿಗೆ ಸಾವನ್ನಪ್ಪಿದ್ದ ಗಾಯತ್ರಮ್ಮ ಅವರ ಕುಟುಂಬದವರಿಗೆ 5 ಲಕ್ಷ ರೂ. ಪರಿಹಾರ ಚೆಕ್ ವಿತರಿಸಿ, ಸಾಂತ್ವನ ಹೇಳಿದರು. ನಂತರ ಹೆಮ್ಮಿಗೆ ಗ್ರಾಮದಲ್ಲಿ ಮೇಲೆ ಮರ ಬಿದ್ದು ಹಾನಿಯಾದ ದೊಡ್ಡಮ್ಮ ದೇವಸ್ಥಾನ ಪರಿಶೀಲಿಸಿ, ಶೀಘ್ರವೇ ಸರಿಪಡಿಸುವಂತೆ ತಹಸೀಲ್ದಾರ್‌ಗೆ ಸೂಚಿಸಿದರು. ನಂತರ ಸಂಪೂರ್ಣ ಹಾನಿಯಾದ ಮನೆಗಳನ್ನು, ಖುದ್ದು ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು.

ರಸ್ತೆಬದಿಯಲ್ಲಿ ಮರಗಳು ಅಪಾಯ ಕಾರಿ ಸ್ಥಿತಿಯಲ್ಲಿದ್ದು, ಗಾಳಿ ಮಳೆಗೆ ಮನೆಯ ಮೇಲೆ ಬಿದ್ದರೆ ಭಾರೀ ಹಾನಿಯಾಗುವ ಸಂಭವವಿದೆ. ಅಂತಹವುಗಳನ್ನು ಕೂಡಲೇ ತೆಗೆಯಿರಿ ಎಂದು ಹುಣಸೂರು ಡಿಸಿಎಫ್ ಅವರಿಗೆ ದೂರವಾಣಿ ಮೂಲಕ ನಿರ್ದೇಶನ ನೀಡಿದರು.

ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಮಳೆ ಹಾನಿ ಪರಿಹಾರ ನಿಧಿಯಡಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ವರ್ಣೀತ್ ನೇಗಿ, ತಹಸೀಲ್ದಾರ್ ಅಶೋಕ್, ಉಪತಹಸೀಲ್ದಾರ್ ಚೆಲುವರಾಜು, ರೇವಿನ್ಯೂ ಇನ್ಸ್‌ಪೆಕ್ಟರ್ ಪ್ರಶಾಂತ್ ರಾಜ್ ಅರಸ್ , ನಂದೀಶ್ ಗ್ರಾಮಲೆಕ್ಕಿಗರಾದ ಮಹಾದೇವ್ ಶಿವಕುಮಾರ್ ಇದ್ದರು.



ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ಅನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಉದ್ಘಾಟಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಅಲಮೇಲಮ್ಮ, ಗ್ರಾಪಂ ಸದಸ್ಯ ಮುರಳಿಗೌಡ, ರಾಜು, ಗ್ರಾಪಂ ಮಾಜಿ ಸದಸ್ಯ ಬಿ.ನಟರಾಜು, ರಾಜಶೇಖರ್, ಸುನಂದಾ ಮತ್ತಿತರರು ಹಾಜರಿದ್ದರು.

ತಿ.ನರಸೀಪುರದಲ್ಲಿ ಚಿರತೆ ದಾಳಿ; ಕುರಿ ಸಾವು

ಅರಣ್ಯ ಇಲಾಖೆಯ ನಿರ್ಲಕ್ಷ್ಯ, ದೂರು ನೀಡಿದರೂ ತಲೆ ಕೆಡಿಸಿಕೊಳ್ಳದ ಸಿಬ್ಬಂದಿ

ತಿ.ನರಸೀಪುರ, ಮೇ 13(ಎಸ್‌ಕೆ)–ಚಿರತೆಯೊಂದು ದಾಳಿ ನಡೆಸಿ ಕುರಿಯೊಂದನ್ನು ಸಾಯಿಸಿರುವ ಘಟನೆ ಇಂದು ಸಂಜೆ ತಾಲೂಕಿನ ಕಳ್ಳಿಪುರ ಗ್ರಾಮದ ಹೊರಹೊಲಯದಲ್ಲಿ ಸಂಭವಿಸಿದೆ.

ಇದರಿಂದ ಬಸವಣ್ಣ ಅವರಿಗೆ ಸೇರಿದ ಸುಮಾರು 20 ಸಾವಿರ ರೂ. ಬೆಲೆ ಬಾಳುವ ಕುರಿಸಾವನ್ನಪ್ಪಿದ್ದು, ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ತಿ.ನರಸೀಪುರದಿಂದ 10 ಕಿ.ಮೀ.ದೂರದಲ್ಲಿರುವ ಕಳ್ಳಿಪುರ ಗ್ರಾಮವು ಬೆಟ್ಟ–ಗುಡ್ಡಗಳಿಂದ ಸುತ್ತುವರೆದಿದ್ದು, ಚಿರತೆಗಳು ವಾಸವಾಗಿವೆ. ಆಗಾಗ ಚಿರತೆಗಳು ಬಂದು ದನ–ಕರುಗಳ ಮೇಲೆ ದಾಳಿ ನಡೆಸಿ ಕೊಂದು ಹಾಕಿ ಪರಾರಿಯಾಗಿತ್ತಿದ್ದವು. ಈ ಕುರಿತು ತಾಲೂಕು ರೈತ ಸಂಘದ ಅಧ್ಯಕ್ಷ ಮಹ



ದೇವಸ್ವಾಮಿ ಅವರು ಅರಣ್ಯ ಇಲಾಖೆ ದೂರು ನೀಡಿದ್ದರು.

ದೂರಿನ ಬಗ್ಗೆ ಅರಣ್ಯ ಇಲಾಖೆ ನಿರ್ಲಕ್ಷ್ಯ ತಾಳಿದ್ದರಿಂದ ಗ್ರಾಮಸ್ಥರು ಆಗಾಗ ಚಿರತೆಗಳು ಕಾಣಿಸಿದರೂ ವಿಧಿಯಿಲ್ಲದೆ ಎಚ್ಚರಿಕೆಯಿಂದ ವಾಸಿಸುತ್ತಿದ್ದರು ಎನ್ನಲಾಗಿದೆ. ಇಂದು ಬೆಳಗ್ಗೆ ಬಸವಣ್ಣನವರು ತಮ್ಮ 15 ರಾಸು ಕುರಿಗಳನ್ನೂ ಮೇಯಿಸಲು ಗ್ರಾಮದ ಹೊರವಲಯದಲ್ಲಿ ಬಿಟ್ಟಿದ್ದರು. ಆದರೆ ಸಂಜೆ ವೇಳೆಗೆ ಚಿರತೆ ದಾಳಿ ನಡೆಸಿ ಒಂದು ಕುರಿಯುನ್ನು ಸಾಯಿಸಿದ್ದು, ಉಳಿದ ಕುರಿಗಳು ಭಯಭೀತಿಯಿಂದ ಗ್ರಾಮಕ್ಕೆ ಓಡಿ ಬಂದಿವೆ ಎನ್ನಲಾಗಿದೆ.

ಇದರಿಂದ ಅನುಮಾನಗೊಂಡ ಬಸವಣ್ಣ ಮತ್ತು ಗ್ರಾಮಸ್ಥರು ಕುರಿಗಳು ಮೇಯಿಸುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ನೀಡಿದ್ದಾಗ ಚಿರತೆ ದಾಳಿಯಿಂದ ಸತ್ತು ಬಿದ್ದಿರುವ ಕುರಿಯನ್ನು ಕಂಡಿದ್ದಾರೆ. ಇದರಿಂದ ಗ್ರಾಮಸ್ಥರು ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಂಜಾಬ್ ಕಿಂಗ್ಸ್ ದಾಳಿಗೆ ನಲುಗಿದ ಆರ್‌ಸಿಬಿ

ಮುಂಬೈ, ಮೇ 13–ಬ್ಯಾರಿಸ್ಟೋ, ಲೀವಿಂಗ್ ಸ್ಟೋನ್ ಅವರ ಆಕರ್ಷಕ ಬ್ಯಾಟಿಂಗ್ ಮತ್ತು ಕಾಗಿಸೋ ರಬಾಡ, ರಿಷಿ ಧವನ್ ಹಾಗೂ ರಾಹುಲ್ ಚಹಾರ್ ಅವರ ಮಾರಕ ಬೌಲಿಂಗ್‌ನಿಂದ ಆರ್‌ಸಿಬಿ, ಪಂಜಾಬ್ ಕಿಂಗ್ಸ್ ವಿರುದ್ಧ 54 ರನ್ನುಗಳ ಸೋಲು ಅನುಭವಿಸಿತು.



ಪಂಜಾಬ್ ಕಿಂಗ್ಸ್ ತಂಡ 209 ರನ್ನುಗಳ ಮೊತ್ತವನ್ನು ಬೆನ್ನಟ್ಟಿದ ಆರ್‌ಸಿಬಿ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಮಾಡಿ ಸೋಲುಂಡಿತು. ತಂಡದ ಪರ ಮ್ಯಾಕ್ಸ್‌ವೆಲ್ ಬಿಟ್ಟರೆ ಉಳಿದವ ರ್‍ಯಾರೂ ಪಂಜಾಬ್ ಕಿಂಗ್ಸ್ ತಂಡದ ಬೌಲಿಂಗ್ ದಾಳಿಯನ್ನು ಎದುರಿಸಲಾಗಲಿಲ್ಲ. ಮ್ಯಾಕ್ಸ್‌ವೆಲ್ 22 ಎಸೆತಗಳಲ್ಲಿ 35 ರನ್ ಮಾಡಿದರು. ಉಳಿದಂತೆ ವಿರಾಟ್ ಕೊಹ್ಲಿ 20 ರನ್ ಮಾತ್ರ ಗಳಿಸಿದರು. ಡು ಪ್ಲೆಸಿಸ್ 10, ರಜತ್ ಪಟಿದರ್ 26, ದಿನೇಶ್ ಕಾರ್ತಿಕ್ 11, ಹರ್ಷಲ್ ಪಟೇಲ್ 11 ರನ್ ಮಾಡಿದರು. ಪಂಜಾಬ್ ಕಿಂಗ್ಸ್ ತಂಡದ ಪರ ಕಾಗಿಸೋ ರಬಾಡ ಮೂರು ವಿಕೆಟ್ ಪಡೆದರೆ, ರಿಷಿ ಧವನ್, ರಾಹುಲ್ ಚಹರ್ ತಲಾ ಎರಡೆರಡು ವಿಕೆಟ್ ಹಂಚಿಕೊಂಡರು. ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 209 ರನ್ ಮಾಡಿತು. ಬ್ಯಾರಿಸ್ಟೋ ಮತ್ತು ಲೀವಿಂಗ್ ಸ್ಟೋನ್ ಆರ್‌ಸಿಬಿ ಬೌಲಿಂಗ್ ಅನ್ನು ಮನಬಂದಂತೆ ಚಚ್ಚಿದರು. ಕೇವಲ 29 ಎಸೆತಗಳಲ್ಲಿ 7 ಸಿಕ್ಸರ್, 4 ಬೌಂಡರಿಗಳ ನೆರವಿನೊಂದಿಗೆ ಬ್ಯಾರಿಸ್ಟೋ 66 ರನ್ ಮಾಡಿ ಔಟಾದರು. 4 ಸಿಕ್ಸರ್, 5 ಬೌಂಡರಿಗಳ ನೆರವಿನೊಂದಿಗೆ 70(44 ಎಸೆತ) ರನ್ ಮಾಡಿದ ಲೀವಿಂಗ್ ಸ್ಟೋನ್ ಕೂಡ ನಿರ್ಗಮಿಸಿದರು.

ಕೆ.ಮಹದೇವಪ್ಪ ನಿಧನ



ಮಲ್ಕುಂಡಿ, ಮೇ 13(ಚನ್ನಪ್ಪ)–ನಂಜನಗೂಡು ತಾಲೂಕಿನ ಸಿಂಧುವಳ್ಳಿ ಗ್ರಾಮದ ನಿವಾಸಿ ಕೆ.ಮಹದೇವಪ್ಪ(85) ಅನಾರೋಗ್ಯದಿಂದ ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಜಿಪಂ ಮಾಜಿ ಸದಸ್ಯ ಹಾಗೂ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಕೆಂಪಣ್ಣ ಸೇರಿ ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮದಲ್ಲಿ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಯುಎಇ ಅಧ್ಯಕ್ಷ ಶೇಖ್ ಖಲೀಫಾ ಬಿನ್ ಜಾಯೆದ್ ನಿಧನ



ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್ ಅಧ್ಯಕ್ಷ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಶುಕ್ರವಾರ, ಮೇ 13 ರಂದು ನಿಧನರಾದರು ಎಂದು ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯ ಪ್ರಕಟಿಸಿದೆ. ಯುಎಇ ಅಧ್ಯಕ್ಷರಾದ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರ ನಿಧನದ ಬಗ್ಗೆ ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯವು ಯುಎಇ, ಅರಬ್ ಮತ್ತು ಇಸ್ಲಾಮಿಕ್ ರಾಷ್ಟ್ರ ಮತ್ತು ಪ್ರಪಂಚದ ಜನರೊಂದಿಗೆ ಸಂತಾಪ ವ್ಯಕ್ತಪಡಿಸುತ್ತದೆ ಎಂದು ವಾಮ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಶೇಖ್ ಖಲೀಫಾ ಅವರು ಯುಎಇ ಅಧ್ಯಕ್ಷರಾಗಿ ಮತ್ತು ಅಬುಧಾಬಿಯ ಆಡಳಿತಗಾರರಾಗಿ ನವೆಂಬರ್ 3, 2004 ರಿಂದ ಸೇವೆ ಸಲ್ಲಿಸಿದರು. ಯುಎಇ ಅಧ್ಯಕ್ಷ ಮತ್ತು ಅಬುಧಾಬಿಯ ಆಡಳಿತಗಾರ ಹಿಸ್ ಹೈನೆಸ್ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರ ನಿಧನಕ್ಕಾಗಿ ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯವು 40 ದಿನಗಳ ಶೋಕಾಚರಣೆಯನ್ನು ಘೋಷಿಸಿದೆ ಎಂದು ಖಲೀಜ್ ಟೈಮ್ಸ್ ವರದಿ ಮಾಡಿದೆ.

ಅವರು ತಮ್ಮ ತಂದೆಯ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದರು. ದಿವಂಗತ ಶೇಖ್ ಜಾಯೆದ್ ಬಿನ್ ಸುಲ್ತಾನ್ ಅಲ್ ನಹ್ಯಾನ್, ಅವರು 1971 ರಲ್ಲಿ ಒಕ್ಕೂಟದಿಂದ ಯುಎಇಯ ಮೊದಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, 2004ರ ನ.2 ರಂದು ನಿಧನರಾಗಿದ್ದರು. ಧ್ವಜಗಳನ್ನು ಅರ್ಧಕ್ಕೆ ಹಾರಿಸಲಾಗುತ್ತದೆ ಮತ್ತು ಸಚಿವಾಲಯಗಳು, ಇಲಾಖೆಗಳು, ಫೆಡರಲ್ ಮತ್ತು ಸ್ಥಳೀಯ ಸಂಸ್ಥೆಗಳು ಇಂದಿನಿಂದ ಕೆಲಸವನ್ನು ಸ್ಥಗಿತಗೊಳಿಸುತ್ತವೆ ಎನ್ನಲಾಗಿದೆ.

PUBLIC NOTICE

Notice is hereby issued to the general public that M/S FLAIR GARMENTS PRIVATE LIMITED, a company incorporated under the companies Act 1956 having its registered office at Sy. No. 65-71 and 183 of Adakanahalli Village, Thandya Industrial Area, Thandavapura, Nanjangud Taluk, Mysuru District represented by its Managing Director Smt. Mohanashree W/O. Late. N. G.Srinivasan and confirming party M/S Dhanlaxmi Bank Limited, banking company governed by the provisions of Banking Regulation Act, having its registered office at Dhanalakshmi Buildings, Naikkanal, Kerala and one at No.318, Sri Muthu Plaza, Avinasi Road, Tirupur — 641602 have agreed to sell the Schedule Property to my client/s. Any person/s asserting any right, title, interest or claim, pending litigation or demand of any nature in or upon the schedule property or any part there of, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570001 within SEVEN (07) days from the date of this Public Notice, failing which such claim/s shall be considered to have been waived and/or given up and myclient/s shall be entitled to complete the sale transaction that there are noclaims of whatsoever nature with respect of the schedule property.

SCHEDULE 'A' PROPERTY: ALL THAT PIECE AND PARCEL OF INDUSTRIAL LAND KNOWN AS BEARING SY.NO'S 65/1, 65/2, 66/1, 66/2, 66/3, 67/1, 67/2, 67/3, 67/4, 67/5, 68/1, 68/2, 68/3, 69/1, 69/2, 69/3, 70/1, 70/2, 71/1, 71/2, 71/3, 129P, 130P, 75P & 183, SITUATED AT THANDYA INDUSTRIAL AREA, ADAKANAHALLI VILLAGE, CHIKKAINAHNACHATRA HOBLI, NANJANGUD TALUK, MYSURU DISTRICT CONTAINING BY AD MEASUREMENT-39.93 ACRES & BOUNDED ON: EAST BY KIADB PROPERTY. WEST BY KIADB ROAD. NORTH BY : ROAD & NALA. SOUTH BY : ROAD & NALA.

SCHEDULE 'B' PROPERTY: ALL THAT PIECE AND PARCEL OF THE PORTION OF THE INDUSTRIAL PLOT :PROPERTY SY NO. 65-71 THE RURAL DEVELOPMENT AND PANCHAYATI RAJ DEPARTMENT HAS ISSUED FORM NO. 09 AND 11 A VIDE UNIQUE No.152200503103020278 WHEREIN THE PROPERTY NO. HAS BEEN MENTIONED AS 345/14 340/14, SITUATED AT SITUATED AT THANDYA INDUSTRIAL AREA, ADAKANAHALLI VILLAGE, CHIKKKAINAHNA CHATRA HOBLI, NANJANGUD TALUK, MYSURU DISTRICT (WITHIN THE LIMITS OF THANDAVAPURA GRAMA PANCHAYAT] ADMEASURING 9942.3620 SQUARE METERS & BOUNDED ON

EAST BY: KIADB PROPERTY. WEST BY: MAIN ROAD. NORTH BY : FLAIR GARMENTS REMAINING PROPERTY. SOUTH BY : FLAIR GARMENTS REMAINING PROPERTY.

Sd/- M.SANJAY JAIN , B.B.M., L.L.B CCL,, CMJFS
Advocate,#L-50/2A, 1st Floor, Ashoka Road, Mysuru-570001
E-mail:msj186@yahoo.co.in,
cell:9341464636

Place : Mysuru,
Date : 13/05/2022

DOCUMENTS LOST

The Original Partition Deed registered before the Joint Sub-Registrar, Kotagiri, Tamil Nadu dated 23.03.1984 in Registered No.311 of 1984 Book 1 Volume 32 pages 289 to 293 bearing S.No.412 (old S.No.298/1-294/1-295-291, 293-292, Buchanan Estate, Konavakari Village, Kotagiri, The Nilgiris-643 217 of my Client residing at # 8/A, Mahajana High School Road, Jayalakshmipuram, Mysore 570 012 has been lost.

If found please contact

R. Ravi, B.Sc., LL.B.,
Kar. No.172/1998,
Advocate & Legal Consultant,
#181, Sharada Devi Nagar (North), Bogadi 1st Stage,
Mysore 570 022. Karnataka.
(M) 9845671914.
(L) 0821-2547797.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ: ಕರಾಸಾ/ಚಾನವಿ/ಸಂ/ವಾ/294/2022–23 ದಿನಾಂಕ: 13.05.2022

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ : 01/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ. ನರಸೀಪುರ, ಗುಂಡ್ಲುಪೇಟೆ, ಹುಲ್ಲಹಳ್ಳಿ, ಸುತ್ತೂರು, ನಂಜನಗೂಡು ನೂತನ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ ಜನರಲ್ ಸ್ಟಾಲ್ ನಡೆಸಲು ಹಾಗೂ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್/ಸಂಧಾನ ಪ್ರಕಟಣೆ ಸಂ. 01/2022–23 ದಿನಾಂಕ: 13.05.2022 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ 'ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ' ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ ಮತ್ತು ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1) ಸಂಧಾನ ಅರ್ಜಿ ಪಡೆಯಲು ಕಡೆಯ ದಿನಾಂಕ: 25.05.2022, ಸಮಯ: ಕಛೇರಿ ಅವಧಿ. 2) ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸ್ವೀಕರಿಸಲು ಕಡೆಯ ದಿನಾಂಕ: 25.05.2022, ಸಮಯ: ಕಛೇರಿ ಅವಧಿ. 3) ಸಂಧಾನ ಸಭೆಯ ದಿನಾಂಕ: 26.05.2022, ಸಮಯ: ಮಧ್ಯಾಹ್ನ 12.30 ಗಂಟೆಗೆ.

1) ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ ಡಿ.ಡಿ ಸಲ್ಲಿಸಲು ಕಡೆಯ ದಿನಾಂಕ: 31.05.2022, ಸಮಯ: ಕಛೇರಿ ಅವಧಿ. 2) ಇ–ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 31.05.2022, ಸಮಯ: ಕಛೇರಿ ಅವಧಿ. 3) ಇ–ಟೆಂಡರ್ ತೆರೆಯುವ ದಿನಾಂಕ: 02.06.2022, ಸಮಯ: ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ) ಇವರನ್ನು ಸಂಪರ್ಕಿಸಲು ಕೋರಲಾಗಿದೆ. ದೂ: 7760990302, 77609903110.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾ ನಿಗಮ, ಚಾಮರಾಜನಗರ ವಿಭಾಗ

ವಾ.ಸಾ.ಸಂ.ಇ/ವಾಪ್ರ/504/ಅಜಾರ್/22–23

ಕೋವಿಡ್–19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ